ಲಂಕೇಶ್


ಫೆಬ್ರವರಿ 3, 2010 ರೂ. 12/-



ಸಿನಿಮಾ ಸಂತ



ರಕೆಯ ಕುರಿ



ಹಣ, ಹೆಂಡಿರು ತಂದ

ಬಿಕ್ಕಟ್ಟು



ಹ್ಯೂಮನ್ ರೈಟ್ಸ್ ವಂಚಕ ವಿವೇಕಾನಂದ

ಎದ್ದು ನಿಂತ ಶಿವರಾಮ್-ಜಿದ್ದು ಬಿಟ್ಟ ಸೀತಾರಾಮ್!



ಬೆಳಗದ 'ಜ್ಯೋತಿ'

ಮಂಡ್ಯ: ರಫೀವುಲ್ಲಾ ಕೊಲೆ ಹಿಂದೆ ಜಪ್ರುಲ್ಲಾ ಖಾನ್

ಆಸ್ನೋಟಿಕರ್ ಮಾವನ ಕಿತಾಪತಿ


‘ಆಪರೇಷನ್ ಗ್ರೀನ್‌ಹಂಟ್’ನ ಮೊದಲ ಬಲಿ


ಗಾಂಧೀವಾದಿ ಹಿಮಾಂಶುಕುಮಾರ್ ಮತ್ತು ಗಾಂಧೀವಾದಿ ಪ್ರತಿರೋಧ



“ನಾನು ಇನ್ನೂ ಛತ್ತೀಸ್‌ಘಡ್‌ನಲ್ಲೇ ಉಳಿದುಕೊಂಡಿದ್ದರೆ ಯಾವ ಆದಿವಾಸಿಗಳ ಒಳಿತಿಗಾಗಿ ನಾನು ಹೋರಾಡುತ್ತಿರುವೆನೋ ಆ ಆದಿವಾಸಿಗಳಿಗೆ ಪ್ರಭುತ್ವ ಇನ್ನೂ ಹೆಚ್ಚಿನ ಕಿರುಕುಳವನ್ನು ಕೊಡುವ ಸಾಧ್ಯತೆ ಇತ್ತು. ಅಲ್ಲದೆ ನನ್ನ ಜೊತೆ ಕೆಲಸ ಮಾಡುತ್ತಿದ್ದ ಪ್ರತಿಯೊಬ್ಬ ಕಾರ್ಯಕರ್ತರ ಮೇಲೂ ಇಲ್ಲಸಲ್ಲದ ಸುಳ್ಳು ಕೇಸುಗಳನ್ನು ಹಾಕಿ ಈಗಾಗಲೇ ಒಳಗೆ ತಳ್ಳಿದ್ದಾರೆ. ಪೊಲೀಸ್ ದೌರ್ಜನ್ಯಕ್ಕೆ ಗುರಿಯಾದ ಆದಿವಾಸಿಗಳ ಪರವಾಗಿ ನಾನು ಹೋರಾಡುತ್ತಿದ್ದರೆ ಅವರಿಗೆ ಇನ್ನಷ್ಟು ಚಿತ್ರಹಿಂಸೆ ನೀಡಿ ಅವರೇ ನನ್ನ ಮೇಲೆ ಸುಳ್ಳು ಕೇಸುಗಳು ಹಾಕುವಂತೆ ಅಥವಾ ನನ್ನ ಬಲವಂತಕ್ಕೆ ಮಣಿದು ಅವರು ಪೊಲೀಸರ ವಿರುದ್ಧ ಕೇಸು ದಾಖಲಿಸಿದ ರೆಂಬಂತೆ ಹೇಳಿಕೆಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಆ ರೀತಿ ಹೇಳಿಕೆ ಕೊಡಲು ಅವರು ನಿರಾಕರಿಸಿದರೆ ಅವರಿಗೆ ಮತ್ತು ಅವರ ಬಂಧುವರ್ಗದವರಿಗೆ ಇನ್ನಿಲ್ಲದ ಚಿತ್ರಹಿಂಸೆ ಕೊಡುತ್ತಿದ್ದಾರೆ. ಹೊರಗಿನಿಂದ ಬೆಂಬಲ ಕೊಡುವ ನಿಮ್ಮಂಥವರನ್ನು ಛತ್ತೀಸ್‌ಘಡದ ಒಳಗೂ ಬಿಟ್ಟುಕೊಳ್ಳುತ್ತಿಲ್ಲ. ಇಂಥಾ ಸಂದರ್ಭದಲ್ಲಿ ನಾನು ಅಲ್ಲೇ ಉಳಿದು ಪ್ರಭುತ್ವ ಆದಿವಾಸಿಗಳಿಗೆ ಇನ್ನಷ್ಟು ಕಿರುಕುಳ ಕೊಡಲು ಕಾರಣವಾಗುವ ಬದಲು ಅಥವಾ ನಾನೇ ವಿನಾಕಾರಣವಾಗಿ ಹಾಗೂ ವ್ಯರ್ಥವಾಗಿ ಜೈಲಿನಲ್ಲಿ ಕೊಳೆಯುವ ಬದಲು ಹೊರಗಡೆ ಬಂದು ಆದಿವಾಸಿಗಳ ಹೋರಾಟಕ್ಕೆ ಸಾಧ್ಯವಾದಷ್ಟು ನಾಗರಿಕ ಸಮಾಜದ ಸಹಾನುಭೂತಿ ಸೃಷ್ಟಿಸುವ ಕೆಲಸಗಳಲ್ಲಿ ತೊಡಗಬೇಕೆಂದು ನಿರ್ಧರಿಸಿದ್ದೇನೆ. ಈ ಒತ್ತಡದಿಂದ ಅಲ್ಲಿ ಮತ್ತೆ ನಾನು ಕೆಲಸ ಮಾಡುವ ಪರಿಸ್ಥಿತಿ ಸೃಷ್ಟಿಯಾಗಬಹುದೆಂದು ನಿರೀಕ್ಷಿಸುತ್ತಿದ್ದೇನೆ. ಆಗ ಮತ್ತೆ ಅಲ್ಲಿಗೆ ಮರಳುತ್ತೇನೆ. ಇದಲ್ಲದೆ ನಾನು ಬೇರಿನ್ನೇನು ಮಾಡಲು ಸಾಧ್ಯವಿದೆ ನೀವೇ ಹೇಳಿ?”

ಹೀಗೆಂದು ಹೇಳುತ್ತಾ ಛತ್ತೀಸ್‌ಘಡದ ಪ್ರಖ್ಯಾತ ಗಾಂಧೀವಾದಿ ಹಿಮಾಂಶುಕುಮಾರ್ ಮಾತು ಮುಗಿಸುತ್ತಿದ್ದಂತೆ ಅವರು ಕೇಳಿದ ಪ್ರಶ್ನೆಗೆ ಯಾವ ಉತ್ತರವನ್ನೂ ನೀಡಲಾಗದ ಸಭೆ ನಿರುತ್ತರವಾಗಿ ಕುಳಿತುಬಿಟ್ಟಿತು. ಹಿಮಾಂಶುಕುಮಾರ್ ಅವರು ಛತ್ತೀಸ್‌ಘಡದಲ್ಲಿ ಆದಿವಾಸಿಗಳ ಸಂಕ್ಷೇಮಕ್ಕಾಗಿ ಕಳೆದ ಎಂಟು ವರ್ಷಗಳಿಂದ ಸತತವಾಗಿ ಶ್ರಮಿಸುತ್ತಿರುವ





ನಿಷ್ಠಾವಂತ ಗಾಂಧೀವಾದಿ. ಆದಿವಾಸಿಗಳ ಆರೋಗ್ಯ, ಶಿಕ್ಷಣ, ನೈರ್ಮಲ್ಯ ಇನ್ನಿತ್ಯಾದಿ ಕಾರ್ಯಕ್ರಮಗಳನ್ನು ತನ್ನ ‘ವನವಾಸಿ ಚೇತನ ಆಶ್ರಮ’ದ ವತಿಯಿಂದ ನಡೆಸುತ್ತಿದ್ದ ಹಿಮಾಂಶುಕುಮಾರ್‌ರವರು ಸರ್ಕಾರ ಅನುಮಾನಿಸಬಹುದಾದ ಯಾವುದೇ ಕೆಲಸಗಳಲ್ಲೂ ತೊಡಗಿರಲಿಲ್ಲ. ಆ ಪ್ರಾಂತ್ಯದಲ್ಲಿ ನಕ್ಸಲರ ನೇತೃತ್ವದಲ್ಲಿ ಆದಿವಾಸಿಗಳು ತಮ್ಮ ಘನತೆಯ ಬದುಕಿಗಾಗಿ ಸಶಸ್ತ್ರ ಹೋರಾಟವನ್ನೂ ನಡೆಸುತ್ತಿದ್ದಾರೆ. ಹೀಗಾಗಿ ಸರ್ಕಾರದ ಸಶಸ್ತ್ರ ಪಡೆಗಳಿಗೂ ಮತ್ತು ನಕ್ಸಲರಿಗೂ ಹಲವಾರು ಬಾರಿ ಮುಖಾಮುಖಿಯಾಗುತ್ತದೆ. ಅಲ್ಲದೆ ಸರ್ಕಾರವೇ ಆದಿವಾಸಿಗಳಲ್ಲಿ ಪುಂಡರಾದ ಕೆಲವರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ‘ಸಾಲ್ವಾ ಜುಡುಂ’ ಹೆಸರಿನ ಸಂಘ ಕಟ್ಟಿ ನಕ್ಸಲರನ್ನು ಬೆಂಬಲಿಸುವ ಆದಿವಾಸಿಗಳನ್ನು ಬೇಟೆಯಾಡಲು ಕುಮ್ಮಕ್ಕು ನೀಡುತ್ತಿದೆ. ಇದನ್ನು ಸುಪ್ರೀಂಕೋರ್ಟೇ ಖಂಡಿಸಿದರೂ ಅದು ಬೇರೇ ಹೆಸರಿನಲ್ಲಿ ಮುಂದುವರೆಯುತ್ತಲೇ ಇದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಛತ್ತೀಸ್‌ಘಡದಲ್ಲಿರುವ ಅಪಾರ ಖನಿಜ ನಿಕ್ಷೇಪಗಳನ್ನು ಸೂರೆಹೊಡೆಯಲು ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ 1,50,000 ಕೋಟಿ ರೂ.ಗಳಷ್ಟು ಮೊತ್ತದ ಒಡಂಬಡಿಕೆ ಮಾಡಿಕೊಂಡ ಮೇಲೆ ಅಲ್ಲಿರುವ ಆದಿವಾಸಿಗಳನ್ನು ಮತ್ತು ಅವರಿಗೆ ಬೆಂಬಲವಾಗಿರುವ ನಕ್ಸಲರನ್ನು ಛತ್ತೀಸ್‌ಘಡದಿಂದ ಬಲವಂತದಿಂದ ಹೊರಹಾಕುವುದು ಅತ್ಯಗತ್ಯವಾಗಿತ್ತು. ಆಗ ಹುಟ್ಟಿಕೊಂಡಿದ್ದೇ ಈ ‘ಆಪರೇಷನ್ ಗ್ರೀನ್‌ಹಂಟ್’. ಮೇಲ್ನೋಟಕ್ಕೆ ಈ ಆಪರೇಷನ್ ಸರ್ಕಾರದ ವಿರುದ್ಧ ಸಶಸ್ತ್ರ ಹೋರಾಟ ನಡೆಸುತ್ತಿರುವ ನಕ್ಸಲರನ್ನು ಸದೆಬಡಿಯುವ ಉದ್ದೇಶವನ್ನು ಹೊಂದಿದ್ದರೂ ಅದರ ಪ್ರಧಾನ ಉದ್ದೇಶ ಈ ಕಾಡಿನಲ್ಲಿ ವಾಸವಾಗಿರುವ ಆದಿವಾಸಿಗಳನ್ನು ಎತ್ತಂಗಡಿ ಮಾಡಿ ಬಹುರಾಷ್ಟ್ರೀಯ ಕಂಪನಿಗಳ ಲೂಟಿಗೆ ತೆರವು ಮಾಡಿಕೊಡುವುದೇ ಆಗಿದೆ. ಆದರೆ ಇಲ್ಲಿ ಆದಿವಾಸಿಗಳ ಬೆಂಬಲಕ್ಕೆ ನಕ್ಸಲರು ಇರುವುದರಿಂದ ಮತ್ತು ಅವರು ಎತ್ತಂಗಡಿ ಮಾಡಲು ಬರುವ ಪೊಲೀಸರೊಂದಿಗೆ ಸಶಸ್ತ್ರ ಮುಖಾಮುಖಿಗೂ ಸಿದ್ಧವಿರುವುದರಿಂದ ಇಲ್ಲಿ ಆದಿವಾಸಿಗಳ ಎತ್ತಂಗಡಿ ಅಷ್ಟು ಸುಲಭವಲ್ಲ.

ಇದು ಸರ್ಕಾರಕ್ಕೆ ಸ್ಪಷ್ಟವಾಗಿ ಗೊತ್ತಿದೆ. ಆದಿವಾಸಿಗಳ ಎತ್ತಂಗಡಿ ಮಾಡಬೇಕೆಂದರೆ ಆದಿವಾಸಿಗಳಲ್ಲಿ ಇಲ್ಲಿ ಬದುಕಲು ಸಾಧ್ಯವಿಲ್ಲವೆಂಬ ಭೀತಿ ಮೂಡಿಸಬೇಕು. ಮಾವೋವಾದಿಗಳ ದಮನದ ಹೆಸರಲ್ಲಿ ಕಂಡುಕೇಳರಿಯದ ರಕ್ತಪಾತ ಸೃಷ್ಟಿಸಿ ಆದಿವಾಸಿಗಳ ಮೇಲೆ ‘ಭಯೋತ್ಪಾದನೆ’ ಮಾಡಿ ಅವರನ್ನು ಹೊರಗಟ್ಟಬೇಕು. ಆದರೆ ಪೊಲೀಸರು ಆ ರೀತಿ ಮಾಡದಂತೆ ನಮ್ಮ ಕೆಲವು ಕಾನೂನೂಕಟ್ಟಳೆಗಳು ತಡೆಯುತ್ತವೆ. ಗಾಂಧೀವಾದಿ ಹಿಮಾಂಶುಕುಮಾರ್ ರಂತವರು ನಕ್ಸಲರಲ್ಲವಾದರೂ ಈ ದೇಶದ ಕಾನೂನುಗಳನ್ನು ಸರ್ಕಾರವೇ ಉಲ್ಲಂಘಿಸುವುದರ ವಿರುದ್ಧ ಹೋರಾಡುತ್ತಾರೆ. ಅಲ್ಲದೆ ಆದಿವಾಸಿಗಳು ಈ ದೇಶದ ಪ್ರಜೆಗಳೇ ಆಗಿರುವುದರಿಂದ ಪರದೇಶಿ ಕಂಪನಿಗಳ ಹಿತಾಸಕ್ತಿಗಾಗಿ ಈ ದೇಶದ ಜನತೆಯ ಎತ್ತಂಗಡಿಯ ವಿರುದ್ಧ ನೈತಿಕ ಮತ್ತು ಸಾತ್ವಿಕ ಆಕ್ರೋಶದ ನೆಲೆಯಿಂದ ಹೋರಾಡುತ್ತಾರೆ.

ಹಿಮಾಂಶುಕುಮಾರ್‌ರವರೂ ಮಾಡಿದ್ದು ಇದನ್ನೇ! ನಕ್ಸಲರು ಮಾಡುತ್ತಿರುವುದು ಇದನ್ನೇ. ಆದರೆ ಈ ಪ್ರಭುತ್ವ ಆದಿವಾಸಿಗಳ ಜೊತೆ ಮಾತನಾಡುವುದೇ ಗುಂಡಿನ ಭಾಷೆಯಲ್ಲಿ, ಆದ್ದರಿಂದ ಅವರೂ ಗುಂಡಿನಿಂದಲೇ ಮಾತಾಡುತ್ತಾರೆ. ಹೀಗಾಗಿ ಅವರ ವಿರುದ್ಧ ಸರ್ಕಾರ ಯುದ್ಧ ಸಾರುವುದು ಸುಲಭ. ಏಕೆಂದರೆ ಮಾವೋವಾದಿಗಳು ಬಂದೂಕು ಬಳಸುತ್ತಾರೆ ಎಂಬ ಏಕೈಕ ಕಾರಣದಿಂದ ‘ಭಯೋತ್ಪಾದಕರು’ ಎಂದು ಕರೆದು ಅವರ ಮೇಲಿನ

▶▶ 14

ನೋ ಕಾಮೆಂಟ್ಸ್

“ದಲಿತರ ಸ್ಥಿತಿ ಇಂದು ವಿಷದ ಹಣ್ಣು ತಿನ್ನಲು ಹೊರಟ ಗಂಡಭೇರುಂಡದಂತಿದೆ. ಇದರ ಎರಡು ತಲೆಗಳಲ್ಲಿ ಯಾವುದೇ ತಲೆ, ಅದು ಹೊಲೆಯರದಿರಲಿ ಅಥವಾ ಮಾದಿಗರದಿರಲಿ, ಮೊದಲು ಹಣ್ಣು ತಿಂದರೂ ಇರುವ ಒಂದು ದೇಹ ನಾಶವಾಗುವುದಂತೂ ಖಂಡಿತಾ.”

- ಕೆ.ಬಿ.ಸಿದ್ದಯ್ಯ

“ಸೂರ್ಯನಿಗೋ, ಚಂದ್ರನಿಗೋ ಗ್ರಹಣ ಹಿಡಿದರೆ ಅದನ್ನು ಯಾರೂ ಬಿಡಿಸಬೇಕಿಲ್ಲ, ಒಂದೆರಡು ಗಂಟೆಗಳಲ್ಲಿ ಅದು ತನ್ನಷ್ಟಕ್ಕೆ ತಾನೇ ಬಿಟ್ಟು ಹೋಗುತ್ತದೆ. ಅದು ಅಸಹಜವೂ ಅಲ್ಲ, ಅಪಾಯಕಾರಿಯೂ ಅಲ್ಲ. ಆದರೆ ಮನುಷ್ಯನ ಮನಸ್ಸಿಗೆ ಗ್ರಹಣ ಹಿಡಿದುಬಿಟ್ಟರೆ ಅದು ಅಸಹಜ ಮಾತ್ರವಲ್ಲ, ಅಪಾಯಕಾರಿ ಕೂಡಾ ಹೌದು.”

- ಡಾ.ರಾಜೇಂದ್ರ ಬುರಡಿಕಟ್ಟಿ, ವಾಚಕರ ವಾಣಿಯಲ್ಲಿ

“ಬಿಜೆಪಿ ಪಕ್ಷದಲ್ಲಿ ಸಮನ್ವಯ ಮೂಡಿಸಲು ರಚಿಸಲಾದ ಬಿಜೆಪಿ ಕೋರ್ ಕಮಿಟಿಯಲ್ಲೇ ಸಮನ್ವಯದ ಸಮಸ್ಯೆ ಎದುರಾಗಿದೆ. ಸಮಿತಿ ರಚನೆಯಾಗಿ ಎರಡು ತಿಂಗಳು ಕಳೆದರೂ ಒಮ್ಮೆಯೂ ಸಮನ್ವಯ ಸಮಿತಿಯ ಸಭೆ ಕರೆಯಲಾಗಿಲ್ಲ.”

- ವರದಿ

“ಅಮರ್ ಸಿಂಗ್ ವಿಷಯಕ್ಕೆ ಬರುವುದಾದರೆ ಎಲ್ಲಾ ಮಾಧ್ಯಮ ಸಂಸ್ಥೆಗಳು ಅವರ ನಡೆ ನಿಲುವುಗಳ ಬಗ್ಗೆ ಏನೂ ವಿಮರ್ಶೆ ಮಾಡದೆ ಬಾಯಿ ಬಂದ್ ಮಾಡಿಕೊಳ್ಳುತ್ತವೆ.”

- ಅಶೋಕ್ ಮಲಿಕ್, ತೆಹೆಲ್ಕಾದಲ್ಲಿ

“ಸರ್ಕಾರವು ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಲು ತಂದಿರುವ ಮಸೂದೆ ವಾಸ್ತವದಲ್ಲಿ ಸಮಾಜದಲ್ಲಿ ಶಿಕ್ಷಣವನ್ನು ಹಕ್ಕನ್ನಾಗಿ ಮಾಡುವ ಬದಲು ಈಗಿರುವ ಶಿಕ್ಷಣ ಶ್ರೇಣೀಕರಣವನ್ನು ಇನ್ನಷ್ಟು ಕಾನೂನುಬದ್ಧಗೊಳಿಸುತ್ತದೆ. ಈ ಮಸೂದೆಯಿಂದಾಗಿ ಸಮಾಜದಲ್ಲಿ ಏಳು ಬಗೆಯ ಶಿಕ್ಷಣ ವರ್ಗಗಳು ಹುಟ್ಟಿಕೊಳ್ಳುತ್ತವೆ.

1. ಸಮಾಜದ ಅತ್ಯಂತ ಶ್ರೀಮಂತರಿಗಾಗಿ ICGSE ಎಂಬ ಅಂತರರಾಷ್ಟ್ರೀಯ ಶಿಕ್ಷಣ ಪದ್ಧತಿ
2. ಮೇಲ್‌ಮಧ್ಯಮ ವರ್ಗದವರಿಗಾಗಿ CBSE ಎಂಬ ರಾಷ್ಟ್ರೀಯ ಶಿಕ್ಷಣ ಪದ್ಧತಿ
3. ರಾಜ್ಯದ ನಗರ ಪಟ್ಟಣಗಳ ಪ್ರತಿಷ್ಠಿತ ಮಧ್ಯಮ ವರ್ಗಕ್ಕಾಗಿ ICSE ಎಂಬ ರಾಷ್ಟ್ರೀಯ ಮಟ್ಟದ ಶಿಕ್ಷಣ ಪದ್ಧತಿ
4. ಸಮಾಜದ ನಡು ಮಧ್ಯಮ ವರ್ಗಗಳಿಗಾಗಿ ಖಾಸಗಿ ಶಾಲೆಗಳು
5. ಕೆಳಮಧ್ಯಮ ವರ್ಗದವರಿಗಾಗಿ ಸರ್ಕಾರಿ ಅನುದಾನಿತ ಶಾಲೆಗಳು
6. ಬಡವರ್ಗದವರಿಗೆ ಸರ್ಕಾರಿ ಶಾಲೆಗಳು
7. ಅತ್ಯಂತ ಬಡವರು ಮತ್ತು ನಿರ್ಗತಿಕರಿಗಾಗಿ ಸರ್ವ ಶಿಕ್ಷಣ ಅಭಿಯಾನದ ಶಾಲೆಗಳು.

ಈಗ ಮುಂದಿಡಲಾಗಿರುವ ಮಸೂದೆಯಂತೆ ಶಿಕ್ಷಣ ಮೂಲಭೂತ ಹಕ್ಕಾದರೆ ಕೊನೇ ಎರಡು ಬಗೆಯ ಶಾಲೆಗಳಲ್ಲಿ ಮಾತ್ರ ಅವಕಾಶ ಸಿಗುತ್ತದೆ. ಖಾಸಗಿ ಶಾಲೆಗಳು ನಿರಾತಂಕವಾಗಿ ಮುಂದುವರೆಯುತ್ತವೆ.”

- ಡಾ. ನಿರಂಜನಾರಾಧ್ಯ, ಶಿಕ್ಷಣ ತಜ್ಞ

ನಂಬಿದ್ರೆನಂಬಿ ಬಿಟ್ರೆಬಿಡಿ

“ನನ್ನನ್ನು ಯಾರೂ ಅಷ್ಟು ಸುಲಭವಾಗಿ ಭ್ರಷ್ಟಗೊಳಿಸಲು ಸಾಧ್ಯವಿಲ್ಲ”

-ನಿತಿನ್ ಗಡ್ಕರಿ, ಬಿಜೆಪಿಯ ರಾಷ್ಟ್ರಾಧ್ಯಕ್ಷ

“ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗೆ ಮೇಲ್ಪಟ್ಟ ಹುದ್ದೆಗಳಿಗೆ JNU ನಂಥ ಪ್ರತಿಷ್ಠಿತ ಸಂಸ್ಥೆಗಳಲ್ಲೂ ಮೀಸಲಾತಿ ನಿಯಮ ಅನ್ವಯಿಸಿದರೆ ಅದರ ಸ್ಟಾಂಡರ್ಡೇ ಕುಸಿದು ಬಿಡುತ್ತದೆ.”

- ಬಿಪಿನ್ ಚಂದ್ರ, ಎಡಪಂಥೀಯ ಇತಿಹಾಸಕಾರ

“ಬಿ.ಬಿ.ಎಂ.ಪಿ ಚುನಾವಣೆಯ ನಂತರ ಬಿಎಂಐಸಿ ಯೋಜನೆಗೆ ರೈತರ ಭೂಕಬಳಿಕೆ ಮಾಡುತ್ತಿರುವವರ ವಿರುದ್ಧ ಉಗ್ರ ಹೋರಾಟ ಆರಂಭಿಸಲಾಗುವುದು.”

- ಎಚ್.ಡಿ. ಕುಮಾರಸ್ವಾಮಿ

“ಕಳೆದ ವರ್ಷದ ಘಟನೆಗಳು ಮತ್ತು ಅಪರಾಧ ಪ್ರಮಾಣವನ್ನು ಗಮನಿಸಿದರೆ ಶಾಂತಿ, ಸುವ್ಯವಸ್ಥೆ ಕಾಪಾಡುವಲ್ಲಿ ನಮ್ಮ ಪೊಲೀಸರು ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಹೇಳಬಹುದು.”

-ಯಡಿಯೂರಪ್ಪ

ಹೇಗಿದ್ದರೂ ಕುಂಕುಮ ಕೆಂಪೇ ಅಲ್ಲವೇ!

“ಸಿ.ಪಿ.ಎಂ ಪಕ್ಷದ ಆಂತರಿಕ ತಿದ್ದುಪಡಿ ಆಂದೋಲನವು ಪಕ್ಷದಲ್ಲಿ ಕಮ್ಯುನಿಸ್ಟ್ ಮೌಲ್ಯಗಳನ್ನು ಎತ್ತಿಹಿಡಿಯುವ ಮೌಲ್ಯವನ್ನು ಹೊಂದಿದೆ. ಆದರೆ ಅದೇ ಸಮಯದಲ್ಲಿ ದೇವರು-ಧರ್ಮದಲ್ಲಿ ನಂಬಿಕೆ ಇರುವವರು ನಮ್ಮ ಪಕ್ಷ ಸೇರಬಾರದು ಎಂದೇನಿಲ್ಲ!”

-ಪ್ರಕಾಶ್ ಕಾರಟ್

ಜಾಗತೀಕರಣವು ಕಾಂಗ್ರೆಸ್ಸಿನ ಮತ್ತು ಸ“ಮಜಾ” ವಾದಿಗಳ ಜಂಟಿ ಕೂಸಲ್ಲವೇ ಗುಹಾರವರೇ!!

“ಕಮ್ಯುನಿಸ್ಟರು ರಷ್ಯಾದ ಆರಾಧಕರು. ನಕ್ಸಲೀಯರು ಚೀನಾದ ಅಣತಿಯಂತೆ ನಡೆಯುವವರು. ಆದರೆ ಕಾಂಗ್ರೆಸ್ಸಿಗರು ಮಾತ್ರ ಇವರಿಬ್ಬರಂತೆ ಪರದೇಶಗಳ ಇಚ್ಛೆಯನ್ನನುಸರಿಸಿ ನಡೆಯುವವರಲ್ಲ, ಆದರೆ ಪ್ರಜಾಪ್ರಭುತ್ವವಾದಿ ಸಮಾಜವಾದವನ್ನು ಪ್ರತಿಪಾದಿಸುವ ಲೋಹಿಯಾವಾದಿಗಳು ಮಾತ್ರ ಸಮಾನತೆಗೂ ಬದ್ಧರು. ಈ ದೇಶಕ್ಕೂ ಬದ್ಧರು.”

-ರಾಮಚಂದ್ರ ಗುಹಾ

ಇದೀಗ ಸರಿಯಾದ ಮಾತು!

“ಬಿಎಂಐಸಿ ಯೋಜನೆಯು ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಮೂರೂ ಪಕ್ಷಗಳ ಪಾಪದ ಕೂಸು. ಈ ಮೂರೂ ಪಕ್ಷಗಳ ನಿಲುವಿನಲ್ಲಿ ಹೆಚ್ಚು ವ್ಯತ್ಯಾಸವಿಲ್ಲ, ದೇವೇಗೌಡರ ಹೋರಾಟ ಹೆಚ್ಚುವರಿ ಭೂಮಿಯ ಬಗ್ಗೆ ಮಾತ್ರ. ಅದನ್ನು ಒಪ್ಪಿಕೊಂಡುಬಿಟ್ಟರೆ 20,000 ಎಕರೆಯಷ್ಟು ರೈತರ ಭೂಮಿಯನ್ನು ಬಿಡಿಗಾಸಿಗೆ ವಶಪಡಿಸಿಕೊಂಡಂತಾಗುತ್ತದೆ. ಆದ್ದರಿಂದ ಇಡೀ ಯೋಜನೆಯನ್ನೇ ರದ್ದು ಮಾಡಬೇಕು.”

- ಎಚ್.ಎಸ್. ದೊರೆಸ್ವಾಮಿ

ಬಿಜೆಪಿ ಅಜೆಂಡಾಗೆ ಕಾಂಗ್ರೆಸ್ ರಾಜ್ಯಪಾಲನ ವಕಾಲತ್ತು!

“ಗೋಹತ್ಯೆ ನಿಷೇಧಿಸುವ ಕಾನೂನು ರೂಪಿಸಲು ಸಾಧುಸಂತರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ಪ್ರಾಣಿಬಲಿರಹಿತ ವೈದಿಕ ಆಚರಣೆಗೆ ನಾವೆಲ್ಲಾ ಮುಂದಾಗಬೇಕಿದೆ.”

- ಎಚ್. ಆರ್. ಭಾರದ್ವಾಜ್, ರಾಜ್ಯಪಾಲ

ಬಿಜೆಪಿಗೆ ಓಟು ಹಾಕುವ ಮುಂಚೆಯೂ ಈ ಪ್ರಜ್ಞೆ ಇರಬೇಕಿತ್ತು!

“ವೀರಶೈವರು ಹಿಂದೂಗಳಲ್ಲ, ಹಿಂದೂ ಧರ್ಮವನ್ನು ನಾವು ಒಪ್ಪುವುದೇ ಇಲ್ಲ, ನಮ್ಮದೇ ಪ್ರತ್ಯೇಕ ಧರ್ಮ.”

- ಎಸ್. ಎಸ್. ಪಾಟೀಲ್, ವೀರಶೈವ ಮಹಾಸಭಾದ ಮುಖಂಡ

ಅಪ್ಪ ಮತ್ತೆ ಇದಿರುಗೊಂಡಾಗ...



ಕಂಡಹಾಗೆ

■ ಗೌರಿ ಲಂಕೇಶ್

ಎಂದಿನಂತೆ ಅವತ್ತು ಆಫೀಸಿನ ಮೆಟ್ಟಿಲುಗಳನ್ನು ಬರುತ್ತಿರುವಾಗ ನೀನು ನಿನ್ನ ರೂಮಿನಲ್ಲಿ ಕೂತು ನನ್ನೋ ಬರೆಯುತ್ತಿದ್ದರ ಪ್ರತಿಬಿಂಬ ಎದುರಿಗಿದ್ದ ನಲ್ಲಿ ಕಾಣಿಸಿತು. ನಿನ್ನನ್ನು ಡಿಸ್ಟರ್ಬ್ ಮಾಡಬಾರದೆಂದು ಲಿನ ಮಹಡಿಯಲ್ಲಿರುವ ಬೇಬಿಯ ಆಫೀಸಿಗೆ ಗಲು ನಿರ್ಧರಿಸಿದೆ. ಆಗ ತಲೆ ಎತ್ತಿ ನನ್ನನ್ನು ನೋಡಿದ "ಏ, ಬಾ ಇಲ್ಲಿ" ಅಂದೆ.

ನಿನ್ನ ಮುಂದೆ ಕೂತು ನಿನ್ನ ಮುಖವನ್ನು ಗಮನಿಸಿದೆ. ಜಿಂಕೆ ಕಣ್ಣು, ಚೂಪಾದ ಮೂಗು, ಗಂಟಿಕ್ಕಿದ್ದ ಆ ಹುಬ್ಬುಗಳ ನಡುವೆ ನೀನು ಚಿಕ್ಕವನಿದ್ದಾಗ ಲಿದ್ದ ಪ್ಲೇಗ್ ಸಂದರ್ಭದಲ್ಲಿ ಗಾಜಿನಿಂದ ಸುಟ್ಟಿದ್ದರ ಗುಳಿ. ಕೆದರಿಕೊಂಡಿದ್ದ ಕೂದಲು. ನೀನು ಈಗಲೂ ಇದ್ದೀಯ.

"ಹೇಳು, ಏನೇನಾಗ್ತಿದೆ?" ಅಂದೆ ನೀನು.

"ನಿನಗೀಗ ಮೂರು ಮೊಮ್ಮಕ್ಕಳು ತ್ತಾ?"

"ಲವ್ಲಿ! ಅವರೆಲ್ಲ ಹೇಗಿದಾರೆ?"

"ಸಮರ್ ತುಂಬಾ ತುಂಟ. ಇಶಾ ಲವ್ಲಿ. ಸಮಯ್ ಅಂತೂ ಷೆಯೇ ಇದ್ದಾನೆ. ಅವನು ತರಲೆ ದಾಗ ಅವನನ್ನು ಕೊನಗವಳ್ಳಿ ಅಂತ ಕರೀತೀವಿ."

"ಬೇಬಿ, ಅಜಿತು, ಅರ್ಪಿತಾ?"

"ಚೆನ್ನಾಗಿದ್ದಾರೆ. ಬದುಕಿನ ಗಳನ್ನು ಎದುರಿಸುತ್ತಾ ಎಲ್ಲರಂತೆ ಯಿಂದಿರಲು ಪ್ರಯತ್ನಿಸುತ್ತಿದ್ದಾರೆ."

"ಇಂದಿರಾ?"

"ಅಮ್ಮನಿಗೂ ವಯಸ್ಸಾಯಿತು. ಸ್ವಲ್ಪ ಸೊರಗಿದೆ. ಕೆಲಸದವರ ಜೊತೆ ಜಗಳವಾಡಿಕೊಂಡು ಮಾನಿ ಬದುಕು ಸಾಗಿಸುತ್ತಿದೆ."

ಆಕೆ ಕೊಕ್ಕನೂರಿನ ತಳಿ. ಅವರ ಹೆಂಗಸರೆಲ್ಲ ಗಟ್ಟಿ. ಅಜ್ಜಿ ಚೆನ್ನವ್ವನ ತರಹ ಇಂದಿರಾನೂ ನೂರು ಬದುಕಿದ್ದರೆ no surprise. ಆಯ್ತು. ಬೇರೆ ನೇನು ಆಗ್ತಿದೆ ಹೇಳು" ಅಂದೆ ನೀನು,

ಎಲ್ಲಿಂದ ಪ್ರಾರಂಭಿಸಲಿ? ಇವತ್ತು ಬಿಜೆಪಿ ಚೆಡ್ಡಿಗಳು ಲ್ಲಿ ಅಧಿಕಾರದಲ್ಲಿದ್ದಾರೆ. ಎಲ್ಲವನ್ನು ಕೇಸರಿಮಯ ಸುತ್ತಿದ್ದಾರೆ. ಒಮ್ಮೆ ನೀನು ಕರಾವಳಿಯ ತೆಂಗುಗಳು ಅಲ್ಲಿನ ಜಲರಾಶಿ ಜನರ ಮನಸ್ಸನ್ನು ಮುತ್ತಿಕೊಳ್ಳುತ್ತವೆ ಆದರೆ ಇವತ್ತು ಚೆಡ್ಡಿಗಳಿಂದಾಗಿ ಕರಾವಳಿಯ ಮನಸ್ಸನ್ನು ಕೋಮುವಾದ ಮುತ್ತಿಕೊಂಡಿದೆ. ಗಳ ಆರ್ಭಟದ ಎದುರು ನಿನ್ನ ಕಾಲದ ಅರಸು ನಟರಾಜ ಅಮಾಯಕನಂತೆ ಕಾಣಿಸುತ್ತಾನೆ. ಯೂರಪ್ಪನ ಭ್ರಷ್ಟಾಚಾರಕ್ಕೆ ಹೋಲಿಸಿದರೆ ದಪ್ಪನ ಕ್ಲಾಸಿಕ್ ಕಂಪ್ಯೂಟರ್ ಹಗರಣ ಏನೇನೂ-ನ್ನು ಕಟ್ಟಾ, ಅಶೋಕ್ ತರಹದವರ ಭೂಕಬಳಿಕೆ ರಾಮಕೃಷ್ಣ ಹೆಗಡೆಯ ರೇವಜೀತು ಪುಡಿಗಾಸೂ ಟ್ಟಾರೆ ಎಲ್ಲವೂ ಹೊಲಸೆದ್ದು ಹೋಗಿದೆ."

ಫೂಲಿಷ್ ಫೆಲ್ಲೋಸ್. ಇದಕ್ಕೇ ನಾನು ಬಿಜೆಪಿಯನ್ನು ದುಷ್ಟ ಪಕ್ಷ ಅಂತ ಹೇಳಿದ್ದು. ಲಿಂಗಭೇದ, ಜಾತಿಭೇದ, ವರ್ಣಭೇದಗಳನ್ನು ಸಿದ್ಧಾಂತವಾಗಿಸಿಕೊಂಡಿರುವ ಬಿಜೆಪಿ ಒಂದು ಫ್ಯಾಸಿಸ್ಟ್ ಪಕ್ಷ. ಆ ಕಾಂಗ್ರೆಸ್, ದೇವೇಗೌಡ ಏನು ಮಾಡುತ್ತಿದ್ದಾರೆ."

"ನಿನ್ನ ಸೋನಿಯಾ ಗಾಂಧಿ ಪಾಪ ಕಾಂಗ್ರೆಸ್ ಅನ್ನು ಆದಷ್ಟು ಬಲಪಡಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ರಾಜ್ಯದಲ್ಲಿರುವ ಕಾಂಗ್ರೆಸ್ಸಿಗರು ಇನ್ನೂ ನಿರುಪಯುಕ್ತರಾಗಿದ್ದಾರೆ. ದೇವೇಗೌಡ ಈ ವಯಸ್ಸಿನಲ್ಲೂ ಬೀದಿಗಿಳಿದು ಹೋರಾಡುತ್ತಿದ್ದಾರೆ. ಆದರೆ ಭಂಡತನದ ಬಿಜೆಪಿಗಳಿಗೆ ಅದೆಲ್ಲ ತಾಗುತ್ತಿಲ್ಲ."

"ಅಧ್ವಾನವಾಗಿ ಬರೆಯುವ ಆ ಭೈರ ಅದೆಂತಹದ್ದೋ ಕಾದಂಬರಿ ಬರೆದಿದ್ದಾನಂತೆ?"



"ಅಯ್ಯೋ, ಅದು ಕಾದಂಬರಿನೇ ಅಲ್ಲ, ಅದೊಂದು ಹೊಲಸು ಮನಸ್ಸಿನ ಸೃಷ್ಟಿ. ಅದಕ್ಕಿಂತಲೂ ಅಪಾಯಕಾರಿಯಾಗಿ ವಿಜಯ ಕರ್ನಾಟಕ ಎಂಬ ಕೇಸರಿ ಪತ್ರಿಕೆಯಲ್ಲಿ ಮತಾಂತರ, ಇತ್ಯಾದಿ ಕುರಿತು ಬರೆಯುತ್ತಿರುತ್ತಾರೆ. ಇನ್ನು ಒಂದು ಕಾಲದ ಸಂಶೋಧಕ ಚಿದಾನಂದ ಮೂರ್ತಿ ಅದೆಷ್ಟು ಕೆಟ್ಟು ಹೋಗಿದ್ದಾರೆಂದರೆ ಬಾಬಾಬುಡನ್‌ಗಿರಿಗೆ ಹೋಗುವ ದಾರಿಯಲ್ಲಿನ ಮೈಲಿಗಲ್ಲುಗಳ ಮೇಲೆ ಚೆಡ್ಡಿಗಳೇ 'ದತ್ತಪೀಠ' ಎಂದು ಬರೆಸಿರುವುದನ್ನೇ ಐತಿಹಾಸಿಕ ಸಾಕ್ಷಿ ಎಂದು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ನೀನಿದ್ದಿದ್ದರೆ ಇವರಿಗೆಲ್ಲ ತಕ್ಕ ಪಾಠ ಕಲಿಸುತ್ತಿದ್ದೆ. ನಾವು ನಮ್ಮ ಕೈಲಾದಷ್ಟನ್ನು ಮಾಡುತ್ತಿದ್ದೇವೆ. ನಿನ್ನ ಹಳೆಯ ಸ್ನೇಹಿತ ಯು.ಆರ್. ಅನಂತಮೂರ್ತಿಯವರು ಮಾತ್ರ ಈಗಲೂ ಕೋಮುವಾದ ಮತ್ತು ಭ್ರಷ್ಟಾಚಾರದ ವಿರುದ್ಧ ಗಟ್ಟಿಯಾಗಿ ನಿಂತಿದ್ದಾರೆ."

"ಗುಡ್. ಪತ್ರಿಕೆ ಹೇಗೆ ನಡೀತಿದೆ?"

"ಈಗಲೂ 'ಪತ್ರಿಕೆ'ಯೇ ನಿಜವಾದ ವಿರೋಧ ಪಕ್ಷ ಅಂತ ಜನರೇ ಹೇಳುತ್ತಾರೆ. ಇವತ್ತಿಗೂ ಕೋಮುವಾದದ ವಿರುದ್ಧ ಮತ್ತು ದಮನಿತರ ಪರ ದನಿ ಎತ್ತುತ್ತಿರುವ ಏಕೈಕ ಪತ್ರಿಕೆ ನಿಂದು. ಇನ್ನೊಂದು ಮಜಾ ಗೊತ್ತಾ? ಮೊನ್ನೆ ಬೆಂಗಳೂರಿನಲ್ಲಿ ಪುಸ್ತಕ ಮೇಳ ನಡೆಯಿತು. ಅಲ್ಲಿಗೆ ಬಂದಿದ್ದ ಯುವ ಜನತೆ ಹೆಚ್ಚು ನಿನ್ನ ಪುಸ್ತಕಗಳನ್ನೇ ಕೊಂಡುಕೊಂಡಿದ್ದು. ಇವತ್ತಿಗೂ ನೀನೇ ಈ ಪತ್ರಿಕೆಗೆ, ಈ ಸಂಸ್ಥೆಗೆ ಆಕ್ಸಿಜನ್ ಆಗಿರುವುದು!"

ಇದನ್ನು ಕೇಳಿ ಸಂತೋಷಗೊಂಡ ನೀನು "ಈಗ ಯಾವ ಪುಸ್ತಕ ಪ್ರಕಟಿಸುತ್ತಿದ್ದೀಯಾ?" ಅಂತ ಕೇಳಿದೆ.

"ನನ್ನ ಕತೆ ಕೇಳಬೇಡ. ಇವತ್ತಿಗೂ ಯಾವುದನ್ನು ಮೊದಲು ಪ್ರಕಟಿಸಲಿ, ಯಾವ ಲೇಖನವನ್ನು ಯಾವ ಸಂಗ್ರಹದಲ್ಲಿ ಸೇರಿಸಲಿ ಎಂದು ನಿರ್ಧರಿಸುವುದೇ ಕಷ್ಟವಾಗಿದೆ. ನೀನು ಬರೆಯುತ್ತಿದ್ದ 'ಈ ಸಂಚಿಕೆ' ಕಾಲಂನಲ್ಲಿ ನಿಮ್ಮಿಗೆ ಪತ್ರ ಬರೆಯುತ್ತಾ ಅದರಲ್ಲೂ ಅಂದಿನ ರಾಜಕೀಯ ಮಾತ್ರವಲ್ಲದೆ ಪಾಶ್ಚಿಮಾತ್ಯ ಸಾಹಿತಿಯೋರ್ವ ನನ್ನು ಕುರಿತು ಬರೆದಿದ್ದೀಯ. ಇನ್ನೊಂದುಕಡೆ ಬದುಕಿನ ಕಷ್ಟಗಳ ಬಗ್ಗೆ ಬರೆಯುತ್ತಾ ಪ್ರಖ್ಯಾತ ನಟನ ಬಗ್ಗೆಯೂ ಬರೆದಿದ್ದೀಯಾ. ಹಾಗೆಯೇ ಮರೆಯುವ ಮುನ್ನಗಳಲ್ಲಿ ಹತ್ತಾರು ವಿಚಾರಗಳನ್ನು ವಿಶ್ಲೇಷಿಸಿದ್ದೀಯ. ಅವುಗಳನ್ನೆಲ್ಲ ಬೇರೆ ಆಗಿ ವಿಂಗಡಿಸುವುದೇ ನನ್ನ ಕೆಲಸವಾಗಿದೆ. ಅಬ್ಬಾ ಅದೆಷ್ಟು ಬರೆದಿದ್ದಿಯಾ ನೀನು. ನಿನ್ನ ಲೇಖನಗಳನ್ನೆಲ್ಲ ಸರಿಯಾಗಿ ಸಂಗ್ರಹಿಸಿದರೆ ಇನ್ನೂ ಹತ್ತು ಪುಸ್ತಕಗಳನ್ನು ಪ್ರಕಟಿಸ ಬಹುದು. ನೀನು ಬರೆಯುವುದನ್ನು ನಿಲ್ಲಿಸಿ ಹತ್ತು ವರ್ಷಗಳಾಗಿದ್ದರೂ ಇವತ್ತಿಗೂ ನಿನ್ನ ಹೊಸ ಹೊಸ ಪುಸ್ತಗಳು ಪ್ರಕಟವಾಗುತ್ತಿವೆ. ಅವುಗಳನ್ನು ಜನ ಆನಂದದಿಂದ ಸ್ವೀಕರಿಸುತ್ತಿದ್ದಾರೆ. ಸಿನಿಮಾ ಮತ್ತು ನಟ-ನಟಿಯರನ್ನು ಕುರಿತು ನೀನು ಬರೆದಿದ್ದ ಲೇಖನಗಳನ್ನು ಸಂಗ್ರಹಿಸಿ ನಮ್ಮ ಪಾರ್ವತೀಶ 'ಈ ನರಕ ಈ ಪುಲಕ' ಎಂದು ಟೈಟಲ್ ಇಟ್ಟರು. ಆ ಪುಸ್ತಕ ಎಷ್ಟು ಮೆಚ್ಚುಗೆ ಗಳಿಸಿದೆ ಗೊತ್ತಾ. ಇನ್ನೊಂದು ವಿಚಾರ, ನೀನು 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿ ಬರೆದದ್ದು 1978 ರಲ್ಲಿ, ಅಂದರೆ 22 ವರ್ಷಗಳ ಹಿಂದೆ. ನಿನ್ನ ಕಾದಂಬರಿಯನ್ನಾಧರಿಸಿಯೇ ಬೇಬಿ 'ಅವ್ವ' ಅಂತ ಸಿನಿಮಾ ಮಾಡಿದಳು. ಆ ಸಿನಿಮಾಗೆ 'ಅತ್ಯುತ್ತಮ ಕತೆ' ರಾಜ್ಯ ಪ್ರಶಸ್ತಿ ಬಂತು. ಅದೆಷ್ಟೋ ಲೇಖಕರು ಜೀವಂತ ಇರು ವಾಗಲೇ ಅಪ್ರಸ್ತುತರಾಗಿರುತ್ತಾರೆ. ಆದರೆ ನೀನು ಇವತ್ತಿಗೂ ಪ್ರಸ್ತುತವಾಗಿರುವೆ, ಜೀವಂತವಾರುವೆ. ಇದೇನು ನಿನ್ನ ಮ್ಯಾಜಿಕ್?!" ಅಂದೆ ನಾನು.

"ಅದೆಲ್ಲ ಸೀಕ್ರೆಟ್, ಹೇಳಕ್ಕಾಗಲ್ಲ" ಎಂದು ಹುಸಿನಗೆ ಬೀರಿದೆ ನೀನು.

"ಇದೇ ಇಪ್ಪತ್ತೈದಕ್ಕೆ ನೀನಿಲ್ಲದೆ ಹತ್ತು ವರ್ಷ ಆಗುತ್ತೆ. ಆದರೆ ನೀನು ಮಾತ್ರ ಹತ್ತು ಹದಿನೈದು ವರ್ಷಗಳ ಹಿಂದೆ ಹೇಗಿದ್ದೆಯೋ ಹಾಗೇ ಇದ್ದೀಯ. ನಿನಗೆ ಸ್ಟ್ರೋಕ್ ಆದಾಗ ದನಿ ಸ್ವಲ್ಪ ಕುಗ್ಗಿದ್ದು, ನಿನ್ನ ಚಲನವಲನದಲ್ಲಿ ಒಂದಿಷ್ಟು ಹುಷಾರಾಗಿದ್ದು ಬಿಟ್ಟರೆ ಏನೂ ಆಗಿಲ್ಲದಂತೆ ಇದ್ದೆ. ಒಂದೇ ಕಣ್ಣಲ್ಲಿ ಅದೆಷ್ಟು ಓದಿದೆ, ಅದೆಷ್ಟು ಬರೆದೆ, ಅದೆಂತೆಹ ಸತ್ಯಗಳನ್ನು, ಸೂಕ್ಷ್ಮತೆಗಳನ್ನು ಗಮನಿಸಿದೆ. ಒಂದೇ ಹೊತ್ತಿನಲ್ಲಿ ಲಂಕೇಶ್, ಸಂಪಾದಕ, ನೀಲು, ನಿಮ್ಮಿ, ಮೇಷ್ಟ್ರು, ಗೆಳೆಯ, ಅಪ್ಪ ಕೂಡ ಆಗಿದ್ದೆ. ನೀನಿದ್ದಾಗ ಭೈರಪ್ಪ, ಚಿಮೂ ತರಹದವರು 'ಆ ಲಂಕೇಶ್ ಏನನ್ನುತ್ತಾನೊ' ಎಂದು ಏನನ್ನೇ ಬರೆಯುವ ಮುನ್ನ ಹೆದರುತ್ತಿದ್ದರು. ಆದರೆ ಈಗ ನೀನಿಲ್ಲ ಅಂತ ಭಯ ಮಾತ್ರವಲ್ಲ ಮಾನ, ಮರ್ಯಾದೆ, ಮನುಷ್ಯತ್ವ ಎಲ್ಲವನ್ನೂ ಮರೆತು ನೀಚರಾಗಿದ್ದಾರೆ. ಹಾಗೆಯೇ ರಾಜಕಾರಣಿಗಳು ಕೂಡ. ನಮ್ಮ ಮುಂದೆ ಎಂತೆಂತಹ ಸವಾಲುಗಳು ಇವೆ ಇವತ್ತು ಗೊತ್ತಾ?" ಅಂದೆ.

"ಸವಾಲೆಂದರೆ ನಾನು ಹೇಗೆ ಜಿಗಿಯುತ್ತಿದ್ದೆ, ಹೇಗೆ ಸಂತೋಷದಿಂದ ಸ್ವೀಕರಿಸುತ್ತಿದ್ದೆ ಗೊತ್ತಾ? ನೀವೂ ಹಾಗೆ ಇರಬೇಕು. ಧೈರ್ಯ ಕಳೆದುಕೊಳ್ಳಬಾರದು" ಅಂದೆ ನೀನು.


"ನಿನ್ನಿಂದ ನಾವೆಲ್ಲ ಕಲಿತಿರುವ ಹಲವಾರು ಪಾಠಗಳಲ್ಲಿ ಎಂದೂ ಹತಾಶರಾಗಬಾರದು, ಆಶಾವಾದ ಕಳೆದುಕೊಳ್ಳ ಬಾರದು, ಸಿನಿಕರಾಗಕೂಡದು ಎಂಬುದೂ ಸೇರಿವೆ. ಆದ್ದರಿಂದ ನಮ್ಮ ತಂಡ ಧೈರ್ಯ ಕಳೆದುಕೊಂಡಿಲ್ಲ, ಧೃತಿಗೆಟ್ಟಿಲ್ಲ."

"Good. ನಾನು ಇನ್ನೊಮ್ಮೆ ಬರ್‍ತೇನೆ" ಅಂತ ನೀನು ಎದ್ದು ಹೊರಟೆ.

"ಒಂದು ನಿಮಿಷ ಇರು. ಬರುವ ಮಾರ್ಚ್ 8 ನಿನ್ನ 75 ನೇ ಹುಟ್ಟುಹಬ್ಬ. ಅದನ್ನ ನಾವು ಗ್ರಾಂಡ್ ಆಗಿ ಮಾಡುತ್ತಿದ್ದೇವೆ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ಮಾರ್ಚ್ 6 ಮತ್ತು 7 ರಂದು 'ಲಂಕೇಶ್ 75' ಎಂಬ ಸಾಂಸ್ಕೃತಿಕ ಹಬ್ಬ ಇರುತ್ತೆ. ನಿನ್ನ ಎಲ್ಲಾ ಸ್ನೇಹಿತರು, ಅಭಿಮಾನಿಗಳು, ಸಂಗಡಿಗರನ್ನು ಆಹ್ವಾನಿಸುತ್ತಿದ್ದೇವೆ. ಸಾಹಿತ್ಯ, ಪ್ರಸ್ತುತ ಸವಾಲುಗಳನ್ನು ಕುರಿತು ಚರ್ಚೆ, ವಿಶೇಷ ಉಪನ್ಯಾಸ ಎಲ್ಲವೂ ಇರುತ್ತೆ. ಒಂದು ಸಂಜೆ ಕವಿಗೋಷ್ಠಿನೂ ಇರುತ್ತೆ. ಇನ್ನೊಂದು ಸಂಜೆ ಸಿನಿಮಾ ಪ್ರದರ್ಶನ ಇರುತ್ತೆ. ನೀನು ಯಾವುದೋ ನೆಪ ಒಡ್ಡಿ ಕಾರ್ಯಕ್ರಮವನ್ನು ತಪ್ಪಿಸಿಕೋ ಬೇಡ. ಗ್ಯಾರಂಟಿ ಬರಬೇಕು" ಅಂದೆ ನಾನು.

"ನನ್ನ 75ನೇ ಹುಟ್ಟುಹಬ್ಬಕ್ಕೆ ನಾನು ಬಾರದೆ ಇರುತ್ತೇನಾ. ಬರ್‍ತೀನಿ. Meeoow" ಎನ್ನುತ್ತಾ ಹೊರಟುಹೋದೆ.

..... ಅಪ್ಪಾ, ನೀನು ಬಿಟ್ಟುಹೋದ ಖಾಲಿ ಕುರ್ಚಿ ಮುಂದೆ ಕೂತ ನಿನ್ನನ್ನು ನೆನೆಯುತ್ತಾ ಕಣ್ಣೀರಿಟ್ಟೆ.....



ಲಂಕೇಶ್ 75

ಇದೇ ಜನವರಿ 25ಕ್ಕೆ ಪಿ. ಲಂಕೇಶರು ನಿರ್ಗಮಿಸಿ ಹತ್ತು ವರ್ಷಗಳಾಗುತ್ತವೆ. ಹಾಗೆಯೇ ಬರುವ ಮಾರ್ಚ್ 8, ಲಂಕೇಶರ 75 ನೇ ಹುಟ್ಟುಹಬ್ಬವಾಗಿದೆ. ಆದರೆ ಈ ಬಾರಿ 8ನೇ ತಾರೀಖು ಸೋಮವಾರ ಬರುತ್ತಿರುವುದರಿಂದ ಜನರಿಗೆ ಅನುಕೂಲವಾಗಲೆಂದು ಮಾರ್ಚ್ 6 ಮತ್ತು 7 ರಂದು 'ಲಂಕೇಶ್ 75' ಎಂಬ ಎರಡು ದಿನಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ.

ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿ ಲಂಕೇಶರ ಕೊಡುಗೆ ಮತ್ತು ಪ್ರಸ್ತುತ ಸವಾಲುಗಳನ್ನು ಕುರಿತು ಆ ಎರಡು ದಿನವೂ ಚರ್ಚೆ, ಸಂವಾದ, ಉಪನ್ಯಾಸಗಳಿರುತ್ತವೆ. ಜೊತೆಗೆ ಹೊಸ ಪುಸ್ತಕಗಳ ಬಿಡುಗಡೆ, ಕವಿಗೋಷ್ಠಿ ಮತ್ತು ಚಿತ್ರ ಪ್ರದರ್ಶನವೂ ಇರುತ್ತದೆ.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಪ್ಲೀಸ್, ಈಗಲೇ ನಿಮ್ಮ ಡೈರಿಗಳಲ್ಲಿ ಆ ಎರಡು ದಿನಗಳನ್ನು 'ಲಂಕೇಶ್ 75'ಕ್ಕೆ ಮೀಸಲಿರಿಸಿ ಲಂಕೇಶರ ಗೆಳೆಯರು, ಅಭಿಮಾನಿಗಳು ಮತ್ತು ಪತ್ರಿಕೆಯ ಓದುಗರು ಲಂಕೇಶರ 75ನೇ ಹುಟ್ಟುಹಬ್ಬದಲ್ಲಿ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಿ ಅಂತ ನಮ್ಮ ಕೋರಿಕೆ.

ಲಂಕೇಶ್ ಬಳಗ

ಮಾರ್ಚ್ 6 ಮತ್ತು 7
ಸೆನೆಟ್ ಹಾಲ್,
ಸೆಂಟ್ರಲ್ ಕಾಲೇಜ್,
ಬೆಂಗಳೂರು


ಸೂಚನೆ : ನಿಮ್ಮ ಬಳಿ ಲಂಕೇಶರ ಫೋಟೋಗಳಿದ್ದರೆ ದಯವಿಟ್ಟು ಅವುಗಳನ್ನು lankesh70@rediffmail ಗೆ e-mail ಮಾಡಿ. ಅಥವಾ ಫೋಟೋ ಪ್ರತಿಯನ್ನು ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ.
'ಲಂಕೇಶ್ 75'ರಲ್ಲಿ ಅವುಗಳನ್ನು ಪ್ರದರ್ಶಿಸಲು ಇಚ್ಛಿಸಿದ್ದೇವೆ.

ಎದ್ದು ನಿಂತ ಶಿವರಾಮ್ ಜಿದ್ದು ಬಿಟ್ಟರು ಸೀತಾರಾಮ್!

ವಾರ್ಡ್ ವಾರ್ 6 BBMP

ಮಲ್ಲೇಶ್ವರ

ಸೋತು ಸುಣ್ಣವಾಗಿರುವ ಮಲ್ಲೇಶ್ವರದ ಮಾಜಿ ಶಾಸಕ ಎಂ.ಆರ್. ಸೀತಾರಾಮ್‌ರನ್ನು ಮತ್ತಷ್ಟು ಬಗ್ಗುಬಡಿದು ಬಿಜೆಪಿ ಬಾವುಟ ಹಾರಿಸಲು ಏನೇನು ಬೇಕಿತ್ತೋ ಎಲ್ಲವನ್ನೂ ಮಾಡಿ ಮುಗಿಸಿದ್ದಾರೆ ಮಲ್ಲೇಶ್ವರದ ಬಿಜೆಪಿ ಶಾಸಕ ಡಾ. ಅಶ್ವತ್ಥನಾರಾಯಣ.



ಹರಿಪ್ರಸಾದ್

ಬಿಜೆಪಿಯಿಂದ ಯಾರ್‍ಯಾರು ಕೌನ್ಸಿಲರ್‌ಗಳಾಗಬೇಕು, ಅವರ ಅನುಕೂಲಕ್ಕೆ ತಕ್ಕಂತೆ ಹೇಗೆಲ್ಲ ವಾರ್ಡ್ ವಿಂಗಡಿಸಬೇಕು, ಹೇಗೆ ಮೀಸಲಾತಿ ವಿಧಿಸಿ ಯಾರ್‍ಯಾರನ್ನು ತುಳಿಯಬೇಕು ಇತ್ಯಾದಿ ಪ್ರತಿಯೊಂದನ್ನೂ ಬಿಜೆಪಿಯೇ ನಿಂತು ನೆರವೇರಿಸಿಬಿಟ್ಟಿದೆ. ಏನೆಲ್ಲಾ ಮಾಡಿಯೂ ಕಾಂಗ್ರೆಸ್ಸನ್ನು ಹಣಿಯಲು ಹೊರಟ ಮಲ್ಲೇಶ್ವರದ ಶಾಸಕ ಅಶ್ವತ್ಥ್ ನಾರಾಯಣರಿಗೆ ತಲೆನೋವೆಂಬುದು ಬಿ.ಕೆ. ಹರಿಪ್ರಸಾದ್ ಮತ್ತವರ ಅಣ್ಣ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ.ಶಿವರಾಮ್ ರೂಪದಲ್ಲಿ ತಲೆ ಎತ್ತುತ್ತದೆಯೆಂಬ ಲೆಕ್ಕಾಚಾರವಾದರೂ ಎಲ್ಲಿತ್ತು?

ಸೋತು ಹೈರಾಣಾದ ಮಾಜಿ ಕಾಂಗ್ರೆಸ್ ಶಾಸಕ ಎಮ್ಮಾರ್ ಸೀತಾರಾಮ್ ಇನ್ನೇನು ಮಲ್ಲೇಶ್ವರದಲ್ಲಿ ನಾಮಾವಶೇಷವಾದರೆಂದು ಬಿಜೆಪಿ ಬೀಗುತ್ತಿರುವಾಗಲೇ ಶಿವರಾಮ್ ಎದ್ದು ನಿಂತಿದ್ದಾರೆ. ಬಹುಶಃ ಬಿ.ಕೆ. ಹರಿಪ್ರಸಾದ್ ಪಾಳಯದ ಜೊತೆ ಸೀತಾರಾಮ್ ನಿಯತ್ತಾಗಿದ್ದಿದ್ದರೆ ಮಲ್ಲೇಶ್ವರದಲ್ಲಿ ಬಿಜೆಪಿಯ ಅಶ್ವತ್ಥನಾರಾಯಣ ಗೆಲ್ಲುತ್ತಲೇ ಇರಲಿಲ್ಲವೇನೋ!



ಈಗಲೂ ಅಷ್ಟೇ, ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಠಕ್ಕರ್ ಬಿದ್ದಿರುವುದು ಕಾಂಗ್ರೆಸ್ ಮತ್ತು ಬಿಜೆಪಿಗಾಗಲಿ, ಮಾಜಿ ಶಾಸಕ ಸೀತಾರಾಮ್ ಮತ್ತು ಹಾಲಿ ಶಾಸಕ ಅಶ್ವತ್ಥ್ ನಾರಾಯಣರ ವಿರುದ್ಧವಾಗಲಿ ಅಲ್ಲ, ಅದು ಬೀಕೆ ಹರಿಪ್ರಸಾದ್ ಪಾಳಯದ ವಿರುದ್ಧದ ಬಿಜೆಪಿಯ ಸೆಣಸಾಟವೆಂಬುದು ಯಾವತ್ತಿಗೋ ನಿಕ್ಕಿಗೊಂಡಾಗಿದೆ. ಸದ್ಯ ಮಲ್ಲೇಶ್ವರದ ಒಟ್ಟು ಏಳೂ ವಾರ್ಡುಗಳ ಪೈಕಿ ಸುಬ್ರಹ್ಮಣ್ಯನಗರ ಮತ್ತು ಅರಮನೆ ನಗರಗಳೆರಡೇ ಜನರಲ್ ವಾರ್ಡುಗಳು. ಕಾಡು ಮಲ್ಲೇಶ್ವರ ಮತ್ತು ಮಲ್ಲೇಶ್ವರ ಎರಡೂ ಬಿಸಿಎಂ-ಎ ಕ್ಯಾಟಗರಿಗೊಳಪಟ್ಟು, ಗಾಯಿತ್ರಿನಗರ ಮತ್ತು ರಾಜಾಮಹಲ್, ಗುಟ್ಟಹಳ್ಳಿಗಳು ಸಾಮಾನ್ಯ ಮಹಿಳಾ ಮೀಸಲಾತಿಗೀಡಾಗಿ ಕೊನೆಗೆ ಮತ್ತಿಕೆರೆಯೊಂದು ಮಾತ್ರ ದಲಿತರಿಗೆಂದು ಬಾಕಿಯುಳಿದಿದ್ದು ಮಲ್ಲೇಶ್ವರದ ರಾಜಕೀಯ ಬೇಗುದಿಯ ಮುನ್ಸೂಚನೆಯಷ್ಟೇ.


ಕುಮಾರ್

ಈ ಏಳೂ ವಾರ್ಡುಗಳ ಪೈಕಿ ಮಾಜಿ ಶಾಸಕ ಸೀತಾರಾಮ್ ಅಣತಿಯೇನಾದರೂ ನಡೆಯುತ್ತದೆ ಎಂದಿದ್ದರೆ ಅದು ಮತ್ತಿಕೆರೆ ವಾರ್ಡಿನಲ್ಲೇ. ಅಲ್ಲಿಗೆ ಕಾಂಗ್ರೆಸ್ ಟಿಕೆಟ್ಟು ಗಿಟ್ಟಿಸಲು ನಿಂತವನು ಕೆನರಾ ವೈನ್ಸ್ ಧಣಿ ಮಂಜುಪ್ರಕಾಶ್. ಈತ ವೈನ್‌ಸ್ಟೋರ್ ವೃತ್ತಿಯ ಜೊತೆಗೆ ಗತಕಾಲದ ಎಮ್ಮೆಲ್ಲೇ ಸೀತಾರಾಮ್ ಶಿಷ್ಯ ವೃತ್ತಿಯನ್ನು ಒಟ್ಟೊಟ್ಟಿಗೇ ಸಂಭಾಳಿಸಿದಾತ. ಈತನ ಎದುರು ಬಿಜೆಪಿಗೆ ಲಾಯಕ್ಕಾದ ಅಭ್ಯರ್ಥಿಗಳಿಲ್ಲ, ಜನಕ್ಕೆ ಕುಡಿಸಿ ಕುಡಿಸಿಯೇ ದುಂಡಗಾದ ಮಂಜುಪ್ರಕಾಶನಿಗಿಂತ ಅನಾದಿಕಾಲದ ಕನ್ನಡ ಚಳವಳಿಗಾರ ಶೇ.ಭೋ. ರಾಧಾಕೃಷ್ಣರಿಗೆ ಕಾಂಗ್ರೆಸ್ ಟಿಕೆಟ್ ಕೊಡುವುದೇ ಪುಣ್ಯಕಾರ್ಯವೆಂಬ ಭಾವನೆ ಮತ್ತಿಕೆರೆಯಲ್ಲಿದೆ. ಆದರೆ ರಾಧಾಕೃಷ್ಣರಿಗೆ ಗಾಡ್‌ಫಾದರ್‌ಗಳೆಂದು ಕಾಂಗ್ರೆಸ್ಸಿನಲ್ಲಿ ಯಾರೂ ಇಲ್ಲ, ಬಿಜೆಪಿ ಇಲ್ಲಿ ಯಾರನ್ನು ಫೀಲ್ಡಿಗೆ ತರುತ್ತೋ ಯಾರಿಗೆ ಗೊತ್ತು?



ರಕ್ಷಿತ್

ಇದೇ ಪರಿಸ್ಥಿತಿ ಬಿಜೆಪಿಗೆ ಕಾಡು ಮಲ್ಲೇಶ್ವರ ವಾರ್ಡಿನಲ್ಲೂ ಉದ್ಭವಿಸಿದೆ. ಮೊದಲು ಮಲ್ಲೇಶ್ವರಂ ಮಂಡಳದ ಬಿಜೆಪಿ ಅಧ್ಯಕ್ಷ ಶ್ರೀನಿವಾಸ್ ಇಲ್ಲಿಗೆ ಅಭ್ಯರ್ಥಿಯಾಗುತ್ತಾರೆಂಬ ಮಾತಿತ್ತು. ಬಹುಶಃ ಮಾಜಿ ಕಾಂಗ್ರೆಸ್ ಕೌನ್ಸಿಲರ್ ಮುನಿರಾಜು ಅಥವಾ ಬೀಕೆ ಹರಿಪ್ರಸಾದ್‌ರ ಪರಮನಿಷ್ಠ ವಾಣಿ ಕೃಷ್ಣಂರಾಜು ಇಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೆ ಸಲೀಸಾಗಿ ಶ್ರೀನಿವಾಸ್ ಬಿಜೆಪಿಯಿಂದ ನಿಂತು ಬಿಡುತ್ತಿದ್ದರೇನೋ. ಯಾವತ್ತು ಬಿ.ಕೆ. ಶಿವರಾಮ್‌ರ ಪುತ್ರ ರಕ್ಷಿತ್ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾರೆಂಬ ಪುಕಾರೆದ್ದಿತೋ ಬಿಜೆಪಿ ಟಿಕೆಟ್‌ಗಿದ್ದ ಪೈಪೋಟಿಯೇ ಸ್ಥಗಿತಗೊಂಡಿತ್ತು.

ರಕ್ಷಿತ್ ಶಿವರಾಮ್ ಏನಾದರೂ ಕಾಡು ಮಲ್ಲೇಶ್ವರದ ಕಾಂಗ್ರೆಸ್ ಅಭ್ಯರ್ಥಿಯಾದರೆಂದರೆ ಅದರ ಲೆಕ್ಕಾಚಾರವೇ ಬೇರೆಯಾಗುತ್ತದೆ. ರಕ್ಷಿತ್ ವಕೀಲ. ಕೋದಂಡರಾಮಪುರ, ಮಲ್ಲೇಶ್ವರ, ವೈಯಾಲಿಕಾವಲ್ ಏರಿಯಾಗಳಲ್ಲಿ ಹುಡುಗರ ಹಿಂಡೇ ಆತನ ಬೆನ್ನಿಗಿದೆ. ಹೇಳಿಕೇಳಿ ಅದು ಶಿವರಾಮ್ ಪಾಲಿಗೆ ಪ್ರತಿಷ್ಠೆ ಕೂಡ. ಹರಿಪ್ರಸಾದ್ ಕುಟುಂಬದ ಕುಡಿಯೊಂದು ರಾಜಕೀಯಕ್ಕಿಳಿದಿದೆಯೆಂದರೆ ಹಳೇ ಕಾಂಗ್ರೆಸ್ಸಿಗರೆಲ್ಲ ಸಹಜವಾಗೇ ಒಗ್ಗಟ್ಟಾಗುತ್ತಾರೆ.


ಹೀಗಾಗಿ ಶಿವರಾಮ್ ಪುತ್ರ ರಕ್ಷಿತ್ ವಿರುದ್ಧ ಬಿಜೆಪಿಗೊಂದು ಕ್ಯಾಂಡಿಡೇಟೂ ಗತಿಯಿಲ್ಲದ ಸ್ಥಿತಿ ಕಾಡು ಮಲ್ಲೇಶ್ವರದಲ್ಲಿದೆ. ಆದರೆ ರಕ್ಷಿತ್ ಎಲೆಕ್ಷನ್ನಿಗೆ ನಿಲ್ಲುವುದು ಬೀಕೆ ಹರಿಪ್ರಸಾದ್‌ಗೆ ಇಷ್ಟವಿಲ್ಲವಂತೆ. ಹಾಗೊಮ್ಮೆ ಪರಮನಿಷ್ಠ ವಾಣಿ ಕೃಷ್ಣಂರಾಜು ತಾನು ಸ್ಪರ್ಧಿಸಲಾರೆ ಎಂದರಷ್ಟೇ ಮಗನನ್ನು ನಿಲ್ಲಿಸುತ್ತೇನೆಂದು ಶಿವರಾಮ್ ಹೇಳುತ್ತಿದ್ದಾರಂತೆ.

ಇಷ್ಟಾದನಂತರ ಕಾಡು ಮಲ್ಲೇಶ್ವರಕ್ಕೆ ನಿಲ್ಲಬೇಕಿದ್ದ ಬಿಜೆಪಿಯ ಶ್ರೀನಿವಾಸ್ ವಲಸೆ ಹೋಗಲೇಬೇಕಲ್ಲ, ಈಗ ತಾನು ಮಲ್ಲೇಶ್ವರದ ಬಿಜೆಪಿ ಅಭ್ಯರ್ಥಿಯೆಂದು ಸಾಧಿಸುತ್ತಿರುವ ಶ್ರೀನಿವಾಸ್‌ಗೆ ಟಿಕೆಟ್ಟೇನೂ ಕಷ್ಟವಲ್ಲ, ಬೇಕಾಬಿಟ್ಟಿ ಬ್ರಾಹ್ಮಣರ ಓಟುಗಳಿವೆಯಾದ್ದರಿಂದ ಗೆಲ್ಲುವುದು ಬಿಜೆಪಿಗಿಲ್ಲಿ ಕಷ್ಟವೇನಲ್ಲ, ಆದರೆ ಬೀಕೆ ಹರಿಪ್ರಸಾದ್ ಬಿಟ್ಟುಕೊಡಬೇಕಲ್ಲ, ಕನಿಷ್ಠ ಮಲ್ಲೇಶ್ವರದಲ್ಲಿ ಕಾಂಗ್ರೆಸ್ ಅಸ್ತಿತ್ವ ಉಳಿಯಬೇಕೆಂದರೆ ಬಿಜೆಪಿಗೆ ಎದುರಾಗಿ ಬಲಾಢ್ಯರನ್ನೇ ನಿಲ್ಲಿಸಬೇಕು. ಹಿಂದೊಮ್ಮೆ ಕೌನ್ಸಿಲರ್ ಆಗಿದ್ದ ಮುನಿರಾಜು ಈಗತಾನೇ ಕಾಂಗ್ರೆಸ್ ಅಭ್ಯರ್ಥಿಯೆಂದು ಟಾಂಟಾಂ ಮಾಡುತ್ತಿದ್ದಾನೆ ನಿಜ. ಆದರೆ ಟಿಕೆಟ್ ಸಿಗಬೇಕಲ್ಲ.


ಶಿವರಾಂ

ಮುನಿರಾಜುಗಿಂತಲೂ ಆತನ ಸಂಬಂಧಿ ಜಯಪಾಲ್ ಅಭ್ಯರ್ಥಿಯಾದರೇನೇ ಫೈಟು ಕೊಡಲು ಸಾಧ್ಯ ಎಂಬುದು ಕೇವಲ ಹರಿಪ್ರಸಾದ್ ವಾದವಷ್ಟೇ ಅಲ್ಲ, ಹಳೇಕಾಲದ ಕಾಂಗ್ರೆಸ್ಸಿಗರಲ್ಲೂ ಇಂಥದ್ದೇ ಭಾವನೆಯಿದೆ. ದುಡ್ಡೂ ಕಾಸಿನಲ್ಲಿ ಜಯಪಾಲ್‌ಗಿಂತಲೂ ತೂಕದ ವ್ಯಕ್ತಿ ಸದ್ಯ ಕಾಂಗ್ರೆಸ್ಸಿನಲ್ಲಾರೂ ಇಲ್ಲವಾದ್ದರಿಂದ ಜಯಪಾಲ್ ಬಿಟ್ಟರೆ ಕಾಂಗ್ರೆಸ್ಸಿಗಿಲ್ಲಿ ಬೇರೆ ಅಭ್ಯರ್ಥಿಗಳಿಲ್ಲ.

ಗಾಯಿತ್ರಿನಗರ ಸಾಮಾನ್ಯ ಮಹಿಳಾ ಮೀಸಲಿಗೊಳಪಡದೇ ಹೋಗಿದ್ದರೆ ಏನಾಗುತ್ತಿತ್ತೊ, ಇಲ್ಲಿ ಬಿಜೆಪಿ ಅಭ್ಯರ್ಥಿಯಾಗ ಹೊರಟಿರುವುದು ಕೇಬಲ್ ಕುಳ ಪ್ರಫುಲ್ಲನ ಪತ್ನಿಯಂತೆ. ಹಿಂದೆ ಒಂದಲ್ಲ ಎರಡು ಬಾರಿ ಬಿಜೆಪಿಯಿಂದ ಗೆದ್ದು ಕೌನ್ಸಿಲರ್ ಆಗಿದ್ದ ಪದ್ಮಾವತಿ ವಿಜಯ್‌ಕುಮಾರ್ ತನಗೇ ಟಿಕೆಟ್ ಕೊಡುವಂತೆ ಶಾಸಕ ಅಶ್ವತ್ಥ ನಾರಾಯಣರಿಗೆ ದುಂಬಾಲು ಬಿದ್ದಿದ್ದಾರಂತೆ. ಪಾಲಿಕೆಯ ನಿವೃತ್ತ ಚೀಫ್ ಇಂಜಿನಿಯರ್ ರಾಮೇಗೌಡರ ಮಗ ಮತ್ತು ಸದ್ಯ ಪಾಲಿಕೆಯಲ್ಲಿ ಇಂಜಿನಿಯರ್ ಆಗಿರುವ ವಿಜಯ್‌ಕುಮಾರ್‌ರ ಪತ್ನಿಯಾದ ಪದ್ಮಾವತಿಗೇನಾದರೂ ಟಿಕೆಟ್ ಕೊಟ್ಟರೆ ಮುಂದೊಮ್ಮೆ ಮೇಯರ್‌ಗಾದಿಗೇ ಕೈಹಾಕಬಹುದೆಂಬ ಆತಂಕ ಬಿಜೆಪಿ ವರಿಷ್ಠರಿಗಿದೆ. ಹೀಗಾಗಿ ಕೇಬಲ್ ಪ್ರಫುಲ್ಲನ ಪತ್ನಿಗೇ ಹೆಚ್ಚು ಅವಕಾಶವಿದೆ.


ಸೀತಾರಾಂ

ಆದರೆ ಗಾಯತ್ರಿನಗರದಲ್ಲಿ ಬಿಜೆಪಿಯ ದಾರಿ ಸಲೀಸೇನಲ್ಲ. ಹಳೇ ಕಾಂಗ್ರೆಸ್ ಕಾರ್ಯಕರ್ತ ಎಸ್.ಎಂ. ರಾಜು ಆಲಿಯಾಸ್ ರೋಜಿಯ ಪತ್ನಿ ವಿಜಯಾರಿಗೇನಾದರೂ ಕಾಂಗ್ರೆಸ್ ಟಿಕೆಟ್ ಗಿಟ್ಟಿತೆಂದರೆ ಗಾಯತ್ರಿನಗರದ ಲೆಕ್ಕಾಚಾರವೇ ಬೇರೆಯಾಗುತ್ತದೆ. ರೋಜಿ ಹರಿಪ್ರಸಾದ್ ಶಿಷ್ಯ. ಆ ಕಾಲದಿಂದಲೂ ಗಾಯಿತ್ರಿನಗರದಲ್ಲಿ ಕಾಂಗ್ರೆಸ್ ಕಟ್ಟಿ ಬೆಳೆಸಿದಾತ. ಆದರೆ ದುಡ್ಡೂ ಕಾಸಿನಲ್ಲಿ ನಿಸ್ಸಹಾಯಕ. ಇದನ್ನೇ ನೆಪ ಮಾಡಿಕೊಂಡು ತನ್ನ ಛೇಲಾ ಬಟ್ಟೊ ಮೂರ್ತಿಗೆ ಅನುಕೂಲ ಮಾಡಿಕೊಡುವುದು ಸೀತಾರಾಮ್ ಹುನ್ನಾರ. ಈ ಬಟ್ಟೊ ಮೂರ್ತಿ ತನ್ನ ಪತ್ನಿ ಚಂದ್ರಮ್ಮನನ್ನು ಈ ಹಿಂದೆಯೇ ಸುಬ್ರಹ್ಮಣ್ಯ ನಗರಕ್ಕೆ ಕಾಂಗ್ರೆಸ್‌ನಿಂದ ನಿಲ್ಲಿಸಿದ್ದ. ಗೆದ್ದದ್ದು ಬಿಜೆಪಿಯ ಚೆಡ್ಡಿ ನರಸಿಂಹಯ್ಯನ ಮಗಳು. ಈಗತಾನೇ ಬಟ್ಟೊ ಮೂರ್ತಿ ಗಾಯಿತ್ರಿನಗರದಲ್ಲಿ ಏನು ಕಿಸಿಯಬಲ್ಲ?


ವಿಜಯಾ ಕುಮಾರಿ

ಇದಿಷ್ಟೇ ಆಗಿದ್ದರೆ ಹೇಗೋ ರೋಜಿ ನಿಭಾಯಿಸುತ್ತಿದ್ದನೇನೊ. ಬಟ್ಟೊ ಮೂರ್ತಿಯಲ್ಲದೇ ಪೆಟ್ರೋಲ್ ಬಂಕ್ ಚಿನ್ನಪ್ಪನ ಮಗಳು ವಿಮಲಾ ಮತ್ತು ಮಾಜಿ ಎಮ್ಮೆಲ್ಲೇ ಲಕ್ಕಣ್ಣನ ಮಗ ಗಿರೀಶನ ಪತ್ನಿಗೂ ಕಾಂಗ್ರೆಸ್ ಟಿಕೆಟ್ಟೇ ಬೇಕಂತೆ. ರೋಜಿಯ ಹೊರತಾಗಿ ಬೇರೆ ಯಾರೇ ಕಾಂಗ್ರೆಸ್ ಟಿಕೆಟ್ ತಂದರೂ ಬಿಜೆಪಿಯ ಕೇಬಲ್ ಪ್ರಫುಲ್ಲನ ಮುಂದೆ ದುಡ್ಡು ಬಿಚ್ಚಲು ಸಾಧ್ಯವಾ?

ಆದರೆ ಕೇಬಲ್ ಪ್ರಫುಲ್ಲನಿಗೂ ದಾರಿ ಸಲೀಸೇನಲ್ಲ. ಎಷ್ಟೇ ಕಾಸು ಬಿಚ್ಚಿದರೂ ಬಿಜೆಪಿ ಪಾಲಿನ ಓಟು ಕೀಳಲೆಂದೇ ರಕ್ಷಣಾ ವೇದಿಕೆ ಅಣಿಯಾಗಿದೆ. ನಾರಾಯಣಗೌಡನ ರಕ್ಷಣಾ ವೇದಿಕೆಯ ಅಭ್ಯರ್ಥಿಯಾಗಿ ಇಲ್ಲಿ ನಾಗೇಂದ್ರ ಬಾಬು ಎಂಬಾತ ರೆಡಿಯಾಗಿದ್ದಾನೆ. ನಾಗೇಂದ್ರಬಾಬು ಕನ್ನಡ ಪರ ಹೋರಾಟಗಾರ ನಿಜ. ತನ್ನ ಪತ್ನಿಯ ಮೂಲಕ ಈತ ಎಷ್ಟು ಓಟು ಕಿತ್ತರೂ ಅದು ಬಿಜೆಪಿಗೆ. ಮುಳುವಾಗುತ್ತದೆಯೇ ಹೊರತು ಕಾಂಗ್ರೆಸ್ಸಿಗಲ್ಲ.

ಪಕ್ಕದ ಸುಬ್ರಹ್ಮಣ್ಯನಗರ ಹಿಂದೆ ಲೇಡಿ ಜನರಲ್ ವಾರ್ಡಾಗಿತ್ತು. ಆಗ ಬಿಜೆಪಿಯ ಚೆಡ್ಡಿ ನರಸಿಂಹಯ್ಯ ತನ್ನ ಮಗಳನ್ನು ಗೆಲ್ಲಿಸಿಕೊಂಡಿದ್ದ. ಈಗದು ಜನರಲ್ ವಾರ್ಡಾಗಿರುವುದರಿಂದ ಎಮ್ಮೆಲ್ಲೇ ಅಶ್ವತ್ಥನಾರಾಯಣನ ತಮ್ಮ ವಿಜಯ್‌ಕುಮಾರನೇ ಬಿಜೆಪಿ ಅಭ್ಯರ್ಥಿಯಾಗುವ ಸಾಧ್ಯತೆಯಿದೆ. ಒಂದು ಮೂಲದ ಪ್ರಕಾರ ಎಮ್ಮೆಲ್ಲೇ ಸಾಹೇಬರೇ ನಿಂತು ತನ್ನ ತಮ್ಮನಿಗಾಗಿ ಜನರಲ್ ಕ್ಯಾಟಗರಿಗೊಳಪಡಿಸಿದ ಕ್ಷೇತ್ರವಿದು. ಆದರೆ ಚೆಡ್ಡಿ ನರಸಿಂಹಯ್ಯ ತಾನೇ ಎಲೆಕ್ಷನ್ನಿಗೆ ನಿಲ್ತೀನಿ ಎಂದು ಹಠಕ್ಕೆ ಬಿದ್ದಿದ್ದಾನೆ!


ಇದು ಬಿಜೆಪಿ ರಾದ್ಧಾಂತವಾದರೆ ಕಾಂಗ್ರೆಸ್ಸಿನಿಂದ ಮಾಜಿ ಮೇಯರ್ ಹುಚ್ಚಪ್ಪ ಮತ್ತು ಸೀತಾರಾಮ್‌ರ ರೈಟ್ ಹ್ಯಾಂಡ್ ಸುರೇಶ್ ಗೌಡರ ಮಧ್ಯೆ ಟಿಕೆಟ್ ಕಾಳಗ ಶುರುವಾಗಿದೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಕರ್ ಕೂಡ ಟಿಕೆಟ್ ಆಕಾಂಕ್ಷಿಯಾದರೂ ಹುಚ್ಚಪ್ಪನ ಹೆಸರೇ ಮುಂದಿದೆ. ಹುಚ್ಚಪ್ಪ ಈಗ ಹಳೇ ಕುದುರೆ. ಎಮ್ಮೆಲ್ಲೇ ತಮ್ಮನ ವಿರುದ್ಧ ಸುರೇಶ್‌ಗೌಡ ನಿಂತರಷ್ಟೇ ಕಾಂಗ್ರೆಸ್ಸಿಗೆ ಬರಕತ್ತಾದೀತು.

ಬಿ.ಕೆ. ಶಿವರಾಮ್ ಮತ್ತು ಹರಿಪ್ರಸಾದ್ ಮೇಲೆ ಜಿದ್ದಿಗೆ ಬಿದ್ದು ಕಾಂಗ್ರೆಸ್ ಕಷ್ಟ ಅರಿಯದೇ ಹೋದರೆ ಅದು ಸೀತಾರಾಮ್‌ಗೆ ನಷ್ಟವೇ ಹೊರತು ಕಾಂಗ್ರೆಸ್ಸಿಗಲ್ಲ.

● ರಾ. ಸೋಮನಾಥ್

ಅರಮನೆನಗರದ ರಾಜೇಂದ್ರನ ಸಂಕಟ



ಶ್ರೀನಿವಾಸ್


ರಾಜೇಂದ್ರ

ಈ ಹಿಂದೆ ಕೋದಂಡರಾಮಪುರದಿಂದ ಗೆದ್ದು ಕೌನ್ಸಿಲರ್ ಆಗಿದ್ದ ರಾಜೇಂದ್ರ ಈತನಕ ಪಾಲಿಕೆ ಕಂಡ ನಿಷ್ಠುರಿ ಕೌನ್ಸಿಲರ್‌ಗಳಲ್ಲೊಬ್ಬ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ, ಮೀಸಲಾತಿಯಿಂದಾಗಿ ಕಳೆದ ಬಾರಿ ಚುನಾವಣೆಗೆ ನಿಲ್ಲದೇ ಆರೇಳು ವರ್ಷಗಳ ಕಾಲ ರಾಜಕೀಯ ವನವಾಸ ಅನುಭವಿಸಿದ ರಾಜೇಂದ್ರ ಅದೆಷ್ಟೇ ಕಷ್ಟ ಬಂದರೂ ತನ್ನ ಹೋರಾಟದ ಗುಣ ಬಿಡಲಿಲ್ಲ, ಅರಮನೆ ನಗರದ ಪಾಲಿಕೆ ವಾರ್ಡ್ ಕಚೇರಿ ಬಳಿ ಸಾರ್ವಜನಿಕ ಪಾರ್ಕ್ ಮತ್ತು ಶಿಶು ವಿಹಾರಕ್ಕೆಂದು ಮಂಜೂರಾಗಿದ್ದ 20 ಸಾವಿರ ಅಡಿ ಜಾಗೆಯಲ್ಲಿ ಪಾಲಿಕೆ ಖದೀಮರೇ ನಿಂತು ಮನೆ ಕಟ್ಟಿಸಲು ಮುಂದಾದಾಗ ಸತತ ಒಂದು ತಿಂಗಳ ಕಾಲ ಪ್ರತಿಭಟಿಸಿದ ರಾಜೇಂದ್ರ ಅದನ್ನು ಪಾರ್ಕ್‌ಗಾಗಿಯೇ ಉಳಿಸಿಕೊಂಡ. ಇದರ ಪಕ್ಕದಲ್ಲೇ ಇದ್ದ ಹತ್ತು ಸಾವಿರ ಅಡಿಗಳ ಮತ್ತೊಂದು ಪಾಲಿಕೆ ಜಾಗವನ್ನು ಲೋಕಲ್ ನೆಲಗಳ್ಳರೆಲ್ಲ ಸೇರಿ ನಕಲಿ ದಾಖಲೆ ಸೃಷ್ಟಿಸಿ ಕಾಂಪೌಂಡ್ ಹಾಕಲೆತ್ನಿಸಿದಾಗಲೂ ರಾಜೇಂದ್ರನೇ ನಿಂತು ಹೋರಾಡಿ ಜಾಗ ಉಳಿಸಿಕೊಂಡ. ಆ ಜಾಗವೇ ಇವತ್ತು ಪಾಲಿಕೆಯ ಪಾರ್ಕಿಂಗ್ ತಾಣವಾಗಿದೆ.

ಸ್ವಿಮ್ಮಿಂಗ್ ಪೂಲ್ ಬಳಿಯಿದ್ದ ಪಾಲಿಕೆಯ ಕಟ್ಟಡವನ್ನು ಖಾಸಗಿಯವರು ಆಕ್ರಮಿಸಲು ಹೋದಾಗಲೂ ದುಡ್ಡಿಗೆ ಜೊಲ್ಲು ಸುರಿಸದೇ ಅದನ್ನು ಹೆಲ್ತ್ ಸೆಂಟರನ್ನಾಗಿ ರೂಪಿಸಿದ, ಚೌಡಯ್ಯ ಹಾಲ್ ಪಕ್ಕದಲ್ಲಿದ್ದ ಮೂರು ಕೋಟಿಯ ಪಾಲಿಕೆ ಆಸ್ತಿಯನ್ನು ಖದೀಮರಿಂದ ಉಳಿಸಿ ಅದನ್ನು ಜನೋಪಯೋಗಿ ಭವನವನ್ನಾಗಿ ರೂಪಿಸಿದ ರಾಜೇಂದ್ರ ರಾಜಕೀಯ ಪಿತೂರಿಯಿಂದಾಗಿ ಚುನಾವಣೆಗೆ ಸ್ಪರ್ಧಿಸದಂತಾದರೂ ತನ್ನ ಹೋರಾಟವನ್ನು ಬಿಡಲಿಲ್ಲ, ರಾಜೇಂದ್ರನನ್ನು ಮುಗಿಸಲೆಂದೇ ಕೋದಂಡರಾಂಪುರವನ್ನು ಛಿದ್ರಗೊಳಿಸಿದರು. ಕ್ಯಾಟಗರಿ ಬದಲಿಸಿದರು. ಈಗ ರಾಜೇಂದ್ರ ಅರಮನೆ ನಗರ ವಾರ್ಡಿನ ಅಭ್ಯರ್ಥಿ. ಇವತ್ತಲ್ಲ ನಾಳೆ ಮಲ್ಲೇಶ್ವರದ ಎಮ್ಮೆಲ್ಲೇ ಸ್ಥಾನಕ್ಕೆ ಪೈಪೋಟಿ ಕೊಡುವ ಎಲ್ಲಾ ಯೋಗ್ಯತೆಯಿದ್ದೂ ಆ ಕಾರಣಕ್ಕೆ ಅನ್ಯಾಯಕ್ಕೊಳಗಾದ ರಾಜೇಂದ್ರನಿಗೆ ಬಿಜೆಪಿಯವನಾದರೂ ದೋಖಾ ಮಾಡದೇ ಹೋದರೆ ಅರಮನೆ ನಗರವಾರ್ಡ್ ರಾಜೇಂದ್ರನಿಗೊಲಿಯುವುದರಲ್ಲಿ ಯಾವುದೇ ಅನುಮಾನವಿಲ್ಲ.

ಏಕೆಂದರೆ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಲಿರುವ ಶ್ರೀನಿವಾಸ್ ಕೂಡ ರಾಜೇಂದ್ರನ ಸಂಬಂಧಿಯೇ!



ಸುಬ್ರಹ್ಮಣ್ಯನಗರ ನವೀನ್ ಎಂಬ ನಿಷ್ಠನಿಗೆ ಬಿಜೆಪಿ ದೋಖಾ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸುಬ್ರಹ್ಮಣ್ಯ ...ಗರ ವಾರ್ಡೊಂದರಿಂದಲೇ ಎಮ್ಮೆಲ್ಲೇ ಅಶ್ವತ್ಥ ...ನಾರಾಯಣರಿಗೆ ಕಾಂಗ್ರೆಸ್ಸಿನ ಸೀತಾರಾಮ್‌ಗಿಂತಲೂ 2800 ... ಅಧಿಕ ಮತ ಕೊಡಿಸಿಕೊಟ್ಟ ಯುವ ನಾಯಕನ ...ದು ಜಿ. ನವೀನ್. ಸದ್ಯ ಈತ ಬಿಜೆಪಿಯ ಮನೆಮುರುಕು ...ದ್ಧಿಯ ಬಲಿಪಶು.

ತನ್ನ ಬದುಕಿನ ಹತ್ತಾರು ವರ್ಷಗಳನ್ನು ಬಿಜೆಪಿಯನ್ನು ...ಲೆಂದೇ ಮುಡುಪಿಟ್ಟು ಹೈರಾಣಾದ ನವೀನ್ ಸ್ಥಳೀಯ ...ುವಶಕ್ತಿ ಸಂಘಟನೆಯ ನಾಯಕ ಕೂಡ. ಮಾತು ...ದು. ಸುಬ್ರಹ್ಮಣ್ಯನಗರ, ಗಾಯತ್ರಿನಗರ ಸುತ್ತಮುತ್ತಲ ...ುವಕರನ್ನು ಸಂಘಟಿಸಿ ಕುಡಿತ, ಸಿಗರೇಟು ಮತ್ತು ...ಡಿಜವಮ್ ಶೋಕಿಯಿಂದ ಮುಕ್ತರನ್ನಾಗಿಸುವಲ್ಲಿ ...ಲಿರುಳೂ ಶ್ರಮಿಸಿದ ನವೀನ್‌ರನ್ನೇ ಮುಂದಿನ ಕೌನ್ಸಿಲರ್ ...ಡ್ತೀನಿ ಎಂದು ಅಶ್ವತ್ಥನಾರಾಯಣ ನಂಬಿಸಿ ಓಟು ...ಟಸಿದ್ದೇ ಕೊನೆ. ಈಗ ಚುನಾವಣೆ ಸಮೀಪಿಸುತ್ತಿದ್ದಂತೆ ...ಮ್ಮೆಲ್ಲೇ ಅಶ್ವತ್ಥನಾರಾಯಣರ ವರಸೆಯೇ ಬದಲಾಗಿದೆ.

ಬಿಜೆಪಿ ಟಿಕೆಟ್ಟೇನಿದ್ದರೂ ಮಾಜಿ ಮೇಯರ್ ಸಿ.ಎಂ. ...ಗರಾಜ್ ಪುತ್ರ ಶಶಿಕಿರಣ್‌ಗೇ ಎಂದು ಎಮ್ಮೆಲ್ಲೇ ...ಕೇಬರು ಭುಜ ಕುಣಿಸುತ್ತಿದ್ದಾರಂತೆ. ನಿನ್ನೆ ಮೊನ್ನೆಯ ...ಕ ಕಾಂಗ್ರೆಸ್ಸಿನಲ್ಲಿದ್ದು ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ... ಬೆಳೆಸಿದ ಖರ್ಗೆಗೆ ಕೈಕೊಟ್ಟು ಬಿಜೆಪಿಗೆ ನೆಗೆದವನು ...ಜಿ ಮೇಯರ್ ಸಿ.ಎಂ. ನಾಗರಾಜ್. ಅವರು ...ಕೊಂಡನಂತರ ಅವರ ಪುತ್ರ ಶಶಿಕಿರಣ್ ತಲೆ ಎತ್ತಿದ್ದಾನೆ. ಶಶಿಕಿರಣ್ ಬಿಜೆಪಿಯ ಸದಸ್ಯನಲ್ಲ, ಅದರ ...-ಸಿದ್ಧಾಂತದ ಗಂಧಗಾಳಿಯಿಲ್ಲ, ಅಪ್ಪ ಮಾಡಿಟ್ಟ ಈಸ್ಟ್ ...ಸ್ಟ್ ಶಿಕ್ಷಣ ಸಂಸ್ಥೆಗಳ ಡೊನೇಷನ್ ವಸೂಲಿ ಮತ್ತು ...ೇಡ್ ರೋಡ್ ಶೋಕಿ ಬಿಟ್ಟರೆ ಶಶಿಕಿರಣ್‌ಗೆ ...ನ್ನೊಂದು ಗೊತ್ತಿಲ್ಲ, ಹತ್ತಾರು ವರ್ಷಗಳಿಂದ ಬಿಜೆಪಿಗಾಗಿ ...ದ ತೇದ ನವೀನ್‌ರನ್ನು ವಂಚಿಸಿ ಪುಂಡರ ಗುರು ...ಕಿರಣ್‌ಗೆ ಏಕಾಏಕಿ ಬಿಜೆಪಿ ಟಿಕೆಟ್ಟು ಕೊಡುತ್ತೇನೆಂದು ...ರಟ ಎಮ್ಮೆಲ್ಲೇ ಅಶ್ವತ್ಥನಾರಾಯಣರಿಗೆ ಶಶಿಕಿರಣ್ ... ಬೆಲೆಯನ್ನೇ ಕಕ್ಕಿದ್ದಾನಂತೆ.

...ದು 1 ಕೋಟಿಯ ಮೊತ್ತವಂತೆ!

ಒಂದು ಕೋಟಿ ಕೊಟ್ಟರೆ ಕಳ್ಳನಿಗೂ ಬಿಜೆಪಿ ಟಿಕೆಟ್ಟು ...ಡುವ ಎಮ್ಮೆಲ್ಲೇ ಅಶ್ವತ್ಥನಾರಾಯಣರ ವಿರುದ್ಧ ಈಗ ...ನ್ ಮಾತ್ರ ಬಂಡೆದ್ದಿಲ್ಲ, ನವೀನ್ ಜೊತೆಗಿರುವ ...ರಡ್ನೈನೂರಕ್ಕೂ ಹೆಚ್ಚು ಯುವಕರು ಬಿಜೆಪಿಗೆ ಹಿಡಿಶಾಪ ...ಸುತ್ತಿದ್ದಾರೆ. ಒಂದಾನೊಂದು ಕಾಲಕ್ಕೆ ಸುಬ್ರಹ್ಮಣ್ಯ ...ರವೆಂದರೇನೇ ಹಳೇ ಹುಲಿ ಸುರೇಶ್‌ಗೌಡ ...ಂತಿದ್ದುದ್ದು ಈಗ ನವೀನ್‌ಮಯವಾಗಿದೆ. ನವೀನ್ ...ತರ ಅಭ್ಯರ್ಥಿ. ಕನ್ನಡ ಪರ ಹೋರಾಟದಲ್ಲಿ ಆ...ದಿಂದಲೂ ತೊಡಗಿಸಿಕೊಂಡೇ ಬಂದ ನವೀನ್ ಬೆನ್ನಿಗೆ ...ನ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಬಿ. ಶಿವರಾಮ್ ...ತ ನಿಂತಿದ್ದಾರೆ. ಕನ್ನಡ ಪರ ಸಂಘಟನೆಗಳಷ್ಟೇ ಅಲ್ಲದೇ ... ಭಾಗದ ಪ್ರಜ್ಞಾವಂತರೆಲ್ಲರೂ ನವೀನ್ ಬೆನ್ನಿಗೇ ...ದ್ದಾರಾದ್ದರಿಂದ ಬಿಜೆಪಿ ಮತ್ತು ಕಾಂಗ್ರೆಸ್‌ಗಳೆರಡೂ ...ಬಾರಿ ಸುಬ್ರಹ್ಮಣ್ಯ ನಗರದಲ್ಲಿ ನೀರು ಕುಡಿಯಲೇಬೇಕು.

● ರಾ. ಸೋ.

ಉರಿಯುವ ಮನೆಯ ಗಳ ಹಿರಿಯುವುದೆಂದರೆ...

ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡಗಳ ನಡುವಿನ ವಿಶಾಲ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಗುಂಡು ಸೂಜಿಯ ತಲೆಯಂತೆ ಕಾಣುವ ಹೈಟಿ ಎಂಬ ಪುಟ್ಟ ದೇಶ ಇಂದು ಅಕ್ಷರಶಃ ಭೂಮಿಯ ಮೇಲಿನ ನರಕವಾಗಿದೆ. ಮೊನ್ನೆ ಜನವರಿ 12ರಂದು ಮಾರಣಾಂತಿಕವಾಗಿ ಬಂದೆರಗಿದ ಭೀಕರ ಭೂಕಂಪ ಆ ಪುಟ್ಟ ನಡುಗಡ್ಡೆಯನ್ನು ಅಲ್ಲಾಡಿಸಿ ಹೆಚ್ಚೂ ಕಡಿಮೆ ಎರಡು ಲಕ್ಷ ಜನರನ್ನು ಜೀವಂತ ಸಮಾಧಿ ಮಾಡಿದೆ. ಸುಮಾರು ಐವತ್ತು ಲಕ್ಷದಷ್ಟು ಜನ ತಮ್ಮ ಮನೆಮಠ ಕಳೆದುಕೊಂಡು ಬೀದಿಯಲ್ಲಿ ನಿತ್ಯ ಸಾಯುತ್ತಿದ್ದಾರೆ. ಇಡೀ ಹೈಟಿ ಈಗ ಕೊಳೆತ ಹೆಣಗಳ



ದುರ್ವಾಸನೆಯಿಂದ ಕೂಡಿದೆ. ಎಲ್ಲೆಂದರಲ್ಲಿ ಅನ್ನನೀರಿಗಾಗಿ ಹಾಹಾಕಾರವೆದ್ದಿದೆ. ಬದುಕುಳಿದವರು ಹಸಿವು ನೀಗಿಸಿಕೊಂಡು ಜೀವ ಉಳಿಸಿಕೊಳ್ಳುವುದಕ್ಕಾಗಿ ಆಹಾರ ಧಾನ್ಯಗಳಿರುವ ಕಡೆ ದಾಳಿಯಿಡುತ್ತಿದ್ದಾರೆ. ಇಡೀ ಹೈಟಿಯ ಜನಸಂಖ್ಯೆಯೇ ಒಂದು ಕೋಟಿ ಮೀರುವುದಿಲ್ಲ, ಅವರಲ್ಲಿ ಎರಡು ಲಕ್ಷ ಜನ ಸತ್ತು, ಐವತ್ತು ಸಾವಿರ ಜನ ಮನೆಮಠ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆಂದರೆ ಹೈಟಿಯ ಪರಿಸ್ಥಿತಿ ಎಷ್ಟೊಂದು ದಾರುಣವಾಗಿದೆ ಎಂಬುದು ಅರ್ಥವಾಗುತ್ತದೆ. ಕಳೆದ ಇನ್ನೂರು ವರ್ಷಗಳಲ್ಲಿ ಹೈಟಿ ಇಂಥ ಭೀಕರ ಭೂಕಂಪವನ್ನು ಕಂಡಿರಲಿಲ್ಲ. ಹಠಾತ್ತನೆ ಎರಗಿರುವ ಈ ಪ್ರಾಕೃತಿಕ ವಿಕೋಪವನ್ನು ಎದುರಿಸಲಾಗದೇ ಅದೀಗ ಹೈರಾಣಾಗಿ ಹೋಗಿದೆ. ಹೈಟಿ ಜನರ ಬವಣೆಯನ್ನು ಕಂಡು ಮಾನವೀಯ ಕಾಳಜಿಯಿರುವ ಜನ ಅವರ ನೆರವಿಗಾಗಿ ಧಾವಿಸುತ್ತಿದ್ದಾರೆ. ವಿಶ್ವದಾದ್ಯಂತ ಅನೇಕ ದೇಶಗಳು, ಸ್ವಯಂಸೇವಾ ಸಂಸ್ಥೆಗಳು ಆಹಾರ, ನೀರು, ಬಟ್ಟೆಬರೆಗಳನ್ನು ಹೊತ್ತು ಹೈಟಿಯತ್ತ ಸಾಗುತ್ತಿದ್ದಾರೆ. ಡಾಕ್ಟರ್‌ಗಳು, ನರ್ಸ್‌ಗಳು, ವೈದ್ಯಕೀಯ ವೃತ್ತಿಯಲ್ಲಿರುವ ಅನೇಕರು ಸ್ವಯಂಪ್ರೇರಿತರಾಗಿ ಭೂಕಂಪ ಪೀಡಿತ ಜನಸಮೂಹವನ್ನು ಆರೈಕೆ ಮಾಡಲು ಹೋಗುತ್ತಿದ್ದಾರೆ. ಇದು ಇಂದಿನ ಹೈಟಿಯ ಒಂದು ಮುಖ; ಮಾನವೀಯ ಮುಖ.

ಇದೇ ಹೈಟಿಯಲ್ಲಿ ಇನ್ನೊಂದು ಮುಖವೂ ಈಗ ಅನಾವರಣಗೊಳ್ಳುತ್ತಿದೆ. ಅದು ಉರಿಯುವ ಮನೆಯಲ್ಲಿ ಗಳವನ್ನು ಹಿರಿಯುವ ಮುಖ; ಸತ್ತವರ ಸಮಾಧಿಯ ಮೇಲೆ ಸೌಧ ಕಟ್ಟುವ ಕ್ರೂರ ಮುಖ. ಈ ಮುಖವನ್ನು ತೋರಿಸುತ್ತಿರುವವರು ಬೇರಾರೂ ಅಲ್ಲ, ಹೈಟಿಯಿಂದ ಕೂಗಳತೆಯ ದೂರದಲ್ಲಿರುವ, ಜಗತ್ತಿಗೆ ಪ್ರಜಾತಂತ್ರ ಮತ್ತು ಮಾನವೀಯತೆಗಳನ್ನು ಕಲಿಸಲು ಹೊರಟಿರುವ ಅಮೆರಿಕ!

ಹಾಗೆ ನೋಡಿದರೆ ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಅಮೆರಿಕದ ಹಿತ್ತಲಿನಂತಿರುವ ಹೈಟಿ ದ್ವೀಪರಾಷ್ಟ್ರ ಮಿಲಿಟರಿ ದೃಷ್ಟಿಯಿಂದ ಬಹಳ ವ್ಯೂಹತಾಂತ್ರಿಕವಾಗಿರುವ ಪ್ರದೇಶ. ಅದನ್ನು ತನ್ನ ಕೈವಶ ಮಾಡಿಕೊಂಡು ತನ್ನ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿಕೊಂಡರೆ ಉಳಿದ ದೇಶಗಳ ಮೇಲೆ ಯುದ್ಧ ಸಾರುವುದಕ್ಕೆ ಅಮೆರಿಕಕ್ಕೆ ಬಹಳ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಅಮೆರಿಕ ಮೊದಲಿನಿಂದಲೂ ಹೈಟಿಯನ್ನು ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನ ನಡೆಸುತ್ತಲೇ ಇತ್ತು. ಅಸಲಿಗೆ 1915 ರಿಂದ 1934ರ ತನಕ ಹೈಟಿ ಅಮೆರಿಕದ ವಶದಲ್ಲೇ ಇತ್ತು. 1934ರಲ್ಲಿ ಅಮೆರಿಕದ ಸೈನ್ಯ ಅಲ್ಲಿಂದ ಕಾಲ್ತೆಗೆಯಿತಾದರೂ ಹೈಟಿಯ ಆಂತರಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದನ್ನು ಮಾತ್ರ ನಿಲ್ಲಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೈಟಿಗೆ ನುಗ್ಗಿರುವ ಅಮೆರಿಕದ ಸೇನೆ ಮತ್ತೆ ಅದನ್ನು ತನ್ನ ಮಾಹತುವನ್ನಾಗಿ ಪರಿವರ್ತನೆ ಮಾಡಿದೆ. ತಮ್ಮ ದೇಶವನ್ನು ಹೀಗೆ ಆಕ್ರಮಿಸಿಕೊಂಡಿರುವ ಅಮೆರಿಕದ ವಿರುದ್ಧ ಹೈಟಿಯನ್ನರು ಸ್ವಾಭಿಮಾನಿ ಸಶಸ್ತ್ರ ಬಂಡಾಯವನ್ನೂ ನಡೆಸಿದ್ದಾರೆ. ಆದರೆ, ಹೈಟಿಯಲ್ಲಿ ಅಮೆರಿಕದ ಕೈಗೊಂಬೆಯಂತಿರುವ ಸರ್ಕಾರವೇ ಆಡಳಿತ ನಡೆಸುತ್ತಿರುವುದರಿಂದ ಅಮೆರಿಕ ಮತ್ತು ಹೈಟಿ ಸರ್ಕಾರಗಳೆರಡೂ ಸೇರಿ ಈ ಜನಬಂಡಾಯವನ್ನು ಹತ್ತಿಕ್ಕುತ್ತಿವೆ.

ಇದೇ ಹೊತ್ತಿನಲ್ಲಿ ಬಂದೆರಗಿರುವ ಈ ಭೂಕಂಪ ಅಲ್ಲಿನ ಜನರಿಗೆ ನರಕವನ್ನು ಸೃಷ್ಟಿಸಿದ ಮಹಾಮಾರಿಯಾಗಿದ್ದರೆ ಅಮೆರಿಕದ ಪಾಲಿಗೆ ಹೈಟಿಯ ಮೇಲೆ ಇನ್ನಷ್ಟು ಮಿಲಿಟರಿ ಹಿಡಿತ ಸಾಧಿಸುವುದಕ್ಕಾಗಿ ದೊರೆತ ಅವಕಾಶವಾಗಿದೆ! ಇದು ಕೇವಲ ಅಮೆರಿಕವನ್ನು ದೂಷಿಸುವುದಕ್ಕೆ ಮಾಡುತ್ತಿರುವ ನಿರಾಧಾರ ಆರೋಪವಲ್ಲ, ಹೈಟಿಯಲ್ಲಿ ಅಮೆರಿಕದ ಸೈನ್ಯ ಮಾಡುತ್ತಿರುವ ದುಷ್ಕೃತ್ಯಗಳನ್ನು ನೋಡಿದರೆ ಹೈಟಿಯ ಮೇಲೆ ಸಂಪೂರ್ಣ ಹಿಡಿತ ಸಾಧಿಸುವುದಕ್ಕಾಗಿ ಭೂಕಂಪವನ್ನು ಹೇಗೆ ಬಳಸಿಕೊಳ್ಳುತ್ತಿದೆ ಎಂಬುದು ಚೆನ್ನಾಗಿ ಅರ್ಥವಾಗುತ್ತದೆ. ಕೆಲವು ಉದಾಹರಣೆಗಳನ್ನೇ ನೋಡಿ. ಭೂಕಂಪವಾಗುವ ಮೊದಲು ಹೈಟಿಯಲ್ಲಿ ಅಮೆರಿಕದ 4200 ಸೈನಿಕರಿದ್ದರು. ಭೂಕಂಪ ಸಂಭವಿಸಿದ ಕೆಲವೇ ಗಂಟೆಗಳಲ್ಲಿ 12,000 ಸೈನಿಕರನ್ನು ಕರೆಸಿಕೊಂಡಿದ್ದೇವೆ ಎಂದು ಹೈಟಿಯಲ್ಲಿರುವ ಅಮೆರಿಕ ಸೈನ್ಯದ ಮುಖ್ಯಸ್ಥ ಜನರಲ್ ಕೆನ್‌ಕೀನ್ ಅವರೇ ಎಬಿಸಿ ಟೀವಿ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಒಪ್ಪಿಕೊಂಡಿದ್ದಾರೆ. ಎಲ್ಲಾದರೂ ಭೂಕಂಪ, ಪ್ರವಾಹ ಮುಂತಾದ ಪ್ರಾಕೃತಿಕ ವಿಕೋಪಗಳಾದಾಗ ದಾರುಣ ಪರಿಸ್ಥಿತಿಯಲ್ಲಿರುವ ಜನರಿಗೆ ನೆರವಾಗುವುದಕ್ಕೆ ಸೈನ್ಯವನ್ನು ಕಳಿಸುವುದು ಮಾಮೂಲಿ. ಹಾಗೆಯೇ, ಹೈಟಿಯಲ್ಲೂ ಭೂಕಂಪದಿಂದ ತತ್ತರಿಸಿರುವ ಜನರ ನೆರವಿಗೆ ಅಮೆರಿಕದ ಸೈನ್ಯ ಬಂದಿದೆಯೆಂದು ಲೆಕ್ಕಾ ಹಾಕಿದರೆ ಅದು ಮೂರ್ಖತನವಾಗುತ್ತದೆ. ಏಕೆಂದರೆ ಅಮೆರಿಕ ಸೈನ್ಯ ಅಲ್ಲಿಗೆ ಬಂದಿರುವುದು ಜನರ ನೆರವಿಗಲ್ಲ, ಬದಲಿಗೆ ಅವರ ಅಸಹಾಯಕ ಪರಿಸ್ಥಿತಿಯನ್ನು ಬಳಸಿಕೊಂಡು ದೇಶದ ಮೇಲೆ ತನ್ನ ಹಿಡಿತವನ್ನು ಇನ್ನಷ್ಟು ಬಿಗಿಮಾಡುವುದಕ್ಕೆ.

ಅಮೆರಿಕದ ಹೆಚ್ಚುವರಿ ಸೈನ್ಯ ಹೈಟಿಗೆ ಬರುತ್ತಿದ್ದಂತೆಯೇ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಹಿಲ್ಲರಿ ಕ್ಲಿಂಟನ್ ಹೈಟಿಗೆ ಬಂದು ಹೈಟಿಯ ಅಧ್ಯಕ್ಷ ರೆನೆ ಪ್ರೇವಲ್ ಅವರನ್ನು ಭೇಟಿ ಮಾಡಿದ್ದಾರೆ. ಹಿಲ್ಲರಿ ಕ್ಲಿಂಟನ್ ಅವರು ಹೈಟಿಯಲ್ಲಿ ಅನ್ನನೀರಿಲ್ಲದೇ ಬಳಲುತ್ತಿರುವ ಜನರಿಗೆ ಸಹಾಯಹಸ್ತ ಚಾಚುವುದಕ್ಕಾಗಿ ಬಂದಿದ್ದಾರೆಂದೇ ಹಲವರು ಭಾವಿಸಿದ್ದರು. ಅವರ ನೈಜ ಉದ್ದೇಶ ಬಯಲಾಗುವುದಕ್ಕೆ ಬಹಳ ಸಮಯ ಹಿಡಿಯಲಿಲ್ಲ. ಅಷ್ಟು ಹೊತ್ತಿಗಾಗಲೇ ಅನ್ನನೀರು ಸಿಗದೇ ಹೈಟಿಯ ಜನ ಕಂಗಾಲಾಗಿಹೋಗಿದ್ದರಿಂದ, ಅವರಿಗೆ ಹಸಿವನ್ನು ನೀಗಿಸುವುದಕ್ಕೆ, ಬಾಯಾರಿಕೆಯನ್ನು ತಣಿಸುವುದಕ್ಕೆ ಹೈಟಿ ಸರ್ಕಾರವೂ ವಿಫಲವಾಗಿದ್ದರಿಂದ ಅನಿವಾರ್ಯವಾಗಿ ಜನ ದಂಗೆಯೆದ್ದಿದ್ದರು. ಹಿಲ್ಲರಿ ಕ್ಲಿಂಟನ್ ಅವರು ಹೈಟಿಯ ಅಧ್ಯಕ್ಷ ರೆನೆ ಪ್ರೇವಲ್ ಅವರೊಂದಿಗೆ ಚರ್ಚಿಸಿ ಈ ಜನದಂಗೆಯನ್ನು ಸದೆಬಡಿಯುವುದಕ್ಕಾಗಿ ತುರ್ತುಪರಿಸ್ಥಿತಿ ಘೋಷಿಸಬೇಕೆಂದೂ, ಅಮೆರಿಕದ ಸೈನಿಕರು ಹೈಟಿ ಜನರ ಮೇಲೆ ಕಂಡಲ್ಲಿ ಗುಂಡು ಹಾರಿಸುವುದಕ್ಕೆ, ಕರ್ಫ್ಯೂ ವಿಧಿಸುವುದಕ್ಕೆ ಅವಕಾಶ




ಸುತ್ತ ಮುತ್ತ

▸▸ ಕುಮಾರ್ ಬುರಡಿಕಟ್ಟಿ


ಮಾಡಿಕೊಡಬೇಕೆಂದೂ ಒತ್ತಾಯಿಸಿದರು! ಇದೇ ಉದ್ದೇಶಕ್ಕಾಗಿಯೇ ಅಮೆರಿಕದಿಂದ ಹೆಚ್ಚುವರಿ ಸೈನಿಕರನ್ನು ಹೈಟಿಗೆ ಕಳಿಸಿಕೊಟ್ಟಿದ್ದರು. ಹಸಿವಿನಿಂದ ಕಂಗೆಟ್ಟಿರುವ ಜನರಿಗೆ ತುತ್ತು ಖೂಳು ಹಾಕುವ ಬದಲು, ಬಾಯಾರಿಕೆಯಿಂದ ಬಸವಳಿದವರಿಗೆ ತೊಟ್ಟು ನೀರು ಕೊಡುವ ಬದಲು ಅವರನ್ನು ಗುಂಡು ಹಾರಿಸಿ ಕೊಲ್ಲುವುದಕ್ಕೆ ಪ್ಲಾನ್ ಮಾಡುತ್ತಿದ್ದರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಹಿಲ್ಲರಿ ಕ್ಲಿಂಟನ್!

ಅಮೆರಿಕ ಸಾಮ್ರಾಜ್ಯ ನಿರ್ಮಾಣವಾಗಿರುವುದೇ ಈ ರೀತಿ ಬಡದೇಶಗಳ ಹಸಿವನ್ನು, ಅಸಹಾಯಕತೆಯನ್ನು ಬಳಸಿಕೊಳ್ಳುವ ಮೂಲಕ ಮತ್ತು ಅವರ ಸ್ವಾತಂತ್ರ್ಯ ಮತ್ತು ಬದುಕಿನ ಆಕಾಂಕ್ಷೆಯನ್ನು ಕ್ರೂರವಾಗಿ ಹತ್ತಿಕ್ಕುವ ಮೂಲಕ. 1993ರಲ್ಲಿ ಆಫ್ರಿಕಾದಲ್ಲಿ ಪ್ರಾಕೃತಿಕವಾಗಿ ಅತ್ಯಂತ ಶ್ರೀಮಂತ ರಾಷ್ಟ್ರವಾದ ಸೋಮಾಲಿಯಾದಲ್ಲಿ ತೀವ್ರವಾದ



ಬರಗಾಲ ಎದುರಾಗಿತ್ತು. ಆಗ ಸೋಮಾಲಿಯಾ ದೇಶಕ್ಕೆ ಸಹಾಯ ಮಾಡುವ ಹೆಸರಲ್ಲಿ ಅಲ್ಲಿಗೆ ಕಾಲಿಟ್ಟ ಅಮೆರಿಕನ್ ಸೇನೆ ಮತ್ತೆ ಅಲ್ಲಿಂದ ಕಾಲ್ತೆಗೆಯಲೇ ಇಲ್ಲ. ಕರುಣೆ, ಸಹಾಯ, ಅನುಕಂಪದ ಹೆಸರಲ್ಲಿ ಕಾಲೂರಿದ ಅಮೆರಿಕ ಸ್ಥಳೀಯ ಜನರ ನಡುವೆ ವೈಮನಸ್ಯಗಳನ್ನು ಬೆಳೆಸಿ ದಾಯಾದಿ ಕಲಹ ಹುಟ್ಟುಹಾಕಿತು. ಸೋಮಾಲಿಯಾ ಜನ ಪರಸ್ಪರ ಕಿತ್ತಾಡುತ್ತಿರುವಾಗ ಅಲ್ಲಿನ ಸಂಪನ್ಮೂಲವನ್ನೆಲ್ಲಾ ಲೂಟಿ ಹೊಡೆಯಿತು! ಈಗ ಹೈಟಿಯಲ್ಲಿ ಅದೇ ಕಥೆ ಪುನರಾವರ್ತನೆಯಾಗುವ ಎಲ್ಲಾ ಸೂಚನೆಗಳು ಕಾಣುತ್ತಿವೆ.

ಹೈಟಿಯ ಪ್ರಮುಖ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪೋರ್ಟ್-ಆವು-ಪ್ರಿನ್ಸ್ ಎಂಬಲ್ಲಿದೆ. ಈಗ ಅದರ ಸಂಪೂರ್ಣ ಹಿಡಿತ ಅಮೆರಿಕ ಸೈನ್ಯದ ಕೈಯಲ್ಲಿದೆ. ಭೂಕಂಪದಿಂದ ಬಳಲಿದ ಜನರ ನೆರವಿಗೆ ಬರುವುದೇ ಅಮೆರಿಕದ ಉದ್ದೇಶವಾಗಿದ್ದರೆ ಈ ವಿಮಾನ ನಿಲ್ದಾಣವನ್ನು ಬಳಸಿಕೊಂಡು ದೊಡ್ಡ ಪ್ರಮಾಣದಲ್ಲಿ ಆಹಾರ ಪೊಟ್ಟಣ, ಬಟ್ಟೆ, ನೀರು, ವೈದ್ಯಕೀಯ ಸಲಕರಣೆಗಳು ಮತ್ತಿತರ ಪರಿಹಾರ ಸಾಮಗ್ರಿಗಳನ್ನು ಸಾಗಿಸಬಹುದಿತ್ತು. ಆದರೆ, ಅಮೆರಿಕ ತನ್ನ ಸೇನೆಗೆ ಬೇಕಾಗಿರುವ ಬಂದೂಕು, ಮದ್ದುಗುಂಡುಗಳು, ಮಿಲಿಟರಿ ಸಮವಸ್ತ್ರಗಳು ಮುಂತಾದ ಯುದ್ಧ ಸಾಮಗ್ರಿಗಳನ್ನು ಸಾಗಿಸುವುದಕ್ಕೆ, ತನ್ನ ಸೈನಿಕರನ್ನು ಸಾಗಿಸುವುದಕ್ಕೆ ಈ ವಿಮಾನ ನಿಲ್ದಾಣವನ್ನು ಬಳಸಿಕೊಳ್ಳುತ್ತಿದೆ. ಅಮೆರಿಕ ಎಷ್ಟೊಂದು ಕ್ರೂರವಾಗಿದೆ ಎಂದರೆ ವಿಶ್ವದಾದ್ಯಂತ ಅನೇಕ ದೇಶಗಳು, ಸ್ವಯಂ ಸೇವಾ ಸಂಸ್ಥೆಗಳು ಹೈಟಿ ಭೂಕಂಪ ಪೀಡಿತರಿಗಾಗಿ ಆಹಾರ, ಬಟ್ಟೆ, ಔಷಧಿಗಳು ಮುಂತಾದ ಪರಿಹಾರ ಸಾಮಗ್ರಿಗಳನ್ನು ವಿಮಾನಗಳಲ್ಲಿ ತುಂಬಿ ಹೈಟಿಗೆ ಕಳಿಸಿಕೊಟ್ಟರೆ ಆ ವಿಮಾನಗಳು ಇಳಿಯುವುದಕ್ಕೂ ಅಮೆರಿಕ ಸೈನ್ಯ ಅವಕಾಶ ಕೊಡುತ್ತಿಲ್ಲ. ಅನಿವಾರ್ಯವಾಗಿ ಪರಿಹಾರ ಸಾಮಗ್ರಿಗಳನ್ನು ಹೊತ್ತು ತಂದ ಈ ವಿಮಾನಗಳು ಒಂದೋ ಮರಳಿ ಆಯಾ ದೇಶಕ್ಕೆ ಹೋಗುತ್ತಿವೆ, ಇಲ್ಲವೇ ಪಕ್ಕದ ಡೊಮಿನಿಕನ್



ಗಣರಾಜ್ಯದ ರಾಜಧಾನಿ ಸ್ಯಾಂಟೋ ಡೊಮಿಂಗೋ ಎಂಬಲ್ಲಿನ ವಿಮಾನ ನಿಲ್ದಾಣದಲ್ಲಿ ಇಳಿದು ಅಲ್ಲಿಂದ ಭೂಮಾರ್ಗವಾಗಿ ಹೈಟಿಗೆ ಬರಬೇಕಾಗಿದೆ. ಫ್ರಾನ್ಸ್, ಬ್ರೆಜಿಲ್ ಮತ್ತು ಇಟಲಿಗಳಿಂದ ಆಹಾರ ಪೊಟ್ಟಣಗಳನ್ನು ಹೊತ್ತು ತಂದ ವಿಮಾನಗಳಿಗೆ ಇಳಿಯುವುದಕ್ಕೆ ಅಮೆರಿಕ ಅವಕಾಶವೇ ಕೊಡಲಿಲ್ಲವಾದ್ದರಿಂದ ಅವು ಅನಿವಾರ್ಯವಾಗಿ ಸ್ವದೇಶಕ್ಕೆ ಮರಳಿದವು. ಫ್ರಾನ್ಸ್‌ನ ವಿದೇಶಾಂಗ ವ್ಯವಹಾರಗಳ ಮಂತ್ರಿ ಬರ್ನಾರ್ಡ್ ಕೌಚ್ನರ್ ಅವರು ಅಮೆರಿಕದ ವಿದೇಶಾಂಗ ಇಲಾಖೆಯಲ್ಲಿ ಈ ಕುರಿತು ದೂರನ್ನೂ ದಾಖಲಿಸಿದ್ದಾರೆ. ರೆಡ್ ಕ್ರಾಸ್ ಸಂಸ್ಥೆ ತನ್ನ ವಿಮಾನಗಳನ್ನು ಪಕ್ಕದ ಡೊಮಿನಿಕ್ ಗಣರಾಜ್ಯದಲ್ಲಿ ಇಳಿಸಿ ಅಲ್ಲಿಂದ ಭೂಮಾರ್ಗವಾಗಿ ಪರಿಹಾರ ಸಾಮಗ್ರಿಗಳನ್ನು ಹೈಟಿ ಜನರಿಗೆ ತಲುಪಿಸುತ್ತಿದೆ.

ವಿಶ್ವ ಆಹಾರ ಕಾರ್ಯಕ್ರಮ (WFP) ಎಂಬ ಸ್ವಯಂ ಸೇವಾ ಸಂಸ್ಥೆಯ ಅಧಿಕಾರಿಗಳೇ ಹೇಳುವಂತೆ ಪ್ರತಿನಿತ್ಯ ಪೋರ್ಟ್-ಆವು-ಪ್ರಿನ್ಸ್ ವಿಮಾನ ನಿಲ್ದಾಣದಿಂದ ಏನಿಲ್ಲವೆಂದರೂ ಇನ್ನೂರು ವಿಮಾನಗಳು ಹಾರುತ್ತವೆ, ಇಳಿಯುತ್ತವೆ. ಆದರೆ, ಅವುಗಳಲ್ಲಿ ಬಹುತೇಕವು ಅಮೆರಿಕ ಸೈನ್ಯದ ಯುದ್ಧ ವಿಮಾನಗಳಾಗಿವೆ. ಅವರ ಮಾತಿನಲ್ಲೇ ಹೇಳುವುದಾದರೆ, "ಅಮೆರಿಕಕ್ಕೆ ಭೂಕಂಪವನ್ನು ಬಳಸಿಕೊಂಡು ಹೈಟಿಯನ್ನು ಆಕ್ರಮಿಸಿಕೊಳ್ಳುವುದೇ ಆದ್ಯತೆ; ನಮಗೆ ಹಸಿವಿನಿಂದ ಬಳಲುತ್ತಿರುವ ಜನರಿಗೆ ತುತ್ತು ಊಟ ಕೊಡುವುದೇ ಆದ್ಯತೆ."


ಅಮೆರಿಕ ಸೈನ್ಯದ ಅಧಿಕಾರಿಗಳೂ ಕೂಡ ಯಾವುದೇ ಮಾನಮರ್ಯಾದೆ ಇಲ್ಲದೇ "ಭೂಕಂಪಪೀಡಿತ ಹೈಟಿ ಜನರಿಗೆ ಮಾನವೀಯ ನೆರವು ಒದಗಿಸುವುದು ನಮ್ಮ ಆದ್ಯತೆಯಲ್ಲ" ಎಂದು ಸ್ಪಷ್ಟವಾಗಿ, ಬಹಿರಂಗವಾಗಿ ಘೋಷಿಸಿದ್ದಾರೆ. ಅಮೆರಿಕದಿಂದ ಔಷಧಿ, ಆಹಾರ, ವೈದ್ಯಕೀಯ ಸಲಕರಣೆಗಳನ್ನು ತುಂಬಿದ ಯುದ್ಧ ವಿಮಾನಗಳು ಹೈಟಿಗೆ ಬಂದಿಳಿಯುತ್ತಿವೆ ನಿಜ. ಆದರೆ, ಅವು ಭೂಕಂಪಪೀಡಿತ ಜನರಿಗಾಗಿ ಅಲ್ಲ, ಬದಲಿಗೆ ಆ ಜನರನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲುವ ಮಹತ್ಕಾರ್ಯ ಮಾಡುತ್ತಿರುವ ಅಮೆರಿಕನ್ ಸೈನಿಕರಿಗೆ! ಅಮೆರಿಕ ಸೈನ್ಯದ ಮೆಡಿಕಲ್ ಆಫೀಸರ್ ಕಮ್ಯಾಂಡರ್ ಆಲ್ಫ್ರೆಡ್ ಸ್ವಾಯ್‌ಹತ್ ಅವರು ವಾಲ್ ಸ್ಟ್ರೀಟ್ ಜರ್ನಲ್‌ಗೆ ಕೊಟ್ಟಿರುವ ಸಂದರ್ಶನದಲ್ಲಿ "ನನ್ನ ನಿಯಂತ್ರಣದಲ್ಲಿರುವ ವೈದ್ಯಕೀಯ ಘಟಕದಲ್ಲಿ 1000 ಭೂಕಂಪ ಪೀಡಿತ ಜನರಿಗೆ ವೈದ್ಯಕೀಯ ಚಿಕಿತ್ಸೆ ಕೊಡುವುದಕ್ಕೆ ಸಾಧ್ಯವಿದೆ. ಆದರೆ, ನನಗೆ ಮೇಲಧಿಕಾರಿಯಿಂದ ಯಾವುದೇ ಆದೇಶ ಬಂದಿಲ್ಲ" ಎಂದು ಹೇಳಿದ್ದಾರೆ. ಪರಿಣಾಮವಾಗಿ ಇದೇ ಮೆಡಿಕಲ್ ಯೂನಿಟ್ ಪಕ್ಕದಲ್ಲಿ ನಿತ್ಯ ನೂರಾರು ಜನ ಅನಾರೋಗ್ಯದಿಂದ ಬಳಲಿ ಒದ್ದಾಡುತ್ತಿದ್ದರೂ ಅವರಿಗೆ ಚಿಕಿತ್ಸೆ ಕೊಡುತ್ತಿಲ್ಲ.

ಉರಿಯೋ ಮನೆಯ ಗಳ ಹಿರಿಯೋ ಕೆಲಸ ಅಂದರೆ ಇದೇ ಅಲ್ಲವೆ?

●

ಜಾರ್ಜ್ ಫರ್ನಾಂಡಿಸ್

ಕೋಟ್ಯಂತರ ಆಸ್ತಿ ಎಲ್ಲಿಂದ ಬಂತು? ಅದಕ್ಕೀಗ ಒಡೆಯರ್ರ್ಯಾರು?



ಜಾರ್ಜ್ ಫರ್ನಾಂಡಿಸ್ ಈಗ ಡೆತ್‌ಬೆಡ್‌ನಲ್ಲಿದ್ದಾರೆ. ತನ್ನ ಸ್ವಹಿತಾಸಕ್ತಿಯನ್ನು ಬದಿಗಿಟ್ಟು ಬಡವರಿಗಾಗಿ, ಕಾರ್ಮಿಕರಿಗಾಗಿ, ನೈಜ ಸ್ವಾತಂತ್ರ್ಯ-ಸಮಾನತೆಗಳ ಅಡಿಪಾಯದಲ್ಲಿ ಭಾರತ ನಿರ್ಮಿಸುವ ಧ್ಯೇಯಕ್ಕಾಗಿ ಅವಿರತವಾಗಿ ಹೋರಾಡಿದ ಜಾರ್ಜ್ ಫರ್ನಾಂಡಿಸ್‌ಗೆ ಈ ಹೊತ್ತು ಕೋಟ್ಯಂತರ ರೂಪಾಯಿ ಆಸ್ತಿ ಎಲ್ಲಿಂದ ಬಂತು? ಪ್ರಶ್ನೆಯ ಬಗ್ಗೆ ಚರ್ಚೆ ಆರೋಗ್ಯಪೂರ್ಣ ಚರ್ಚೆಯ ಅವಶ್ಯಕತೆಯಿಲ್ಲವೆ? 2000ದಲ್ಲಿ ಬಾರಕ್ ಮಿಸೈಲ್‌ಗಳನ್ನು ಖರೀದಿಸುವಲ್ಲಿಯೂ ಜಾರ್ಜ್ ಫರ್ನಾಂಡಿಸ್ ಭಾರಿ ಗೋಲ್‌ಮಾಲ್ ಮಾಡಿ ಹಣ ನುಂಗಿದ್ದಾರೆಂದು ಖುದ್ದು ಸಿಬಿಐ ಫರ್ನಾಂಡಿಸ್ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಇವು ಬೆಳಕಿಗೆ ಬಂದ ಒಂದೆರಡು ಹಗರಣಗಳಷ್ಟೆ. ಇನ್ನು ಬೆಳಕಿಗೆ ಬರದೇ ಫರ್ನಾಂಡಿಸ್ ಅವರೊಂದಿಗೇ ಮಸಣ ಸೇರುವ ಇನ್ನೆಷ್ಟು ಹಗರಣಗಳಿವೆಯೋ ಯಾರಿಗೆ ಗೊತ್ತು?

● ಕುಮಾರ್ ಬುರಡಿಕಟ್ಟಿ


ಮಾಜಿ ಸಮಾಜವಾದಿ, ಮಾಜಿ ಕಾರ್ಮಿಕ ನಾಯಕ, ಮಾಜಿ ರಕ್ಷಣಾ ಸಚಿವ – ಹೀಗೆ ಹತ್ತು ಹಲವು 'ಮಾಜಿ'ಗಳಾಗಿರುವ ಜಾರ್ಜ್ ಫರ್ನಾಂಡಿಸ್ ಈಗ ಡೆತ್‌ಬೆಡ್‌ನಲ್ಲಿದ್ದಾರೆ. ರಾಜಕೀಯ ಪ್ರವೇಶಿಸಿದಾಗಿನಿಂದಲೂ ಒಂದಲ್ಲೊಂದು ವಿವಾದಗಳಿಗೆ ತುತ್ತಾಗಿರುವ ಅವರಿಗೀಗ ಆಲ್ ಝೈಮರ್ಸ್ ಮತ್ತು ಪಾರ್ಕಿನ್‌ಸನ್ ರೋಗಗಳಿಂದಾಗಿ ಆರುಳೋ ಮರುಳೋ ಎಂಬಂತಾಗಿದೆ. ಸಾವುಬದುಕಿನ ಮಧ್ಯೆ ತೂಗಾಡುತ್ತಿರುವ ಜಾರ್ಜ್ ಈಗ ಇನ್ನೊಂದು ವಿವಾದದ ಕೇಂದ್ರಬಿಂದುವಾಗಿದ್ದಾರೆ. ಒಂದೇ ವ್ಯತ್ಯಾಸ ಎಂದರೆ ಹಿಂದಿನ ವಿವಾದಗಳನ್ನು ಅವರೇ ಸೃಷ್ಟಿಸಿಕೊಂಡಿದ್ದರೆ ಈಗ ಅವರ ಮಾಜಿ-ಹಾಲಿ ಜೀವನ ಸಂಗಾತಿಗಳಿಬ್ಬರು ವಿವಾದವನ್ನು ಸೃಷ್ಟಿಸಿ ಫರ್ನಾಂಡಿಸ್ ಅವರನ್ನು ಅದರಲ್ಲಿ ಸಿಲುಕಿಸಿದ್ದಾರೆ.

ಮೊನ್ನೆ ಜನವರಿ ಎರಡರಂದು ಫರ್ನಾಂಡಿಸ್ ಅವರ ಅಧಿಕೃತ ಪತ್ನಿ ಲೀಲಾ ಹಾಗೂ ಅವರ ಮಗ ಸಿಯನ್ ಇಬ್ಬರೂ ಅರೆರಾತ್ರಿ ಎರಡು ಗಂಟೆಯ ಹೊತ್ತಿಗೆ ನವ ದೆಹಲಿಯ ಕೃಷ್ಣ ಮೆನನ್ ರಸ್ತೆಯಲ್ಲಿರುವ ಫರ್ನಾಂಡಿಸ್ ಮನೆಗೆ ಬಂದು ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ ಫರ್ನಾಂಡಿಸ್ ಅವರಿಂದ ಕೆಲವು ಪೇಪರ್‌ಗಳ ಮೇಲೆ ಅವರ ಹೆಬ್ಬೆಟ್ಟು ಗುರುತನ್ನು ಒತ್ತಿಸಿಕೊಂಡು ಹೋಗಿದ್ದಾರೆಂಬುದು ಪ್ರಸ್ತುತ ವಿವಾದದ ಸಾರಾಂಶ. ಲೀಲಾ ಅವರು ಜಾರ್ಜ್ ಫರ್ನಾಂಡಿಸ್ ಅವರ ಅಧಿಕೃತ ಪತ್ನಿಯಾಗಿದ್ದರೂ ಕಳೆದ ಇಪ್ಪತ್ತಾರು ವರ್ಷಗಳಿಂದ ಅವರಿಬ್ಬರೂ ಜೊತೆಗಿಲ್ಲ, ಹಾಗಂತ ಅಧಿಕೃತವಾಗಿ ಪರಸ್ಪರ ವಿವಾಹ ವಿಚ್ಛೇದನವನ್ನೂ ಪಡೆದುಕೊಂಡಿಲ್ಲ, ಈ ಇಪ್ಪತ್ತಾರು ವರ್ಷಗಳ ಸುದೀರ್ಘ ಅವಧಿಯಲ್ಲಿ ತನ್ನ ಗಂಡ ಹೇಗಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದನ್ನು ಎಂದೂ ವಿಚಾರಿಸದ ಲೀಲಾ ಈಗ ಅವರು ಹಾಸಿಗೆ ಹಿಡಿದು ಇನ್ನೇನು ಇಹ ಲೋಕ ತ್ಯಜಿಸುವುದು ಗ್ಯಾರಂಟಿಯಾಗುತ್ತಿದ್ದಂತೆಯೇ ದಿಢೀರನೇ ಪ್ರತ್ಯಕ್ಷವಾಗಿ ಫರ್ನಾಂಡಿಸ್ ಅವರಿಂದ ಕಾಗದಪತ್ರಗಳಿಗೆ ಸಹಿ ಹಾಕಿಸಿಕೊಂಡು ಹೋಗಿರುವುದು ಸಹಜವಾಗಿಯೇ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಇನ್ನೊಂದೆಡೆ ಕಳೆದ ಇಪ್ಪತ್ತಾರು ವರ್ಷಗಳಿಂದ ಜಾರ್ಜ್ ಫರ್ನಾಂಡಿಸ್ ಬದುಕಿನಲ್ಲಿ ಅವರ ಬಾಳಸಂಗಾತಿಯಾಗಿ ಲೀಲಾ ಸ್ಥಾನವನ್ನು ತುಂಬಿರುವವರು ರಾಜಕಾರಣಿ ಜಯಾ ಜೇಟ್ಲಿ. ಈ ಸುದೀರ್ಘ ಅವಧಿಯಲ್ಲಿ ಜಾರ್ಜ್ ಅವರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಾ ಅವರೊಂದಿಗೆ ಜಯಾ ಬದುಕಿದ್ದಾರೆ. ಜಾರ್ಜ್ ಅನಾರೋಗ್ಯದಿಂದ ಹಾಸಿಗೆ ಹಿಡಿದು ತಮ್ಮ ಕೊನೆಕ್ಷಣಗಳನ್ನು ಎಣಿಸುತ್ತಿರುವಾಗಲೂ ಅವರನ್ನು ಶುಶ್ರೂಷೆ ಮಾಡುತ್ತಿದ್ದದ್ದು ಜಯಾ. ಮೊನ್ನೆ ಲೀಲಾ ಮತ್ತು ಅವರ ಮಗ ಸೀನ್ ಜಾರ್ಜ್ ನಿವಾಸಕ್ಕೆ ಬಂದು ಕಾಗದ ಪತ್ರಗಳಿಗೆ ಸಹಿಹಾಕಿಸಿಕೊಳ್ಳುತ್ತಿದ್ದಾಗಲೂ ಜಯಾ ಜಾರ್ಜ್ ಬಳಿಯಲ್ಲಿದ್ದರು. ಆದರೆ ಜಾರ್ಜ್ ಅವರು ಮೊದಲಿನ ಹೆಂಡತಿಗೆ ವಿವಾಹವಿಚ್ಛೇದನ ಕೊಟ್ಟಿಲ್ಲವಾದ್ದರಿಂದ ಜಯಾ ಜೇಟ್ಲಿ ಅವರ ಬಾಳಸಂಗಾತಿಯೇ ಹೊರತು ಅಧಿಕೃತ ಪತ್ನಿಯಲ್ಲ.

ಲೀಲಾ ಅವರು ಕಾಗದಪತ್ರಗಳಿಗೆ ಸಹಿಹಾಕಿಸಿಕೊಂಡು ಅಲ್ಲಿಂದ ಕಾಲ್ತೆಗೆಯುತ್ತಲೇ "ಲೀಲಾ ಅವರು ರಾತ್ರೋರಾತ್ರಿ ಮನೆಗೆ ಬಂದು ಜಾರ್ಜ್ ಅವರ ಆರೋಗ್ಯವನ್ನಾಗಲೀ, ಚಿಕಿತ್ಸೆಯ ಬಗ್ಗೆಯಾಗಲೀ, ಔಷಧೋಪಚಾರಗಳ ಬಗ್ಗೆಯಾಗಲೀ ಏನನ್ನೂ ವಿಚಾರಿಸದೇ ಯಾವ್ಯಾವುದೋ ಕಾಗದಪತ್ರಗಳಿಗೆ ಜಾರ್ಜ್ ಅವರಿಂದ ಹೆಬ್ಬೆಟ್ಟಿನ ಸಹಿ ಪಡೆದುಕೊಂಡು ಹೋಗಿದ್ದಾರೆ; ಕಳೆದ ಇಪ್ಪತ್ತಾರು ವರ್ಷಗಳಿಂದ ಜಾರ್ಜ್ ಬದುಕಿದ್ದಾರೆಯೇ, ಸತ್ತಿದ್ದಾರೆಯೇ ಎಂಬುದನ್ನು ಎಂದೂ ವಿಚಾರಿಸದ ಅವರು ಈಗ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವಾಗ ಅವರ ಆಸ್ತಿಪಾಸ್ತಿಯನ್ನು ನುಂಗುವುದಕ್ಕೆ ದಿಢೀರನೇ ಬಂದು ಸಹಿಹಾಕಿಸಿಕೊಂಡು ಹೋಗಿರುವುದು ಜಾರ್ಜ್‌ಗೆ ತುಂಬಾ ನೋವುಂಟುಮಾಡಿದೆ; ಜಾರ್ಜ್ ಅವರೀಗ ತಮ್ಮ ಹೆಬ್ಬೆಟ್ಟನ್ನೇ ದಿಟ್ಟಿಸಿನೋಡುತ್ತಾ ಹಾಸಿಗೆ ಮೇಲೆ ಮಲಗಿದ್ದಾರೆ; ತಾವು ಆದಷ್ಟು ಬೇಗ ದೆಹಲಿಗೆ ಬನ್ನಿ" ಎಂದು ಜಯಾ ಜಾರ್ಜ್ ಸಹೋದರರಿಗೆ ಪತ್ರ ಬರೆದು ಕೇಳಿಕೊಂಡಿದ್ದಾರೆ.

ಜಾರ್ಜ್ ಅವರ ಸಹೋದರರು ದೆಹಲಿ ತಲುಪುವ ಮೊದಲೇ ಲೀಲಾ ಮತ್ತವರ ಮಗ ಸಿಯನ್ ಇನ್ನೂ ಒಂದು ಹೆಜ್ಜೆ ಮುಂದೆಹೋಗಿಬಿಟ್ಟಿದ್ದರು. ಸಿಯನ್




ಪೊಲೀಸರಿಗೆ ಪತ್ರ ಬರೆದು ತಮ್ಮ ಕುಟುಂಬಕ್ಕೆ ಭದ್ರತೆ ಬೇಕೆಂದೂ, ತಮ್ಮ ತಂದೆಯ ಆಸ್ತಿಯ ಮೇಲೆ ಕಣ್ಣಿಟ್ಟಿರುವ ಕೆಲವರು ತಂದೆಯವರ ಮತ್ತು ತಮ್ಮ ಪ್ರಾಣಕ್ಕೆ ಅಪಾಯ ಮಾಡುವ ಸಾಧ್ಯತೆಯಿರುವುದರಿಂದ ತಂದೆಯವರನ್ನು ಭೇಟಿ ಮಾಡುವುದಕ್ಕೆ ಯಾರಿಗೂ ಅವಕಾಶ ಕೊಡಬಾರದೆಂದೂ, ಕೇವಲ ತಮ್ಮ ತಂದೆ, ತಾಯಿ ಮತ್ತು ತಾವು ಇಚ್ಛಿಸುವವರನ್ನು ಮಾತ್ರವೇ ಒಳಬಿಡಬೇಕೆಂದೂ ಕೇಳಿಕೊಂಡಿದ್ದರು. ಅಂತೆಯೇ ಪೊಲೀಸರು ಜಾರ್ಜ್ ನಿವಾಸಕ್ಕೆ ಬಿಗಿ ಭದ್ರತೆಯನ್ನೂ ಒದಗಿಸಿದ್ದರು. ಬೆಂಗಳೂರಿನಲ್ಲಿ ವಾಸವಿರುವ ಜಾರ್ಜ್ ಅವರ ಅತ್ಯಂತ ಕಿರಿಯ ಸಹೋದರ ರಿಚರ್ಡ್ ದೆಹಲಿಯಲ್ಲಿ ಜಾರ್ಜ್ ಅವರನ್ನು ಭೇಟಿಯಾಗುವುದಕ್ಕೆ ಹರಸಾಹಸ ಮಾಡಬೇಕಾಗಿ ಬಂತು. ರಿಚರ್ಡ್ ಅವರೇ ಹೇಳುವಂತೆ ಪರಿಸ್ಥಿತಿ ಎಷ್ಟೊಂದು ಬದಲಾಗಿತ್ತೆಂದರೆ ಜಾರ್ಜ್ ಅವರನ್ನು ಭೇಟಿ ಮಾಡುವುದಕ್ಕೆ ಅವರ ಆಪ್ತರನ್ನೂ ಒಳಗೊಂಡಂತೆ ಅಕ್ಷರಶಃ ಯಾರಿಗೂ ಅವಕಾಶ ಮಾಡಿಕೊಡುತ್ತಿರಲಿಲ್ಲ; ಜಾರ್ಜ್ ಅವರ ಅತ್ಯಂತ ಪ್ರೀತಿಯ ಎರಡು ನಾಯಿಗಳೂ ಕೂಡ ಅವರ ಬಳಿ ಹೋಗದಂತೆ ತಡೆಯಲಾಗಿತ್ತು. ಕೊನೆಗೆ ಸಮಸ್ಯೆಯ ಸತ್ಯಾಸತ್ಯತೆಯನ್ನು ಅರಿಯುವುದಕ್ಕಾಗಿ ರಿಚರ್ಡ್ ಅವರು ಲೀಲಾ ಮತ್ತು ಸಿಯನ್‌ಗೆ ಗೊತ್ತಿರದ ಕೊಂಕಣಿ ಭಾಷೆಯಲ್ಲಿ ಪೇಪರ್‌ಗಳಿಗೆ ಸಹಿ ಮಾಡಿದರ ಬಗ್ಗೆ ಜಾರ್ಜ್ ಅವರನ್ನು ಕೇಳಿದಾಗ ಅವರು "ನನಗೆ ನೆನಪಿಲ್ಲ" ಎಂದಷ್ಟೇ ಉತ್ತರಿಸಿದರು.

ಈ ವಿಚಾರವಾಗಿ ಮಾಧ್ಯಮದವರು ಜಾರ್ಜ್ ಮಗನಾದ ಸಿಯನ್ ಅವರನ್ನು ಕೇಳಿದರೆ "ನನಗೆ ನನ್ನ ತಂದೆಯ ಆಸ್ತಿಯ ಮೇಲೆ ಕಣ್ಣಿಲ್ಲ. ನನ್ನ ಬ್ಯಾಂಕ್ ಖಾತೆಯನ್ನು ಬೇಕಾದರೆ ತೋರಿಸುತ್ತೇನೆ. ತನ್ನ ತಂದೆ ಸಂಪಾದಿಸಿದ್ದಕ್ಕಿಂತ ಹೆಚ್ಚು ದುಡ್ಡು ನನ್ನಲ್ಲಿದೆ. ಅವರ ವಯಸ್ಸಿಗೆ ನಾನು ಬರುವ ಹೊತ್ತಿಗೆ ಅವರ ಆಸ್ತಿಗಿಂತ ಅನೇಕ ಪಟ್ಟು ಹೆಚ್ಚು ಸಂಪಾದಿಸಿರುತ್ತೇನೆ. ತನ್ನ ತಂದೆಯ ಆಸ್ತಿ ದುಡ್ಡು ಎಲ್ಲವೂ ಅವರ ಯೋಗಕ್ಷೇಮಕ್ಕೆ, ಅವರ ಆಸ್ಪತ್ರೆಯ ಖರ್ಚಿಗೆ ಬಳಕೆಯಾಗಬೇಕೆಂಬುದಷ್ಟೇ ನನ್ನ ಉದ್ದೇಶ" ಎಂದು ಪುಂಗಿ ಊದುತ್ತಾನೆ. ಇನ್ನೊಂದೆಡೆ ಅವರ ತಾಯಿ ಲೀಲಾ ಅವರನ್ನು ಪ್ರಶ್ನಿಸಿದರೆ "ನಾನು ಮತ್ತು ಜಾರ್ಜ್ ಇಬ್ಬರೂ ಜೊತೆಯಲ್ಲಿಲ್ಲದಿದ್ದರೂ ನಮ್ಮ ಸಂಬಂಧವೇನೂ ಹಳಸಿರಲಿಲ್ಲ. ಕೊನೆಯ ಕಾಲದಲ್ಲಿ ಅವರೊಂದಿಗೆ ಇರಬೇಕಾದದ್ದು ಹೆಂಡತಿಯಾಗಿ ನನ್ನ ಹಾಗೂ ಮಗನಾಗಿ ಸಿಯನ್‌ನ ಕರ್ತವ್ಯ. ನನಗೆ ನನ್ನ ತಂದೆಯ ಆಸ್ತಿಯೇ ಬೇಕಾದಷ್ಟಿದೆ. ಈಗ ಜಾರ್ಜ್ ಆಸ್ತಿಗೆ ಕಣ್ಣು ಹಾಕುವ ಅವಶ್ಯಕತೆಯಿಲ್ಲ. ನನ್ನ ಮಗನಿಗೆ ಕೂಡ ತಂದೆಯ ಅವಶ್ಯಕತೆಯಿದೆ" ಎಂದು ಕಣ್ಣೀರು ಸುರಿಸುತ್ತಾಳೆ.

ಅಸಲಿಗೆ ದುಡ್ಡಿನ ವಿಚಾರದಲ್ಲಿ ಸಿಯನ್‌ಗಾಗಲೀ, ಆತನ ತಾಯಿ ಲೀಲಾಗಾಗಲೀ ಕೊರತೆಯೇನೂ ಇಲ್ಲ. ನ್ಯೂಯಾರ್ಕ್‌ನಲ್ಲಿ ಇನ್‌ವೆಸ್ಟ್‌ಮೆಂಟ್ ಆಧಾರಿತ ಬ್ಯಾಂಕರ್ ಆಗಿ ಕಾರ್ಯನಿರ್ವಹಿಸುತ್ತಿರುವ ಸಿಯನ್ ಬೇಕಾದಷ್ಟು ದುಡ್ಡು ಮಾಡಿದ್ದಾನೆ. ತಾಯಿ ಲೀಲಾ ಹುಮಾಯುನ್ ಕಬೀರ್ ಎಂಬ ದೊಡ್ಡ ರಾಜಕಾರಣಿಯ ಮಗಳು. ದೆಹಲಿಯ ಪಂಚಶೀಲ್ ಪಾರ್ಕ್‌ನಲ್ಲಿರುವ ಅವಳ ಮನೆಯೇ ಹತ್ತಾರು ಕೋಟಿ ಬಾಳುತ್ತದೆ. ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಓದಿದ ಆಕೆ ಸ್ವಂತವಾಗಿ ಬೇಕಾದಷ್ಟು ದುಡ್ಡು ದುಡಿದಿದ್ದಾರೆ. ಹೀಗಿದ್ದ ಮೇಲೂ ಜಾರ್ಜ್ ಆಸ್ತಿಯ ಮೇಲಿನ ವ್ಯಾಮೋಹ ಹೋಗಿಲ್ಲವೆ? ಅವರಿಬ್ಬರಿಗೆ ಜಾರ್ಜ್ ಮೇಲೆ ಅಷ್ಟೊಂದು ಪ್ರೇಮ ಇದ್ದರೆ ಈ ಇಪ್ಪತ್ತಾರು ವರ್ಷ ಅವರನ್ನು ಬಿಟ್ಟು ಎಲ್ಲಿ ಹೋಗಿದ್ದರು? ದಿಢೀರನೇ ಈಗ ಯಾಕೆ ಬಂದು ನಿಂತರು? ರಾತ್ರೋ ರಾತ್ರಿ ಹೆಬ್ಬೆಟ್ಟು ಸಹಿ ಯಾಕೆ ಮಾಡಿಸಿಕೊಂಡರು? ಈ ಪ್ರಶ್ನೆಗಳಿಗೆ ಲೀಲಾ ಬಳಿಯಾಗಲೀ ಅಥವಾ ಅವರ ಮಗ ಸಿಯನ್ ಬಳಿಯಾಗಲೀ ಉತ್ತರವಿಲ್ಲ.

ಅದೇನೇ ಇರಲಿ, ಈ ವಿವಾದ ಹೊರಬೀಳುತ್ತಿದ್ದಂತೆಯೇ ಮಾಧ್ಯಮಗಳಿಗೆ ಹೊಸದೊಂದು ಸುದ್ದಿ ಸಿಕ್ಕಂತಾಗಿ ದವಡೆಗೆ ಹಾಕಿಕೊಂಡು ಜಗಿಯುತ್ತಿವೆ. ಎಲ್ಲರೂ ಈಗ "ಜಾರ್ಜ್ ಆಸ್ತಿ ಯಾರಿಗೆ ಸೇರಬೇಕು? ಇಪ್ಪತ್ತಾರು ವರ್ಷಗಳ ಹಿಂದೆಯೇ ಜಾರ್ಜ್ ಅವರನ್ನು ತೊರೆದುಹೋದ ಆದರೆ ಇಂದಿಗೂ ಅವರ ಅಧಿಕೃತ ಪತ್ನಿಯಾಗಿರುವ ಲೀಲಾಗೆ ಸೇರಬೇಕೋ ಅಥವಾ ಅಧಿಕೃತ ಹೆಂಡತಿಯಾಗಿರದಿದ್ದರೂ ಇಪ್ಪತ್ತಾರು ವರ್ಷಗಳಿಂದ ಜಾರ್ಜ್ ಅವರ ಒಡನಾಡಿಯಾಗಿ, ಬಾಳಸಂಗಾತಿಯಾಗಿ, ಕಷ್ಟಸುಖಗಳಲ್ಲಿ ಭಾಗಿಯಾಗಿ




...ವ ಜಯಾ ಜೇಟ್ಲಿಗೆ ಸೇರಬೇಕೋ?" ಎಂಬ ...ನ್ನು ಮಾಡುತ್ತಿದ್ದಾರೆಯೇ ಹೊರತು "ಸಮಾಜ ...ಹೋರಾಟಗಾರರನಾದ ಜಾರ್ಜ್‌ಗೆ ಇಷ್ಟು ಆಸ್ತಿ ... ಬಂತು?" ಎಂಬ ಮೂಲಭೂತ ಪ್ರಶ್ನೆಯನ್ನು ಕೇಳುತ್ತಿಲ್ಲ.

...ವ ಲೋಕಸಭಾ ಚುನಾವಣೆಯ ಅವಧಿಯಲ್ಲಿ ...ಟ್‌ನಲ್ಲಿ ಜಾರ್ಜ್ ಅವರೇ ಅಧಿಕೃತವಾಗಿ ತಾವು ...ಟಿ ಮೌಲ್ಯದ ಆಸ್ತಿ ಹೊಂದಿರುವುದಾಗಿ ಘೋಷಿಸಿ ಅಲ್ಲದೇ ಬೆಂಗಳೂರಿನ ನೆಲಮಂಗಲದ ಹತ್ತಿರ ...ಟಿ ಬೆಲೆ ಬಾಳುವ ಹತ್ತು ಎಕರೆ ಜಮೀನಿದೆ. ...ರಿನಲ್ಲಿ ಮೂರು ಕೋಟಿ ಬೆಲೆಬಾಳುವ ಆಸ್ತಿಯನ್ನು ...ರಡು ವರ್ಷಗಳ ಹಿಂದೆ ಕಾಗದಪತ್ರಗಳಲ್ಲಿ ಕೇವಲ ...ಕ್ಕೆ ಮಾರಿದಂತೆ ತೋರಿಸಿದ್ದಾರೆ. ಇದು ಅವರ ...ಬಂದಿರುವ, ಅಧಿಕೃತವಾಗಿ ಘೋಷಿಸಿರುವ ಆಸ್ತಿ ...ನ್ನು ಅನಧಿಕೃತವಾಗಿ, ಬೇನಾಮಿಯಾಗಿ, ಸ್ವಿಸ್ ...ಗಳಲ್ಲಿ ಎಷ್ಟೆಷ್ಟಿದೆ ಎಂಬುದು ಯಾರಿಗೆ ಗೊತ್ತು? ...ಹೋರಾಟಗಾರನೊಬ್ಬನಿಗೆ ಇಷ್ಟು ಆಸ್ತಿ ಎಲ್ಲಿಂದ ...' ಎಂಬುದು ಮೂಲಭೂತ ಪ್ರಶ್ನೆ ಯಾಕೆಂದರೆ ... ಫರ್ನಾಂಡಿಸ್ ಮೂಲತಃ ಆಗರ್ಭ ಶ್ರೀಮಂತ ...ದಿಂದ ಬಂದವರಲ್ಲ. ಮಂಗಳೂರಿನ ಸಾಮಾನ್ಯ ... ವರ್ಗದ ಕುಟುಂಬದಲ್ಲಿ ಜನಿಸಿದ ಅವರಿಗೆ ...ಳ್ಳುವಂಥ ಪಿತ್ರಾರ್ಜಿತ ಆಸ್ತಿಯೇನಿಲ್ಲ. ಅವರು ...ರ ಮುಂಬೈಗೆ ತೆರಳಿದರಾದರೂ ತಮ್ಮ ಸ್ವಂತಕ್ಕೇ ... ಮಾಡಿಕೊಳ್ಳದೇ ಕಾರ್ಮಿಕರಿಗಾಗಿ ಹೋರಾಡಿ ...ಮುಂಬೈನಲ್ಲಿ ಹೋಟೆಲ್ ಕಾರ್ಮಿಕರ, ಮಿಲ್ ...ರ, ರೇಲ್ವೇ ಕಾರ್ಮಿಕರ, ಬಡಕೂಲಿಗಳ ಕಷ್ಟ ...ಗಳನ್ನು, ಶೋಷಣೆಯನ್ನು ಕೊನೆಗಾಣಿಸುವುದಕ್ಕಾಗಿ ...ವನ್ನೂ ಟ್ರೇಡ್ ಯೂನಿಯನ್‌ಗಳಲ್ಲಿ ಸಂಘಟಿಸಿ ... ಕಾರ್ಮಿಕ ಹೋರಾಟಗಳನ್ನು ನಡೆಸಿದವರು. ...ಣಕ್ಕಾಗಿಯೇ ಹೋಟೆಲ್ ಮಾಲಿಕರ, ಮಿಲ್ ... ಕ್ರೋಧಕ್ಕೆ ಬಲಿಯಾಗಿ ಅನೇಕ ಸಮಸ್ಯೆಗಳನ್ನು ...ರೆ ಎಳೆದುಕೊಂಡವರು. ಈ ಹೋರಾಟದ ...ರುಲ್ಲಿಯೇ ಸ್ವಾತಂತ್ರ್ಯ ಸಮಾನತೆಗಳ ಅಡಿಪಾಯದ ...ಂತ ಸಮಾಜವಾದಿ ರಾಜಕೀಯ ಸಿದ್ಧಾಂತವನ್ನು ...ಡಿಸಿಕೊಂಡು ಜನಪ್ರಿಯ ನಾಯಕನಾಗಿ ಹೊರ ... ಸದಾಶಿವ್ ಕಾನೋಜಿ ಪಾಟೀಲ್‌ರಂಥ ದೈತ್ಯ ...ಣಿಯನ್ನೇ ಚುನಾವಣೆಯಲ್ಲಿ ಸೋಲಿಸಿದವರು. ... ಗಾಂಧಿಯವರು ತುರ್ತುಪರಿಸ್ಥಿತಿ ಘೋಷಿಸಿ ...ನಪ್ರಿಯ ಹೋರಾಟಗಾರರನ್ನು ಸರಳುಗಳ ಹಿಂದೆ ...ಡ್ಯಂತ್ರ ರೂಪಿಸಿದಾಗ ಭೂಗತರಾಗಿದ್ದುಕೊಂಡೇ ...ಗಾಂಧಿಯ ಸರ್ವಾಧಿಕಾರಿ ಧೋರಣೆಯ ವಿರುದ್ಧ ...ತವಾಗಿ ಹೋರಾಡಿದವರು. ಕೊನೆಗೆ ಇಂದಿರಾ ... ಸರ್ವಾಧಿಕಾರಕ್ಕೆ ಬಲಿಯಾಗಿ ಬರೋಡ ...ಟ್ ಕೇಸನ್ನು ಹಾಕಿಸಿಕೊಂಡು ಜೈಲು ...ರರು. ಹೀಗೆ ತನ್ನ ಸ್ವಹಿತಾಸಕ್ತಿಯನ್ನು ಬದಿಗಿಟ್ಟು ...ಗಿ, ಕಾರ್ಮಿಕರಿಗಾಗಿ, ನೈಜ ಸ್ವಾತಂತ್ರ್ಯ-ಸಮಾನತೆ ...ಪಾಯದಲ್ಲಿ ಭಾರತ ನಿರ್ಮಿಸುವ ಧ್ಯೇಯಕ್ಕಾಗಿ ...ಗಿ ಹೋರಾಡಿದ ಜಾರ್ಜ್ ಫರ್ನಾಂಡಿಸ್‌ಗೆ ...ತ್ತು ಕೋಟ್ಯಾಂತರ ರೂಪಾಯಿ ಆಸ್ತಿ ಎಲ್ಲಿಂದ ...ಂಬ ಪ್ರಶ್ನೆ ಸಹಜವಾಗಿಯೇ ಏಳುವುದಿಲ್ಲವೆ? ...ರು ಬಗ್ಗೆ ಚರ್ಚೆ ಆರೋಗ್ಯಪೂರ್ಣ ಚರ್ಚೆಯು ...ಯಿಲ್ಲವೆ?


...ಗೆ ಜಾರ್ಜ್‌ನಲ್ಲಿದ್ದ ಸಮಾಜವಾದಿ ಹೋರಾಟ ...ರನವಾಗಿ ಎಷ್ಟೋ ವರ್ಷಗಳಾಗಿ ಹೋಗಿವೆ. ...ಗದಲ್ಲಿ ಒಬ್ಬ ಬಂಡವಾಳವಾದಿ, ಭ್ರಷ್ಟಾಚಾರಿ, ...ಪಾತಿ ರಾಜಕಾರಣಿ ಹುಟ್ಟಿಯೂ ಅಷ್ಟೇ ...ಗಿವೆ. ಸಮಾಜವಾದ ಎಂದರೇನೇ ಮೂಲಭೂತವಾಗಿ ಸಂಘಪರಿವಾರದ ಕೋಮುವಾದಕ್ಕೆ ತದ್ವಿರುದ್ಧ ವಾದಂತಹದ್ದು. ಕೋಮುವಾದ ಒಂದು ಧರ್ಮದ ಹೆಸರಿನಲ್ಲಿ ಇನ್ನಿತರ ಧರ್ಮಗಳನ್ನು ಹಿಂಸೆಯ ಮೂಲಕ ತುಳಿದು ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಹೇರುವ, ಆ ಮೂಲಕ ಬಂಡವಾಳಶಾಹಿಯ ನಿರಂತರ ಶೋಷಣೆಗೆ ಅನುವು ಮಾಡಿಕೊಡುವ ಆಶಯ ಹೊಂದಿದ್ದರೆ ಸಮಾಜವಾದ 'ಸರ್ವರಿಗೂ ಸಮಪಾಲು - ಸರ್ವರಿಗೂ ಸಮಬಾಳು' ಎಂಬ ಸಮಾನತೆಯ ತತ್ವದ ಮೇಲೆ ನಿಂತಿರುವಂತಹದ್ದು. ಸಮಾಜವಾದಿಯಾಗಿದ್ದ ಜಾರ್ಜ್ ಫರ್ನಾಂಡಿಸ್ ಕೋಮುವಾದಿಯಾಗಿದ್ದ ಬಿಜೆಪಿಯೊಂದಿಗೆ ಸೇರಿಕೊಂಡು ಕೇಂದ್ರದಲ್ಲಿ ಅಧಿಕಾರಕ್ಕೇರಿದಾಗಲೇ ಅವರಲ್ಲಿದ್ದ ಸಮಾಜವಾದಿ ಜಾರ್ಜ್ ಸತ್ತು ಹೋಗಿದ್ದರು. ಅಲ್ಲಿಂದಾಚೆಗಿನ ಜಾರ್ಜ್ ಒಬ್ಬ ಭ್ರಷ್ಟ ರಾಜಕಾರಣಿ ಮಾತ್ರವಾಗಿದ್ದರು.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿದ್ದಾಗ ಇದೇ ಜಾರ್ಜ್ ಫರ್ನಾಂಡಿಸ್ ಅತ್ಯಂತ ಸೂಕ್ಷ್ಮ ಮತ್ತು ಶ್ರೀಮಂತ ಖಾತೆಯಾಗಿದ್ದ ರಕ್ಷಣಾ ಖಾತೆಯ ಮಂತ್ರಿಯಾಗಿದ್ದರು. ರಕ್ಷಣಾ ಖಾತೆ ಎಂದರೆ ಹತ್ತಾರು ಸಾವಿರ ಕೋಟಿ ರೂಪಾಯಿ ಬಜೆಟ್‌ಅನ್ನು ಹೊಂದಿರುವ ಶ್ರೀಮಂತ ಖಾತೆ. ಜಾರ್ಜ್ ಅವರು ರಕ್ಷಣಾ ಮಂತ್ರಿಯಾಗಿದ್ದಾಗಲೇ ತೆಹಲ್ಕಾದವರು ರಕ್ಷಣಾ ಡೀಲ್ ನಾಟಕದಲ್ಲಿ ಅವರ ಪಕ್ಷಕ್ಕೆ ಕಮೀಷನ್ ಪಡೆದದ್ದನ್ನು ರೆಡ್ ಹ್ಯಾಂಡ್ ಆಗಿ ಹಿಡಿದದ್ದು ಇಡೀ ದೇಶಕ್ಕೆ ಗೊತ್ತಿದೆ. ಇಂಥ ಭ್ರಷ್ಟ ಫರ್ನಾಂಡಿಸ್‌ನ ಕೈಗೆ ದೇಶದ ರಕ್ಷಣೆಯಂಥ ಸೂಕ್ಷ್ಮ ಖಾತೆಯನ್ನು ಕೊಟ್ಟರೆ ಹಾದುಗಲೇ ದೇಶವನ್ನು ಮಾರಿಕೊಳ್ಳುತ್ತಾನೆಂದು ಇಡೀ ದೇಶದಾದ್ಯಂತ ಫರ್ನಾಂಡಿಸ್ ವಿರುದ್ಧ ಕೂಗೆದ್ದಿತ್ತು. ಒಂದಿಷ್ಟು ಕಾಲ ರಾಜೀನಾಮೆ ಕೊಟ್ಟಂತೆ ಮಾಡಿ ಯಾವುದೇ ನಾಚಿಕೆ, ಮಾನ, ಮರ್ಯಾದೆಯಿಲ್ಲದೇ ಮತ್ತದೇ ರಕ್ಷಣಾ ಖಾತೆಗೆ ಬಂದು ಕುಳಿತಿದ್ದರು ಈ ಜಾರ್ಜ್ ಫರ್ನಾಂಡಿಸ್. ಕಾರ್ಗಿಲ್ ಯುದ್ಧದ ಸಮಯದಲ್ಲಿ ನಮ್ಮ ಸೈನಿಕರು ವಿದೇಶಿ ಆಕ್ರಮಣಕಾರರ ವಿರುದ್ಧ ಹೋರಾಡಿ ಸತ್ತಾಗ ಇಡೀ ದೇಶವೇ ಅವರ ಕುಟುಂಬಗಳ ಬೆಂಬಲಕ್ಕೆ ನಿಂತಿತ್ತು. ಎಷ್ಟರಮಟ್ಟಿಗೆ ಎಂದರೆ ಸತ್ತ ಯೋಧರ ಕುಟುಂಬಗಳಿಗೆ ಆರ್ಥಿಕವಾಗಿ ನೆರವಾಗಲೆಂದು ಬೀದಿಯಲ್ಲಿ ಭಿಕ್ಷೆ ಎತ್ತುವವನೂ ಸಹ ತನ್ನ ಭಿಕ್ಷೆಯಲ್ಲಿ ಒಂದು ಪಾಲನ್ನು ದಾನವಾಗಿ ಕೊಟ್ಟಿದ್ದ. ಈ ಹಣವನ್ನು ಸಂಗ್ರಹಿಸಿದ ಸರ್ಕಾರ ಅದನ್ನು ಸೂಕ್ತ ರೀತಿಯಲ್ಲಿ ಬಳಸುವುದಕ್ಕೆ ಫರ್ನಾಂಡಿಸ್ ನೇತೃತ್ವದ ರಕ್ಷಣಾ ಇಲಾಖೆಗೆ ಕೊಟ್ಟಿತ್ತು. ಆದರೆ ಶ್ರೀಮಾನ್ ಜಾರ್ಜ್ ಫರ್ನಾಂಡಿಸ್ ಅವರು ಮೃತ ಯೋಧರನ್ನು ಸಾಗಿಸುವ ಶವಪೆಟ್ಟಿಗೆ ಖರೀದಿಸುವಲ್ಲಿ ಭಾರೀ ಗೋಲ್‌ಮಾಲ್ ಮಾಡಿ ಆ ಹಣವನ್ನೂ ನುಂಗಿನೀರುಕುಡಿದಿದ್ದರು. ಅಷ್ಟೇಅಲ್ಲ, 2000ದಲ್ಲಿ ಬಾರಕ್ ಮಿಸೈಲ್‌ಗಳನ್ನು ಖರೀದಿಸುವಲ್ಲಿಯೂ ಜಾರ್ಜ್ ಫರ್ನಾಂಡಿಸ್ ಭಾರಿ ಗೋಲ್‌ಮಾಲ್ ಮಾಡಿ ಹಣ ನುಂಗಿದ್ದಾರೆಂದು ಖುದ್ದು ಸಿಬಿಐ ಫರ್ನಾಂಡಿಸ್ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಇವು ಬೆಳಕಿಗೆ ಬಂದ ಒಂದೆರಡು ಹಗರಣಗಳಷ್ಟೆ. ಇನ್ನು ಬೆಳಕಿಗೆ ಬರದೇ ಫರ್ನಾಂಡಿಸ್ ಅವರೊಂದಿಗೇ ಮಸಣ ಸೇರುವ ಇನ್ನೆಷ್ಟು ಹಗರಣಗಳಿವೆಯೋ ಯಾರಿಗೆ ಗೊತ್ತು?

ಅಸಲಿಗೆ ಜಾರ್ಜ್ ಫರ್ನಾಂಡಿಸ್ ಅವರಿಗೆ ಇಷ್ಟೊಂದು ಆಸ್ತಿ ಎಲ್ಲಿಂದ ಬಂತು ಎಂಬ ಮೂಲಭೂತ ಪ್ರಶ್ನೆಯನ್ನಿಟ್ಟು ಮಾಧ್ಯಮಗಳು ಚರ್ಚೆ ನಡೆಸಿದ್ದರೆ ಪ್ರಾಯಶಃ ಇನ್ನೊಂದಿಷ್ಟು ಹಗರಣಗಳು ಬಯಲಿಗೆ ಬೀಳುತ್ತಿದ್ದವೇನೋ? ಆದರೆ, ಅದನ್ನೆಲ್ಲಾ ಬಿಟ್ಟು 'ಅವರ ಆಸ್ತಿ ಯಾರಿಗೆ ಸೇರಬೇಕು' ಎಂಬ ಚರ್ಚೆ ನಡೆಸುವ ಮೂಲಕ ಫರ್ನಾಂಡಿಸ್ ಅವರನ್ನು ಸೇಫಾಗಿ ಬಿಳ್ಕೊಡುವುದಕ್ಕೆ ಪ್ರಯತ್ನಿಸುತ್ತಿವೆ. ಇದರೊಂದಿಗೆ ಸಮಾಜವಾದಿಯೊಬ್ಬ ಸ'ಮಜಾ'ವಾದಿಯಾಗಿ ಪರಿವರ್ತನೆಗೊಂಡ ಕತೆಯೂ ಮುಕ್ತಾಯವಾಗುವಂತಿದೆ. ●



ಮಂಜುನಾಥನ ರಿಯಲ್ ಸ್ಟೋರಿ!



ಒಂದು ಪತ್ರ

ಈ ವಾರದ ಸಂಚಿಕೆಯಲ್ಲಿ 'ಕರ್ನಾಟಕ ರತ್ನ ಪ್ರಶಸ್ತಿ' ಪಡೆದ ವೀರೇಂದ್ರ ಹೆಗ್ಗಡೆಯವರ ಬಗ್ಗೆ ಬರೆಯುತ್ತಾ ಧರ್ಮಸ್ಥಳದಲ್ಲಿ ಮೂಲತಃ ವಾದಿರಾಜರಿಂದ ಮಂಜುನಾಥಸ್ವಾಮಿ ಪ್ರತಿಷ್ಠಾಪಿಸಲ್ಪಟ್ಟಿತು ಎನ್ನಲಾಗಿದೆ. ಆದರೆ ಇದು ಸರಿಯಲ್ಲ.

ಕಟ್ಟರ್ ವೈಷ್ಣವ ಮತಾಂಧರಾಗಿದ್ದ ವಾದಿರಾಜರು ಶೈವ ದೇವಸ್ಥಾನವೊಂದರಲ್ಲಿ ಶಿವಲಿಂಗ ಪ್ರತಿಷ್ಠಾಪಿಸಿದರು ಎನ್ನುವುದು, ಅವರ ವೈಷ್ಣವ ಮತಾಂಧತೆಯನ್ನು ಹಾಗೂ ಅವರು ನಡೆಸಿದ ಧಾರ್ಮಿಕ ಉತ್ಪಾತವನ್ನು ಮರೆಮಾಚುವುದಕ್ಕಾಗಿ ನಂತರ ಸೃಷ್ಟಿಸಿದ ಕಾಲ್ಪನಿಕ ಕಥೆಗಳು ಅಷ್ಟೇ. ಮಧ್ವಾಚಾರ್ಯರು ಮಧ್ವ ಸ್ಥಾಪಿಸಿದರಾದರೂ ಅದು ತುಳುನಾಡಿನಲ್ಲಿ ಹೆಚ್ಚು ಜನಪ್ರಿಯಗೊಂಡಿರಲಿಲ್ಲ. ಅದನ್ನು ಕಂಡು ವಾದಿರಾಜರು ತಮ್ಮ ಶಿಷ್ಯರ ಗೂಂಡಾಪಡೆ ಕಟ್ಟಿಕೊಂಡು ತುಳುನಾಡಿನ ಶೈವ ದೇವಸ್ಥಾನಗಳಿಗೆಲ್ಲಾ ನುಗ್ಗಿ ಅಲ್ಲಿಯ ಶೈವ (ಸ್ಮಾರ್ತ) ಅರ್ಚಕರನ್ನೆಲ್ಲಾ ಬಲಾತ್ಕಾರವಾಗಿ ವೈಷ್ಣವ ಪಂಥಕ್ಕೆ ಮತಾಂತರಿಸಿ, ಆ ದೇವಸ್ಥಾನಗಳಲ್ಲಿ (ಧರ್ಮಸ್ಥಳ ಸಹಿತ) ಕೃಷ್ಣ ಸಾಲಿಗ್ರಾಮವನ್ನು ಶಿವಲಿಂಗಗಳ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಿ ಶೈವ ದೇವಸ್ಥಾನಗಳಲ್ಲೆಲ್ಲಾ ವೈಷ್ಣವ ಪದ್ಧತಿಯಲ್ಲಿ ಪೂಜಾವಿಧಿಯನ್ನು ಹೇರಿದ್ದು ತುಳುನಾಡಿನ ಇತಿಹಾಸದಲ್ಲಿ ನಮೂದಿತವಾಗಿದೆ.

ಹಾಗಾಗಿ ಇವತ್ತು ತುಳುನಾಡಿನ ಹೆಚ್ಚಿನ ಶೈವ ದೇವಸ್ಥಾನಗಳಲ್ಲಿ (ಶಿವ-ದುರ್ಗೆ-ಸುಬ್ರಮಣ್ಯ), ಅರ್ಚಕರು ವೈಷ್ಣವರಾಗಿದ್ದು, ಪೂಜಾವಿಧಿಗಳೆಲ್ಲಾ ವೈಷ್ಣವ ಪದ್ಧತಿಯಲ್ಲಿದೆ ಹಾಗೂ ಶಿವನಿಗೆ ಪ್ರಿಯವಾದ ವಿಭೂತಿ ಇಲ್ಲಿನ ಅರ್ಚಕರಿಗೆ ವರ್ಜ್ಯ. ಇನ್ನು ಧರ್ಮಸ್ಥಳ ಎಂಬ ಹಿಂದೂ ದೇವಾಲಯ ವಿರೇಂದ್ರ ಹೆಗ್ಗಡೆಯ ಜೈನ ಕುಟುಂಬದ ಕೈಯಲ್ಲಿರಲು ಕಾರಣ, ತುಳುನಾಡಿನ ಹೆಚ್ಚಿನ ಎಲ್ಲಾ ದೇವಸ್ಥಾನಗಳನ್ನು ಕಟ್ಟಿಸಿದವರು ಆಗ ಜಮೀನುದಾರರಲ್ಲಿ ಬಹುಸಂಖ್ಯಾತರಾಗಿದ್ದ ಜೈನರು ಅಥವಾ ಮಾಸಾದಿ-ಜೈನರು (ಅರ್ಥಾತ್-ಬಂಟರು). ಗುಡಿ ಕಟ್ಟಿಸಿದವರೇ ಧರ್ಮದರ್ಶಿ, ಮೊಕ್ತೇಸರರಾಗಿರುವುದು ಎಲ್ಲೆಡೆ ಸಾಮಾನ್ಯ. ಜೈನರ ಹಾಗೂ ಮಾಸಾದಿ-ಜೈನರ (ಬಂಟರ) ಕುಲದೇವರು ಸೋಮನಾಥ ಅಥವಾ ಮಹಾಲಿಂಗೇಶ್ವರ (ಪೋರ್ಚುಗೀಸರನ್ನು ಹೊಡೆದೋಡಿಸಿದ ಉಲ್ಲಾಳದ ರಾಣಿ ಅಬ್ಬಕ್ಕ ದೇವಿ ಜೈನಳಾದರೂ ಅವಳ ಮನೆ ದೇವರು ಸಹಾ "ಸೋಮನಾಥ" ಎಂದು ಇತಿಹಾಸದಲ್ಲಿ ಉಲ್ಲೇಖಿತವಾಗಿದೆ).

ಇನ್ನು ಧರ್ಮಸ್ಥಳದ ದೇವರು ಮಂಜುನಾಥನ ಇತಿಹಾಸದ ಬಗ್ಗೆ ಹೇಳಬೇಕೆಂದರೆ, ಈಗ ಲಭ್ಯವಿರುವ ಜನಜನಿತ ಐತಿಹ್ಯದ ಪ್ರಕಾರ, ಧರ್ಮಸ್ಥಳದಲ್ಲಿ ಪೂಜೆಗೊಳ್ಳುತ್ತಿರುವ ಲಿಂಗ ಮೂಲತಃ ಮಂಗಳೂರಿನ ಕದ್ರಿ ಮಂಜುನಾಥ ದೇವಸ್ಥಾನದಿಂದ ತಂದಿದ್ದಂತೆ. ಕದ್ರಿ ದೇವಸ್ಥಾನ 9ನೇ ಶತಮಾನದಲ್ಲಿ ಉತ್ತರ ಭಾರತದಿಂದ ವಲಸೆ ಬಂದ ನಾಥ ಪಂಥೀಯರಿಂದ ಸ್ಥಾಪಿತವಾದುದು. 15ನೇ ಶತಮಾನದಲ್ಲಿ 'ಅಣ್ಣಪ್ಪ' ಎನ್ನುವ ಕದ್ರಿನಾಥ ಮಠದ ಜೋಗಿಯೊಬ್ಬನು ಇತರ ನಾಥ ಪಂಥೀಯರೊಂದಿಗೆ ಭಿನ್ನಾಭಿಪ್ರಾಯ ಬಂದು ರಾತ್ರೋರಾತ್ರಿ ಕದ್ರಿಯ ಮೂಲ ಲಿಂಗವನ್ನು ಕಿತ್ತುಕೊಂಡು ಓಡಿಹೋಗಿ ದೂರದ 'ಕುಡುಮ' ಎಂಬ ಹಳ್ಳಿಯಲ್ಲಿ ಜೈನರ ಮನೆಯೊಂದರಲ್ಲಿ ಆಶ್ರಯ ಪಡೆದನಂತೆ. ನಂತರ ಅಲ್ಲಿಯೇ ಆ ಲಿಂಗವನ್ನು ಪ್ರತಿಷ್ಠಾಪಿಸಿ, ಆ ಜೈನ ಕುಟುಂಬದ ಸಹಾಯದಿಂದ ಗುಡಿ ನಿರ್ಮಾಣ ಮಾಡಿದನಂತೆ. ಅದೇ ಈಗಿನ ಧರ್ಮಸ್ಥಳ.


ಆ ಜೋಗಿ ಅಣ್ಣಪ್ಪ ಇಂದು ಅಲ್ಲಿ "ಅಣ್ಣಪ್ಪ ದೈವ (ಭೂತ)" ಎಂಬ ರೂಪದಲ್ಲಿ ಪೂಜಿಸಲ್ಪಡುತ್ತಾನೆ. ಆದರೆ ಈ ಮಂಜುನಾಥ ದೇವರನ್ನು ಪ್ರತಿಷ್ಠಾಪಿಸಿದ ಅಣ್ಣಪ್ಪ ಹಿಂದುಳಿದ ವರ್ಗದವನಾದುದರಿಂದ ಮೇಲ್ವರ್ಗದ ಜನರಲ್ಲಿ ಈ ದೇವಸ್ಥಾನದ ಕಾರಣಿಕದ ಬಗ್ಗೆ ನಂಬಿಕೆ ಕಡಿಮೆಯಾಗಬಹುದು ಎಂಬ ಭಯದಿಂದ ಆಗಿನ ಅರ್ಚಕರು ಹಾಗೂ ಊಳಿಗಮಾನ್ಯ ಸಮಾಜದವರು, ಬ್ರಾಹ್ಮಣರಾದ ವಾದಿರಾಜರು ಮಂಜುನಾಥನನ್ನು ಪ್ರತಿಷ್ಠಾಪಿಸಿದ್ದು ಎಂಬ ಕಥೆಯನ್ನು ಹರಿಯಬಿಟ್ಟಿದ್ದು.

ನಿಜವಾಗಿ ವಾದಿರಾಜರು ಈ ದೇವಸ್ಥಾನಕ್ಕೆ ಭೇಟಿ ಕೊಟ್ಟಿದ್ದು 15ನೇ ಶತಮಾನದ ಕೊನೆಯ ಭಾಗದಲ್ಲಿ. ಅದೂ ಅಲ್ಲಿ ತಮ್ಮ ಸಾಲಿಗ್ರಾಮವನ್ನು ಬಲಾತ್ಕಾರವಾಗಿ ಪ್ರತಿಷ್ಠಾಪಿಸಿ ಅರ್ಚಕರನ್ನು ಮತಾಂತರಿಸಲು ಮಾತ್ರ. ಹಾಗೆ ನೋಡಿದರೆ ಭಾರತದ ಎಲ್ಲೆಡೆಯೂ ಶೂದ್ರರು ಮಾಡಿದ ಘನಕಾರ್ಯಗಳ ಪುರಾಣ-ಇತಿಹಾಸಗಳನ್ನು ತಿರುಚಿ ಮೇಲ್ಜಾತಿಗೆ ಕ್ರೆಡಿಟ್ ಕೊಡುವ ಪರಿಪಾಠ 3 ಸಾವಿರ ವರ್ಷಗಳಿಂದ ನಡೆದುಬಂದಿರುವ ಸತ್ಯ ತಾನೆ!

-ಬಿ.ಎಸ್. ಶೆಟ್ಟಿ, ಮಂಗಳೂರು

▸▸ ಕಾರ್ಟೂನ್ ಕಾರ್ನರ್






ಹೆಣ್ಣುಮಕ್ಕಳೇ ಎಚ್ಚರಿಕೆ!

ಹ್ಯೂಮನ್ ರೈಟ್ಸ್ ವಂಚಕ ವಿವೇಕಾನಂದ

ಎಂತೆಂಥದೋ ಬ್ಲೇಡ್ ಕಂಪೆನಿಗಳನ್ನು ಕಂಡಿದ್ದೇವೆ. ನಕಲಿ ದಾಖಲೆ ಸೃಷ್ಟಿಸಿ ನೆಲ ನುಂಗುವ ಭೂಕಂಟಕರು, ಪಿಕ್ ಪಾಕೆಟರ್ಸ್, ಮನಿ ಡಬ್ಲಿಂಗ್, ರೋಲ್‌ಕಾಲ್ ವೀರರು, ನಕಲಿ ಹೋರಾಟಗಾರರು... ಹೀಗೆ ಮುಂಡಾಮೋಚುವ ಥರೇವಾರಿ ಸ್ಟೈಲುಗಳ ಪೈಕಿ ಈತನದು ವಿನೂತನ ಶೈಲಿಯ ಹೈಟೆಕ್ ದೋಖಾ.

ಪೊಲೀಸ್ ಇಲಾಖೆಯಷ್ಟೇ ಏಕೆ ಮಾನವ ಹಕ್ಕು ಆಯೋಗ, ಲೋಕಾಯುಕ್ತ ದಂಥ ಸರ್ಕಾರಿ ಸಂಸ್ಥೆಗಳೇ ನಾಚಬೇಕು!


ಇನ್ಸ್‌ಪೆಕ್ಟರ್ ಲೋಕೇಶ್ವರ್

ಈತನ ಹೆಸರು ವಿವೇಕಾನಂದ. ಎಸ್.ವಿ. ಕುಡ್ತರ್‌ಕರ್, ಎಸ್.ಕೆ. ವಿವೇಕ್ ಇತ್ಯಾದಿ ಹೆಸರಲ್ಲಿ ಬೇರೆಬೇರೆ ವಲಯಗಳಲ್ಲಿ ಚಾಲ್ತಿಯಲ್ಲಿ ರುವ ಈತ ಮಾನವ ಹಕ್ಕು ಆಯೋಗದ ಅಧ್ಯಕ್ಷನಂತೆ. ತನ್ನ ಕಾರಿನ ಮೇಲೆ KSHRC ಎಂದೇ ಕರ್ನಾಟಕ ಹ್ಯೂಮನ್ ರೈಟ್ಸ್ ಕಮೀಷನ್ನಿನ ಬೋರ್ಡು ಬರೆಸಿಕೊಂಡಿದ್ದಾನೆ. ಕಾರಿಗೆ ಕ್ಯಾಬಿನೆಟ್ ಮಂತ್ರಿಗಳಂತೆ ಕೆಂಪು ದೀಪವೊಂದನ್ನು ತಗುಲಿಸುತ್ತಾನೆ. ಸುತ್ತ ಯಾವತ್ತೂ ತಮಿಳು ಗೂಂಡಾಗಳ ಪಡೆಯಿರುತ್ತದೆ. ಸಾಕ್ಷಾತ್ ಮಂತ್ರವಾದಿಯಂತೆ ಗಡ್ಡಬಿಟ್ಟು ಉದ್ದದ ಕುಂಕುಮ ನಾಮ ಧರಿಸುತ್ತಾನೆ. ಜೊತೆಗಿದ್ದ ರೌಡಿಗಳಿಗೂ ಉದ್ದುದ್ದ ನಾಮ ಹಾಕಿಸುತ್ತಾನೆ. ನೋಡಿದ ಯಾರಿಗಾದರೂ ಈತ ಹ್ಯೂಮನ್ ರೈಟ್ಸ್ ಕಮೀಷನ್ನಿನ ಅಧ್ಯಕ್ಷನಾ ಅಥವಾ ಖತರ್‌ನಾಕ್ ರೌಡಿಯಾ ಎಂದು ಕನ್‌ಫ್ಯೂಸ್ ಆಗಲೇಬೇಕು.

ಹಕೀಕತ್ತೇನೆಂದರೆ ಮಾನವಹಕ್ಕು ಆಯೋಗಕ್ಕೂ ಈತನಿಗೂ ಬಿಲ್‌ಕುಲ್ ಸಂಬಂಧವಿಲ್ಲ, ಮಾನವಹಕ್ಕೆಂಬ ಶಬ್ದದ ಅರ್ಥವಾಗಲಿ, ಮನುಷ್ಯತ್ವದ ಗಂಧಗಾಳಿಯಾಗಲಿ ಈತನಿಗಿದ್ದಿದ್ದರೆ ಇವತ್ತು ಮಹಿಳಾ ಸಂಘಟನೆಗಳಿಂದ ಎಕ್ಕಡ ದೇಟು ತಿಂದು ಪರಾರಿಯಾಗುತ್ತಿರಲಿಲ್ಲ, ಸದ್ಯ ಪ್ರಿಯಾಂಕಾ ಎಂಬ ನೊಂದ ಹೆಣ್ಣುಮಗಳ ಕಣ್ಣೀರಲ್ಲೇ ಕೈತೊಳೆಯಲು ಯತ್ನಿಸಿ ಉಪ್ಪಾರಪೇಟೆ ಪೊಲೀಸರನ್ನು ಮೇಲೆಳೆದುಕೊಂಡು ಭೂಗತನಾಗಿರುವ ಈತನ ಕೈಗೆ ಇನ್ಸ್‌ಪೆಕ್ಟರ್ ಲೋಕೇಶ್ವರ್ ಸ್ಲೇಟು ಕೊಡುವುದೊಂದೇ ಬಾಕಿ.

ನೊಂದು ನ್ಯಾಯ ಕೇಳಲು ಬಂದ ನಂದಿನಿ ಲೇಔಟಿನ ಪ್ರಿಯಾಂಕಾ ಎಂಬ ನತದೃಷ್ಟೆಯನ್ನು ವಂಚಿಸಲು ಹೋಗಿ ಮಹಿಳಾ ಸಂಘಟನೆಗಳಿಂದ ಮಂಗಳಾರತಿ ಮಾಡಿಸಿಕೊಂಡ ವಿವೇಕಾನಂದ ಮತ್ತು ಆತನ ಐನಾತಿ ಅಣ್ಣ ಸತೀಶ್ ಕುಡ್ತರ್‌ಕರ್ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯೊಂದರಲ್ಲೇ ಐದಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ. ಎಲ್ಲವೂ ವಂಚನೆ ಕೇಸುಗಳೇ. ಸ್ಪಂದನ ಸಂಘಟನೆಯ ಮೇಲೆ ಹಲ್ಲೆ ನಡೆಸಿದ ಒಂದು ಕೇಸು, ಶಿವಶಕ್ತಿ ಮಹಿಳಾ ಸಂಘದ ಅಧ್ಯಕ್ಷೆ ಉಮಾದೇವಿಯವರ ಮೇಲೆ ಕೈ ಮಾಡಿದ ಮತ್ತೊಂದು ಕೇಸು, ಥೆರೇಸಾ ಮೇರಿ, ಸಂಗೀತಾ ಮತ್ತು ಲಲಿತಮ್ಮ ಎಂಬ ಮಹಿಳೆಯರನ್ನು ವಂಚಿಸಿದ ಇತರೇ ಮೂರು ಕೇಸುಗಳಲ್ಲದೇ ದಿನಕ್ಕೊಂದು ಹೊಸ ದೂರುಗಳು ಇವತ್ತಿಗೂ ಉಪ್ಪಾರಪೇಟೆ ಪೊಲೀಸ್ ಇನ್ಸ್‌ಪೆಕ್ಟರ್ ಲೋಕೇಶ್ವರ್‌ಗೆ ಬರುತ್ತಲೇ ಇವೆ.

ಈ ಎಲ್ಲಾ ವಂಚನೆಗೂ ಆತ ಬಳಸಿಕೊಂಡಿದ್ದು


ವಂಚಿತ ಮಹಿಳೆಯರು....

ಹ್ಯೂಮನ್ ರೈಟ್ಸ್ ಕೌನ್ಸಿಲ್ ಎಂಬ ಲೆಟರ್‌ಹೆಡ್ ಸಂಘಟನೆಯನ್ನು, ಮೆಜೆಸ್ಟಿಕ್‌ನ ಆನಂದರಾವ್ ಸರ್ಕಲ್ಲಿನಲ್ಲಿರುವ ಬ್ರಿಗೇಡ್ ಪ್ಲಾಜಾ ಎಂಬ ಕಾಂಪ್ಲೆಕ್ಸೇ ಈತನ ಅಡ್ಡೆ. ಅಲ್ಲಿ ಮಳಿಗೆಯೊಂದನ್ನು ಬಾಡಿಗೆಗೆ ಹಿಡಿದ ವಿವೇಕಾನಂದ ಅದನ್ನೇ ತನ್ನ ಛೇಂಬರಾಗಿ ಬಳಸುತ್ತಾನೆ. ಬ್ರಿಗೇಡ್ ಪ್ಲಾಜಾದ ಹೆಬ್ಬಾಗಿಲಲ್ಲೇ ಕರ್ನಾಟಕ ಸ್ಟೇಟ್ ಹ್ಯೂಮನ್ ರೈಟ್ಸ್ ಕೌನ್ಸಿಲ್ ಎಂಬ ಭಾರೀ ಗಾತ್ರದ ಬೋರ್ಡು ಬರೆಸಿ ಹಾಕಿದ್ದಾನೆ. ಇದಿಷ್ಟೇ ಅಲ್ಲದೇ ಜಸ್ಟೀಸ್ ವೆಂಕಟಾಚಲರ ಭ್ರಷ್ಟಾಚಾರ ನಿರ್ಮೂಲನಾ ಸಮಿತಿ, ಚಲುವ ಕನ್ನಡ ನಾಡು ಪಾರ್ಟಿ, ವಿಷ್ಣುಸೇನಾ ಸಂಘ ಥರೇವಾರಿಯ ಲೆಟರ್‌ಹೆಡ್ ಸಂಘಟನೆಗಳ ಬೋರ್ಡನ್ನೂ ಬರೆಸಿ ಹಾಕಿದ್ದಾನೆ.


ತೆರೆಸಾ ಮೇರಿ

ವೆಂಕಟಾಚಲ ಲೋಕಾಯುಕ್ತರಾಗಿದ್ದಷ್ಟೂ ದಿನ ಅವರ ಹೆಸರೇಳಿಕೊಂಡು ರೋಲ್‌ಕಾಲ್ ಮಾಡುತ್ತಿದ್ದ. ಅವರು ನಿವೃತ್ತಿಯಾಗಿದ್ದೇ ಕರ್ನಾಟಕ ಸ್ಟೇಟ್ ಹ್ಯೂಮನ್ ರೈಟ್ಸ್ ಕಮೀಷನ್ ಎಂಬ ಹೊಸ ಲೆಟರ್‌ಹೆಡ್ ಸಂಘಟನೆಯೊಂದನ್ನು ಮಾರ್ಕೆಟ್ಟಿಗೆ ಬಿಟ್ಟ. ಅಸಲಿಗೆ ಎಸ್.ಆರ್. ನಾಯಕ್ ಅಧ್ಯಕ್ಷರಾಗಿರುವ ಮಾನವಹಕ್ಕು ಆಯೋಗಕ್ಕೂ ವಿವೇಕಾನಂದನ ಹ್ಯೂಮನ್ ರೈಟ್ಸ್ ಕಮೀಷನ್ನಿಗೂ ಏನೇನೂ ಸಂಬಂಧವಿಲ್ಲ. ಈತ ಬೋಗಸ್ ಸಂಸ್ಥೆ ಕರ್ನಾಟಕ ಸ್ಟೇಟ್ ಹ್ಯೂಮನ್ ರೈಟ್ಸ್ ಕಮಿಷನ್ ಅಂದರೆ ಕೆಎಸ್‌ಎಚ್‌ಆರ್‌ಸಿಯಂತೆ ಈತನ ಹ್ಯೂಮನ್ ರೈಟ್ಸ್ ಕೌನ್ಸಿಲ್ಲಿನ ಇನಿಷಿಯಲ್ಲೂ KSHRC ಎಂದೇ ಬರುತ್ತದೆ. ಜನಕ್ಕೆ ಸರ್ಕಾರದ ಮಾನವಹಕ್ಕು ಆಯೋಗ ಯಾವುದು ಈ ಖದೀಮನ ಬೋಗಸ್ ಕೌನ್ಸಿಲ್ ಯಾವುದೆಂಬ ವ್ಯತ್ಯಾಸ ಗೊತ್ತಿರುವುದಿಲ್ಲ.

ಈತನದೇ ಸರ್ಕಾರಿ ಮಾನವಹಕ್ಕು ಆಯೋಗವೆಂದು ಬಂದು ದೂರು ಕೊಡುತ್ತಾರೆ. ಸತ್ಯ ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿರುತ್ತದೆ. ಹೀಗೆ ನಕಲಿ ಮಾನವಹಕ್ಕು ಕೌನ್ಸಿಲ್‌ನ ಬೋರ್ಡು ಹಾಕಿಕೊಂಡೇ ವಿವೇಕಾನಂದ ಬೆಂಗಳೂರಿನ ನೂರಾರು ಜನಕ್ಕೆ ಉಂಡೆನಾಮ ತಿಕ್ಕಿದ್ದಾನೆ. ಈ ಪೈಕಿ ಈತನ ಲೇಟೆಸ್ಟ್ ಬಲಿಪಶು ವಿನಂತಾದವಳು ನಂದಿನಿ ಲೇಔಟಿನ ಹತಭಾಗ್ಯೆ ಪ್ರಿಯಾಂಕಾ.

ತನ್ನ ಮನೆಯೆದುರಿನ ಆನಂದ್ ಎಂಬಾತನನ್ನು ಪ್ರೀತಿಸಿ ಆತನಿಂದ ಗರ್ಭಿಣಿಯಾದ ಪ್ರಿಯಾಂಕಾ ತನ್ನನ್ನು ವಂಚಿಸಿದ ಆನಂದ್ ವಿರುದ್ಧ ಆತನ ಮದುವೆಯ ಸ್ಥಳಕ್ಕೇ ನುಗ್ಗಿ ಪ್ರತಿಭಟಿಸಿದ ದಿಟ್ಟೆ. ಆನಂದ್‌ನ ಮದುವೆಯ ದಿನ ಮಹಿಳಾ ಸಂಘಟನೆಯ ಹತ್ತಾರು ಮಂದಿ ಕಾರ್ಯಕರ್ತೆಯರ ಜೊತೆ ಕಲ್ಯಾಣ ಮಂಟಪದಲ್ಲಿ ಪ್ರಿಯಾಂಕಾ ಪ್ರತಿಭಟಿಸಿದ ರೀತಿ, ಪಟ್ಟ ನೋವು, ಅನುಭವಿಸಿದ ಅವಮಾನ ಇತ್ಯಾದಿಗಳೆಲ್ಲವನ್ನೂ ಜನ ಪತ್ರಿಕೆಗಳಲ್ಲಿ ಓದಿದ್ದಾರೆ. ಟೀವಿ ಚಾನಲ್ಲುಗಳೂ ನೇರಾನೇರ ಸುದ್ದಿ ಬಿತ್ತರಿಸಿವೆ. ಹೊಟ್ಟೆಗೆ ಅನ್ನ ತಿನ್ನುವ ಯಾರೇ ಆದರೂ ಪ್ರಿಯಾಂಕಾಳ ಕಣ್ಣೀರಿಗೆ ಮರುಗಲೇಬೇಕಾದ ಕತೆಯಿದು. ಹೀಗೆ ಆಕೆಯ ಪರವಹಿಸಿ ಮಹಿಳಾ

ಗೋಲ್‌ಮಾಲ್ ಅಣ್ಣ ರೋಲ್‌ಕಾಲ್ ತಮ್ಮ

ಇಲ್ಲಿಗೆ ನಾಲ್ಕು ವರ್ಷದ ಹಿಂದೆ ಅಂದರೆ 2006 ರ ಸೆಪ್ಟೆಂಬರ್ 16 ರಂದು VCAN ನೆಟ್‌ವರ್ಕ್ ಪ್ರೈ.ಲಿ ಎಂಬ ಕಂಪೆನಿಯೊಂದು ಎಲ್ಲಾ ದಿನಪತ್ರಿಕೆಗಳಿಗೆ ಜಾಹೀರಾತು ಕೊಟ್ಟು ಇಬ್ಬರು ವ್ಯಕ್ತಿಗಳ ಫೋಟೋ ಪ್ರಕಟಿಸಿ ಸಾರ್ವಜನಿಕರಿಗೆ ಎಚ್ಚರಿಕೆ ಕೊಟ್ಟಿತ್ತು,

ಆ ಇಬ್ಬರ ಪೈಕಿ ಓರ್ವ ವಿವೇಕಾನಂದ ಕುಡ್ತರ್‌ಕರ್, ಮತ್ತೊಬ್ಬ ಸತೀಶ್ ಕುಡ್ತರ್‌ಕರ್!

ಇವರಿಬ್ಬರೂ VCAN ನೆಟ್‌ವರ್ಕ್ ಸಂಸ್ಥೆಗೆ ನುಗ್ಗಿ ತಾವು ಹ್ಯೂಮನ್ ರೈಟ್ಸ್ ಕಮೀಶನ್ನಿನ ಅಧಿಕಾರಿಗಳೆಂದು ಬೆದರಿಸಿ 25 ಸಾವಿರ ರೂಪಾಯಿ ಕಿತ್ತಿದ್ದರು. 2006ರ ಸೆಪ್ಟೆಂಬರ್ 7ರಂದು ಇದರ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ಕೂಡ ದಾಖಲಾಯಿತು. ಆ ಹೊತ್ತಿಗೆ ವೆಂಕಟಾಚಲ ಲೋಕಾಯುಕ್ತರಾಗಿದ್ದರು. ಇದೇ ವಿವೇಕಾನಂದ ಮತ್ತು ಆತನ ದುಷ್ಟ ತಮ್ಮ ಸತೀಶ್ ಸೇರಿಕೊಂಡು ವೆಂಕಟಾಚಲರ ಹೆಸರೇಳಿಕೊಂಡು ಎಂಥಾ ಹಾವಳಿಗಿಳಿದಿದ್ದರೆಂದರೆ ಕುಮಾರಸ್ವಾಮಿ ಲೇಔಟಿನ ಪೆಟ್ರೋಲ್ ಬಂಕ್ ಒಂದಕ್ಕೆ ನುಗ್ಗಿದ್ದೇ ರಾಬರಿಗೆ ಯತ್ನಿಸಿ ಸಿಕ್ಕಿಬಿದ್ದಿದ್ದರು. ಮೆಜೆಸ್ಟಿಕ್ ಆಸುಪಾಸಿನ ಅಂಗಡಿಗಳು, ಹೋಟೆಲ್, ಕಾಂಪ್ಲೆಕ್ಸುಗಳೆಲ್ಲಕ್ಕೂ ವಿವೇಕಾನಂದನ ರೌಡಿ ಪಡೆ ನುಗ್ಗಿ ರೋಲ್‌ಕಾಲ್ ಹಾವಳಿಯಿಡುತ್ತಿತ್ತು,

ಇಷ್ಟಾಗ್ಯೂ ವೆಂಕಟಾಚಲ ಹುಷಾರಾಗಲಿಲ್ಲ, ವಿವೇಕಾನಂದನ ದುಷ್ಕೃತ್ಯಗಳನ್ನು ಬೆಂಬಲಿಸುತ್ತಲೇ ಬಂದರು. ತಮಾಷೆಯೆಂದರೆ ವಿವೇಕಾನಂದ ತನ್ನ ಸಂಘಟನೆಗೆ 'ಜಸ್ಟೀಸ್ ವೆಂಕಟಾಚಲರ ಭ್ರಷ್ಟಾಚಾರ ನಿರ್ಮೂಲನ ಸಮಿತಿ' ಎಂಬ ಅಸಂಬದ್ಧ ಹೆಸರಿಟ್ಟಿದ್ದ,


ಕಳ್ಳಗುರುವಿನೊಡನೆ ಸತೀಶ್ ಕುಡ್ತರ್‌ಕರ್

ಇದರರ್ಥ ಜಸ್ಟೀಸ್ ವೆಂಕಟಾಚಲರು ನಡೆಸುವ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವ ಸಮಿತಿ?

ಹೀಗೆ ವಿಚಿತ್ರ, ವಿರುದ್ಧಾರ್ಥದ ಹೆಸರಿಟ್ಟು ಸಂಘಟನೆ ಹುಟ್ಟುಹಾಕಿದ ವಿವೇಕಾನಂದ ಲೋಕಾಯುಕ್ತ ವೆಂಕಟಾಚಲರನ್ನೇ ಬಂಡವಾಳ ಮಾಡಿಕೊಂಡು ರೋಲ್‌ಕಾಲ್‌ಗಿಳಿದದ್ದಕ್ಕೂ ಕಾರಣವಿತ್ತು, ಅದು ಆತನ ಪೂರ್ವಾಶ್ರಮದ ಪಾಪ. ಮೂಲತಃ ಗೋವಾದ ಕೊಂಕಣಿ ಕುಟುಂಬವೊಂದರ ವಿವೇಕಾನಂದ 2001 ರ ಹೊತ್ತಿಗೆ ಮಂಗಳೂರಿನ ಕೆಎಸ್ಸಾರ್ಟಿಸಿ ಬಸ್‌ಸ್ಟ್ಯಾಂಡ್ ಪಕ್ಕ ಗೌರವ್ ಎಲೆಕ್ಟ್ರಿಕಲ್ಸ್ ಎಂಬ ಬ್ಲೇಡ್ ಕಂಪೆನಿಯೊಂದನ್ನು ಶುರುಹಚ್ಚಿಕೊಂಡಿದ್ದ. 500 ರೂ.ಗೆ ಮಿಕ್ಸಿ, 2000 ರೂಪಾಯಿಗೆ ಟಿವಿ, ಹತ್ತು ಸಾವಿರ ಕೊಟ್ಟರೆ ಮೋಟಾರ್ ಬೈಕ್ ಕೊಡುತ್ತೇನೆಂದು ಸಾವಿರಾರು ಜನರಿಂದ ದುಡ್ಡು ಕಿತ್ತಿದ್ದ. ಸಾಲದ್ದಕ್ಕೆ ಕರ್ನಾಟಕ ಬ್ಯಾಂಕಿನಿಂದ ಒಂದೂವರೆ ಕೋಟಿಯ ಸಾಲವನ್ನೂ ಎತ್ತಿದ್ದ. ತನ್ನ ಹೆಸರನ್ನು ವಿ.ಎಸ್. ಕುಡ್ತರ್‌ಕರ್ ಎಂದೂ ಅಣ್ಣನನ್ನು ಎಸ್.ಎಸ್. ಕುಡ್ತರ್‌ಕರ್ ಎಂದೂ ಇಟ್ಟುಕೊಂಡು ಗೌರವ್ ಎಲೆಕ್ಟ್ರಿಕಲ್ಸ್ ಹೆಸರಲ್ಲಿ ಮುಂಡಾಮೋಚಿದ ಅಣ್ಣ-ತಮ್ಮ ರಾತ್ರೋರಾತ್ರಿ ಮಂಗಳೂರಿನಿಂದ ನಾಪತ್ತೆಯಾದರು.

ಅಗ್ಗದ ರೇಟಿಗೆ ಮಿಕ್ಸಿ, ಮೋಟಾರ್ ಬೈಕಿನ ಕನಸು ಕಂಡ ಜನ ಊರ್ವ (ಮಣ್ಣು ಗುಡ್ಡೆ) ಪೊಲೀಸ್ ಠಾಣೆಯೆದುರು ಜಮಾಯಿಸಿ ಎದೆಬಡಿದುಕೊಂಡಿದ್ದೇ ಬಂತು.

ಹಾಗೇ ಮಂಗಳೂರಿನಲ್ಲಿ ಮಕ್ಮಲ್‌ಟೋಪಿ ಕೈಚಳಕ ತೋರಿ ನಾಪತ್ತೆಯಾದ ಅಣ್ಣತಮ್ಮಂದಿರಿಬ್ಬರು ಮತ್ತೆ ಪ್ರತ್ಯಕ್ಷರಾದದ್ದು ಬೆಂಗಳೂರಿನಲ್ಲಿ, ತನ್ನ ಹಳೇ ಗೆಟಪ್ಪು ಬದಲಿಸಿದ ವಿ.ಎಸ್. ಕುಡ್ತರ್‌ಕರ್ ತನ್ನ ಹೆಸರನ್ನು ಎಸ್.ಕೆ. ವಿವೇಕಾನಂದ ಎಂದು ಬದಲಿಸಿಕೊಂಡ. ಮೆಜೆಸ್ಟಿಕ್‌ನ ಆನಂದ್‌ರಾವ್ ಸರ್ಕಲ್‌ನಲ್ಲಿರುವ ಮಳಿಗೆಯೊಂದನ್ನು ಬಾಡಿಗೆಗೆ ಹಿಡಿದು ಈ ಬಾರಿ ಸಮಾಜಸೇವೆಯ ಮುಖವಾಡ ಧರಿಸಿದ್ದ. ಅದು ಜಸ್ಟೀಸ್ ವೆಂಕಟಾಚಲರ ಭ್ರಷ್ಟಾಚಾರ ನಿರ್ಮೂಲನ ಸಮಿತಿ!

ವಿಷಯ ತಿಳಿದು ವಿವೇಕಾನಂದನನ್ನು ಎಳೆದೊಯ್ಯಲು ವಾರಂಟ್ ಹಿಡಿದು ಬಂದಿದ್ದ ಮಂಗಳೂರು ಪೊಲೀಸರನ್ನು ವೆಂಕಟಾಚಲರ ಹೆಸರು ಬಳಸಿಕೊಂಡೇ ಬೆದರಿಸಿ ಹಿಮ್ಮೆಟ್ಟಿಸಿದ. ಇದೇ ಹೊತ್ತಿಗೆ ಯಲಹಂಕದ ಪಿಂಟೋ ಎಂಬಾತನ ದೇವನಹಳ್ಳಿಯ ಆಸ್ತಿಗೆ ವಕ್ಕರಿಸಿ ಆತನಿಗೆ ಒಂದೂವರೆ ಕೋಟಿಯಷ್ಟು ಮುಂಡಾಯಿಸಿದ ವಿವೇಕಾನಂದ ಮತ್ತು ಅಣ್ಣ ಸತೀಶನ ವಿರುದ್ಧ ಯಲಹಂಕ ಪೊಲೀಸ್ ಠಾಣೆಯಲ್ಲಿ ವಂಚನೆ ಕೇಸು ದಾಖಲಾಯಿತು. ಈ ಕೇಸಿನಿಂದಲೂ ಹೇಗೋ ಜೈಲುಪಾಲಾಗುವುದನ್ನು ತಪ್ಪಿಸಿಕೊಂಡ ವಿವೇಕಾನಂದ ವೆಂಕಟಾಚಲರ ನಿವೃತ್ತಿ ಸಮೀಪಿಸುತ್ತಿದ್ದಂತೆ ಮತ್ತೊಂದು ಗೋಲ್‌ಮಾಲ್ ದಂಧೆಗೆ ಕೈಯಿಟ್ಟ.

ಅದೇ ಹ್ಯೂಮನ್ ರೈಟ್ಸ್ ಕೌನ್ಸಿಲ್. ವ್ಯವಸ್ಥಿತವಾದ ಕಚೇರಿಯೊಂದನ್ನು ತೆರೆದು ತನ್ನ ಅಣ್ಣನನ್ನೇ ಪಿಆರ್‌ಓ ಎಂಬಂತೆ ವಿವೇಕಾನಂದ ಪೋಜು ಕೊಡುತ್ತಾನೆ. ಅಣ್ಣ ಸತೀಶ್ ಕುಡ್ತರ್‌ಕರ್‌ನ ಪತ್ನಿಯ ಹೆಸರು ಸೆಮಿ. ಮುಂಬಯಿ ಮೂಲದ ಈಕೆ ಸ್ಟೈಲಾಗಿ ಇಂಗ್ಲಿಷ್ ಮಾತಾಡುತ್ತಾಳೆ. ಈಕೆ ವಿವೇಕಾನಂದನ ಅಡ್ಡೆಯ ರಿಸೆಪ್ಷನಿಸ್ಟ್ ಅಂತೆ. ನ್ಯಾಯ ಕೇಳಿ ಯಾರೇ ಬಂದರೂ ಅಂಥವರನ್ನು ಸಂಭಾಳಿಸುವ ಈಕೆ ತನ್ನೆಲ್ಲಾ ವಿದ್ಯೆ ಬಳಸಿ ಸತೀಶನ ಛೇಂಬರಿಗೆ ಸಾಗಹಾಕುತ್ತಾಳೆ. ಅಲ್ಲಿ ಸತೀಶ ಇಲ್ಲದ ಕತೆ ಹೇಳಿ ವಿವೇಕಾನಂದನ ಪರಾಕ್ರಮಗಳನ್ನು ವರ್ಣಿಸಿ ಸಾಹೇಬರು ಕೈ ಇಟ್ಟರೆಂದರೆ ನಿಮ್ಮ ಕೇಸೇ ಇತ್ಯರ್ಥವಾಗಿ ಬಿಡುತ್ತದೆ ಎಂದು ತಲೆ ತಿಕ್ಕುತ್ತಾನೆ. ನಂಬಿದ ಆಸಾಮಿ ಇನ್ನೇನು ಬುಟ್ಟಿಗೆ ಬಿದ್ದ ಎಂದು ಗೊತ್ತಾಗಿದ್ದೇ ನಿಮಗೆ ನ್ಯಾಯ ಸಿಗಬೇಕು ಅಂದರೆ ನೀವು ಹತ್ತು ಸಾವಿರ ರೂಪಾಯಿ ಕೊಟ್ಟು ಹ್ಯೂಮನ್ ರೈಟ್ಸ್ ಕೌನ್ಸಿಲ್‌ನ ಸದಸ್ಯರಾಗಬೇಕು ಎನ್ನುತ್ತಾನೆ. ಹಾಗೇ ಸತೀಶ್ ಪಳಗಿಸುತ್ತಿದ್ದಂತೆ ಎಂಟ್ರಿ ಕೊಡುವ ವಿವೇಕಾನಂದನ ಸುತ್ತು ದಾಂಢಿಗರ ಹಿಂಡೇ ಸುತ್ತುವರಿದಿರುತ್ತದೆ.


ಮಿಕವನ್ನು ತನ್ನ ಛೇಂಬರಿಗೆ ಕರೆಸಿಕೊಂಡಿದ್ದೇ 'ನಿಮಗೆ ವಿಧಾನಸೌಧದಲ್ಲಿ ಕೆಲಸ ಕೊಡಿಸ್ತೀನಿ, ನಿಮ್ಮ ಗಂಡನಿಗೆ ಲಕ್ಷ ರೂಪಾಯಿ ಕೊಟ್ಟು ಅಂಗಡಿ ಹಾಕಿಕೊಡ್ತೀನಿ ಯಾವುದಕ್ಕೂ ನೀವು ಮೆಂಬರ್ ಆಗಿ ಐಡೆಂಟಿಟಿ ಕಾರ್ಡ್ ಪಡಕೊಳ್ಳಿ...' ಎನ್ನುತ್ತಾನೆ ವಿವೇಕಾನಂದ.

ಹೀಗೆ ವಂಚಕ ಸಹೋದರರನ್ನು ನಂಬಿ ಮೋಸ ಹೋದ ನತದೃಷ್ಟೆ ಅಲಸೂರಿನ ಸಂಗೀತಾ. ಗಂಡ ಸತ್ತ ನಂತರ ಕಂಗಾಲಾಗಿದ್ದ ಆಕೆಯಿಂದ ವಿವೇಕಾನಂದ ಹತ್ತು ಸಾವಿರ ಕಿತ್ತ. ಆಕೆಯ ಮಕ್ಕಳಿಬ್ಬರಿಗೂ ಜನ್ನಾಪಿ ಶಿಕ್ಷಣ ಕೊಡಿಸುತ್ತೇನೆಂದೂ ವಿಧಾನಸೌಧದಲ್ಲಿ ಕೆಲಸ ಗ್ಯಾರಂಟಿ ಎಂದೂ ಹತ್ತು ಸಾವಿರ ಕಿತ್ತ. ವರ್ಷವಾದರೂ ಕೆಲಸ ಕೊಡಿಸಲೇ ಇಲ್ಲ. ಕೊನೆಗೆ ತನ್ನ ಆಫೀಸಿನಲ್ಲೇ ಕೆಲಸ

ಸಂಘಟನೆಗಳು ಹೋರಾಡುತ್ತಿರುವಾಗಲೇ ಎಂಟ್ರಿ ಕೊಟ್ಟವನು ವಿವೇಕಾನಂದ. ತನ್ನ ಒಂದಿಬ್ಬರು ಚೇಲಾಗಳನ್ನು ಕಳಿಸಿದ್ದೇ ತನ್ನದು ಸರ್ಕಾರಿ ಸಂಸ್ಥೆಯೆಂದೂ, ನ್ಯಾಯ ಕೊಡಿಸುತ್ತೇನೆಂದೂ ರೈಲು ಬಿಟ್ಟಿದ್ದಾನೆ. ನಂಬಿದ ಪ್ರಿಯಾಂಕಾ ಮತ್ತು ಮಹಿಳಾ ಸಂಘಟನೆಗಳು ವಿವೇಕಾನಂದನ ಅಡ್ಡೆಗೆ ಬಂದು ನ್ಯಾಯ ಕೊಡಿಸುವಂತೆ ಕಣ್ಣೀರಿಟ್ಟಿದ್ದಾರೆ. ಇವರಿಗೇನು ಗೊತ್ತು, ಈ ವಿವೇಕಾನಂದ ಈಗಾಗಲೇ ಆಕ್ಕನ ಆನಂದ ಮತ್ತು ಆತನ ಖದೀಮ ಕಂಟ್ರಾಕ್ಟರ್ ಅಪ್ಪನ ಜೊತೆ ಕೈಜೋಡಿಸಿದ್ದಾನೆಂಬುದು!

ಇಲ್ಲದ ಕತೆ ಕಟ್ಟಿ ಆನಂದನನ್ನು ಎಳೆದು ತಂದು ಜೈಲಿಗೆ ಹಾಕಿಸುತ್ತೇನೆಂದು ಭೋಂಗು ಬಿಟ್ಟ ವಿವೇಕಾನಂದ ಉಪಾಯವಾಗಿ ಪ್ರಿಯಾಂಕಾಳನ್ನು ಮಹಿಳಾ ಸಂಘಟನೆಯಿಂದ ಬೇರ್ಪಡಿಸಿದ. ಆಕೆಯನ್ನು ಏಕಾಂಗಿಯಾಗಿ ಕರೆಸಿಕೊಂಡು ತನಗೆ 31 ಲಕ್ಷ ರೂಪಾಯಿ ಪರಿಹಾರ ಕೊಡಿಸುವಂತೆ ಕೋರಿ ಪತ್ರವೊಂದನ್ನು ಬರೆಸಿಕೊಂಡ. ಅದನ್ನೇ ಆನಂದ್‌ನ ತಂದೆಯ ಕೈಗಿತ್ತು ಕಾಣಿಸಿಕೊಂಡ.


ಈ ಹೊತ್ತಿಗಾಗಲೇ ಜೈಲು ಪಾಲಾಗಿದ್ದ ಆನಂದ್‌ನ ತಂದೆಗೆ ಇಷ್ಟೇ ಸಾಕಾಗಿತ್ತು. ಪ್ರಿಯಾಂಕಾ ದುಡ್ಡಿಗಾಗಿ ತನ್ನ ಮಗನನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾಳೆ ಎಂದು ಕೋರ್ಟಿಗೆ ದೂರು ಕೊಡಬೇಕಿತ್ತು. ಪ್ರಿಯಾಂಕಾಳ ಗರ್ಭದ ವೈದ್ಯಕೀಯ ಪರೀಕ್ಷೆಯೇನಾದರೂ ನಡೆದುಬಿಟ್ಟರೆ ಆನಂದ್‌ನ ಅಪರಾಧ ಪತ್ತೆಯಾಗುವುದು



ನಿಶ್ಚಿತ. ಅಷ್ಟರೊಳಗೆ ಪ್ರಿಯಾಂಕಾಳದ್ದೇ ತಪ್ಪೆಂದು ಅಪಪ್ರಚಾರ ಮಾಡಿಬಿಟ್ಟರೆ ಆನಂದ್ ಬಚಾವಾದಂತೆಯೇ ಎಂಬುದು ಆತನ ರೊಕ್ಕಸ್ಥ ತಂದೆಯ ಹುನ್ನಾರವಾಗಿತ್ತು. ಅದಕ್ಕೆ ಕೈಜೋಡಿಸಿದವನು ಖದೀಮ ವಿವೇಕಾನಂದ. ತಾನೇ ಹೇಳಿಸಿ ಬರೆಸಿಕೊಂಡಿದ್ದ ಪ್ರಿಯಾಂಕಾಳ ಪತ್ರವನ್ನು ಆನಂದ್‌ನ ತಂದೆಗಷ್ಟೇ ಅಲ್ಲ ಪತ್ರಿಕೆಗಳಿಗೂ ಬಿಡುಗಡೆ ಮಾಡಿದ್ದಾನೆ.

ಇದು ಮತ್ತೆ ವಿವಾದವಾಗಿ ದೊಡ್ಡ ಸುದ್ದಿಯಾಗುತ್ತಿದ್ದಂತೆಯೇ ವಿವೇಕಾನಂದನ ವಂಚನೆ ಬಯಲಾಗಿದೆ. ಸಿಟ್ಟಿಗೆದ್ದ ಮಹಿಳಾ ಸಂಘಟನೆಗಳ ಪೈಕಿ ಸ್ಪಂದನ ಜನಪರ ಸಂಘಟನೆಯ ವೀಣಾ, ಶಿವಶಕ್ತಿ ಮಹಿಳಾ ಸಂಘದ ಉಮಾದೇವಿ, ಜಯಕರ್ನಾಟಕ ಸಂಘಟನೆಯ ಪ್ರೇಮಾ ರಾಮಮೂರ್ತಿ ಮತ್ತು ಭಾರತೀಯ ಮಹಿಳಾ ಮತ್ತು ಮಕ್ಕಳ ಸೇವಾ ಸಮಿತಿಯ ಅನಿತಾ ಕೃಷ್ಣಮೂರ್ತಿ ಮುಂತಾದ ಮಹಿಳಾ ಹೋರಾಟಗಾರರೆಲ್ಲ ಜನವರಿ 5 ರ ಬೆಳಗ್ಗೆ ವಿವೇಕಾನಂದನ ಅಡ್ಡೆಗೆ ದಾಳಿಯಿಟ್ಟದ್ದೇ ಆತನ ಭೂತ ಬಿಡಿಸಿದ್ದಾರೆ.

ಬಂಡವರೆಲ್ಲ ಹೆಣ್ಣುಮಕ್ಕಳು. ವಂಚನೆಗೀಡಾದವರು. ಹಾಗಿದ್ದೂ ತನ್ನ ಗೂಂಡಾಪಡೆಯನ್ನು ಛೂಬಿಟ್ಟು



ವಿವೇಕಾನಂದ ತಾನೇ ನಿಂತು ಮಹಿಳಾ ಸಂಘಟನೆಯ ಪದಾಧಿಕಾರಿಗಳ ಮೇಲೆ ಹಲ್ಲೆ ನಡೆಸಿಬಿಟ್ಟ. ಆತನ ಏಟಿಗೆ ವೀಣಾರ ಕೈಗಾಯವಾಗಿ ರಕ್ತ ಸೋರುತ್ತಿತ್ತು. ಉಮಾದೇವಿಯವರ ತುರುಬಿಗೇ ವಿವೇಕಾನಂದ ಕೈಹಾಕಿದ್ದ. ಯಾವತ್ತು ವಿವೇಕಾನಂದನ ರೌಡಿ ಪಡೆ ಮಹಿಳಾ ಹೋರಾಟಗಾರ್ತಿಯರ ಮೇಲೇ ಕೈಮಾಡಿತೋ ಉಪ್ಪಾರಪೇಟೆಯ ಇನ್ಸ್‌ಪೆಕ್ಟರ್ ಲೋಕೇಶ್ವರ್ ಹುಷಾರಾಗಿದ್ದಾರೆ. ಮಹಿಳಾ ಸಂಘಟನೆಗಳು ಕೊಟ್ಟ ದೂರು ಪಡೆದು ವಿವೇಕಾನಂದನ ನಕಲಿ ಹ್ಯೂಮನ್ ರೈಟ್ಸ್ ಅಡ್ಡೆಗೆ ಪೊಲೀಸರು ದಾಳಿಯಿಡುವ ಹೊತ್ತಿಗೆ ವಿವೇಕಾನಂದ ಪರಾರಿಯಾಗಿದ್ದ. ಕುಮಾರಸ್ವಾಮಿ ಲೇಔಟಿನ ಆತನ ಮನೆ ಮೇಲೂ ಪೊಲೀಸರು ದಾಳಿ ನಡೆಸಿದ್ದಾರೆ. ಸಿಕ್ಕಿದ್ದು ಹ್ಯೂಮನ್ ರೈಟ್ಸ್ ಕೌನ್ಸಿಲ್‌ನ ಅಸಂಖ್ಯಾತ ರಸೀದಿ ಪುಸ್ತಕಗಳು, ಯಾರ್‍ಯಾರೋ ಕೊಟ್ಟ ದೂರಿನ ಪ್ರತಿಗಳು ಮತ್ತು ಕಂಡವರ ಸೈಟು ದೋಚಲು ಆತ ಸೃಷ್ಟಿಸಿದ್ದ ಬೋಗಸ್ ದಾಖಲೆಗಳು ಮಾತ್ರ!


ಸದ್ಯ ವಿವೇಕಾನಂದನಿಗಾಗಿ ಉಪ್ಪಾರಪೇಟೆ ಪೊಲೀಸರಷ್ಟೇ ಅಲ್ಲ, ಬೆಂಗಳೂರಿನ ನಾಲ್ಕು ಪ್ರಮುಖ ಪೊಲೀಸ್ ಠಾಣೆಗಳ ಪೊಲೀಸರು ಬಲೆಬೀಸಿದ್ದಾರೆ. ಸರ್ಕಾರಿ ಲಾಂಛನದ ನಕಲಿ ಸೃಷ್ಟಿ, ಫೋರ್ಜರಿ, ವಂಚನೆ, ಬ್ಲಾಕ್‌ಮೇಲ್, ರಾಬರಿ, ಕೊಲೆ ಬೆದರಿಕೆ ಸೇರಿದಂತೆ ಆತನ ವಿರುದ್ಧ ಅಸಂಖ್ಯಾತ ಕೇಸುಗಳಿವೆ. ಯಾರ್‍ಯಾರು ಈತನನ್ನು ನಂಬಿ ಬಂದು ದೂರು ಕೊಟ್ಟರೋ ಅಂಥವರೆಲ್ಲರನ್ನೂ ವಿವೇಕಾನಂದ ವಂಚಿಸಿದ್ದಾನೆ. ಈ ಪೈಕಿ ಬಹುತೇಕರು ನತದೃಷ್ಟ ಹೆಣ್ಣುಮಕ್ಕಳೇ. (ಬಾಕ್ಸ್ ನೋಡಿ). ಬಹುಶಃ ಆತನ ಪಾಪದ ಕೊಡ ತುಂಬಿ ಬಂದಿರಬೇಕು. ಉಪ್ಪಾರಪೇಟೆ ಇನ್ಸ್‌ಪೆಕ್ಟರ್ ಲೋಕೇಶ್ವರ್ ಥರದ ನಿಷ್ಠುರಿ ಪೊಲೀಸ್ ಅಧಿಕಾರಿಗೆ ನೊಂದ ಹೆಣ್ಣುಮಕ್ಕಳ ಕಣ್ಣೀರು ಅರ್ಥವಾಗಬೇಕು. ಈತನ ಕೈಗೇನಾದರೂ ಸ್ಲೇಟು ಕೊಡದೇ ಹೋದರೆ ಇನ್ನೆಷ್ಟು ಹೆಣ್ಣುಮಕ್ಕಳು ಬಲಿಯಾಗುತ್ತಾರೋ, ಈತನಿಂದ ವಂಚನೆಗೀಡಾದವರು ಧೈರ್ಯವಾಗಿ ದೂರು ಕೊಡಬೇಕು. ಈಗಾಲಾದರೂ ಮಾನವಹಕ್ಕು ಆಯೋಗ ಎಚ್ಚೆತ್ತು ಈತನ ವಿರುದ್ಧ ಜಾಹೀರಾತು ಕೊಡದೇ ಹೋದರೆ ಮತ್ತಷ್ಟು ಅನಾಹುತ ತಪ್ಪಿದ್ದಲ್ಲ.

● ರಾ. ಸೋಮನಾಥ್

ಹಾಡು ಎಂದ. ಅದು ಗಿರಾಕಿಗಳನ್ನು ಹಿಡಿದು ತರುವ ಕೆಲಸ. ಯಾರ್‍ಯಾರು ಕಷ್ಟದಲ್ಲಿರುತ್ತಾರೋ ಅಂಥವರನ್ನು ಕರೆತಂದು ಹತ್ತು ಸಾವಿರ ವಸೂಲಿ ಮಾಡಿ ಅಣ್ಣ ತಮ್ಮಂದಿರ ಹೊಟ್ಟೆ ತುಂಬಿಸಲು ನಿಂತ ಸಂಗೀತಾ ಹತ್ತು ಸಾವಿರ ರೂಪಾಯಿ ಕಳಕೊಂಡಿದ್ದೇ ಬಂತು. ಕೆಲಸವೂ ಇಲ್ಲ ಸಂಬಳವೂ ಇಲ್ಲ. ಹೋಗಲಿ ಹತ್ತು ಸಾವಿರಕ್ಕೆ ರಶೀದಿಯನ್ನಾದರೂ ಕೊಡು ಎಂದರೆ ಅದು ದೆಹಲಿಯಿಂದ ಬರಬೇಕಂತೆ.

ಈಕೆಯಂತೆ ಬುಟ್ಟಿಗೆ ಬಿದ್ದವಳು ಸುದಿರಾನಗರದ ತೆರೇಸಾ ಮೇರಿ. ಸಂಗೀತಾಳೇ ಈಕೆಯನ್ನು ಕರೆತಂದು ವಿವೇಕಾನಂದನಿಗೆ ಪರಿಚಯಿಸಿದ್ದಳು. ಈಕೆಗೆ ಹೊಸೂರು ಸಮೀಪ ಸೈಟು ಕೊಡ್ತೀನಿ ಅಂದ. ಗಂಡನಿಗೆ 1 ಲಕ್ಷ ಕೊಟ್ಟು ಅಂಗಡಿ ಹಾಕಿ ಕೊಡ್ತೀನಿ ಅಂದ. ಹತ್ತು ಸಾವಿರ ಕೊಡು, 2007 ರ ಏಪ್ರಿಲ್‌ನಲ್ಲಿ ತನ್ನ ತಾಳಿ ಅಡವಿಟ್ಟು 10 ಸಾವಿರ ತಂದು ವಿವೇಕಾನಂದನ ಕೈಗಿತ್ತಿದ್ದೇ ಕೊನೆ, ಎರಡು ವರ್ಷವಾದರೂ ಸೈಟಾಗಲಿ, ಗಂಡನಿಗೆ ಅಂಗಡಿಯಾಗಲಿ ಕೊಡಲೇ ಇಲ್ಲ, ಈಕೆಯನ್ನೂ ವರ್ಷಾನುಗಟ್ಟಲೇ ದುಡಿಸಿಕೊಂಡಿದ್ದಾನೆ. ಕೊನೆಗೆ ಕೊಟ್ಟ ದುಡ್ಡು ಕೊಡು ಎಂದರೆ ತನ್ನ 'ಕನ್ನಡ ನಾಡಿ' ಪತ್ರಿಕೆಯಲ್ಲಿ ನಿಂದು ವಿರುದ್ಧ ಕೆಟ್ಟದಾಗಿ ಬರೆಸುತ್ತೇನೆಂದು ಹೆದರಿಕೆ ಹಾಕಿದ.

ಇವರಿಬ್ಬರಿಗಿಂತಲೂ ಹೆಚ್ಚು ನೊಂದವಳು ರಾಜಾಜಿನಗರದ ಲಲಿತಮ್ಮ. ತನ್ನ ಮಗಳ ಗಂಡನ ಕಿರುಕುಳದ ವಿರುದ್ಧ ದೂರು ತಂದ ಲಲಿತಮ್ಮನಿಂದ ಮೊದಲು ಹತ್ತು ಸಾವಿರ ಕಿತ್ತ, ಪ್ರತಿಯಾಗಿ ಬೋಗಸ್ ಐಡೆಂಟಿಟಿ ಕಾರ್ಡುಕೊಟ್ಟ, ಮಗಳ ಗಂಡನನ್ನು ಎತ್ತಾಕಿ ತಂದು ತನ್ನ ಶೆಡ್ಡಿನಲ್ಲಿಟ್ಟು ರಿಪೇರಿ ಮಾಡುತ್ತೇನೆಂದು ಮತ್ತೆ 30 ಸಾವಿರ ಕಿತ್ತ, ಕೊನೆಗೆ ಲಲಿತಮ್ಮನಿಗೇ ಉಲ್ಟಾ ಹೊಡೆದು ದುಷ್ಟ ಅಳಿಯನ ಜೊತೆ ಕೈಜೋಡಿಸಿ ಆಕೆಗೆ ಗಿರಿನಗರದಲ್ಲಿದ್ದ ಸೈಟನ್ನು ತನ್ನ ಹೆಸರಿಗೆ ಬರೆದುಕೊಡುವಂತೆ ಬ್ಲಾಕ್‌ಮೇಲ್ ಗಿಳಿದ.


CAUTION NOTICE

Vivekananda Kudatarkar Satish Kudatarkar

This is to inform that Vivekananda Kudatarkar and Satish Kudatarkar shown in the above photograph residents of Brigade Plaza, Ananda Rao Circle, Bangalore- 09, are no way associated at any point of time with business transactions of our company.

It has come to our notice that both Vivekananda Kudatarkar and Satish Kudatarkar are misleading the general public as well as certain government departments by issue of indiscriminate and ill-informed press statement targetting the business of our company and also claiming that they are the trainees of our company and deceiving them for such acts of their fraudulent, extortion and mischievous behaviour the company has filed a police complaint on dated 07.09.06 before the Upparpet Police Station, Bangalore, and its Crime No is 0808/2006. It is herewith clarified that at any point of time our company has not associated with the said persons shown in the above photograph.

Any persons or institutions having any form of transactions/business through them representing in our company name are at their own risk. Our company does not take any responsibility of performances or non performances of any of the claims with respect of such transactions our company will not be liable in any manner for such acts and no claims of any sort will be entertained by our company at any point of time.

Issued in the interest of general public

VCAN Network (P) Ltd.,
No. 71/4, 3rd Floor, Maghadooth Complex,
S.C. Road, Gandhi Nagar, Bangalore-09.

ವಂಚನೆ ವಿರುದ್ಧ ಜಾಹೀರಾತು

ಇದು ವಿವೇಕಾನಂದನ ವಂಚನೆಗೆ ಕೆಲ ಸ್ಯಾಂಪಲ್ಲುಗಳಷ್ಟೇ. ಈ ಮೂರು ಮಹಿಳೆಯರು ಸದ್ಯ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಬಂದು ದೂರು ಸಲ್ಲಿಸಿದ್ದಾರೆ. ಇವರಷ್ಟೇ ಅಲ್ಲದೇ ಎಲೆಕ್ಟ್ರಾನಿಕ್ ಸಿಟಿಯ ಚಂದ್ರಾ ಎಂಬಾಕೆ ತನ್ನ ಸೈಟನ್ನು ಉಳಿಸಿಕೊಡು ಎಂದು ಕಣ್ಣೀರಿಟ್ಟರೆ ಆಕೆಯಿಂದ ದುಡ್ಡು ಕಿತ್ತಿದ್ದಾನೆ. ಆಕೆಯ ಪಕ್ಕದ ಸೈಟಿನ ಯಲ್ಲಪ್ಪ ಎಂಬಾತನನ್ನೂ ಮುಂಡಾಯಿಸಿ ಹತ್ತು ಸಾವಿರ ಕಿತ್ತಿದ್ದಾನೆ. ಸಂಪಂಗಿ ಎಂಬಾತನ ಅನೈತಿಕ ಸಂಬಂಧಕ್ಕಿದ್ದ ಪರ ವಹಿಸಿ ಆತನ ಧರ್ಮ ಪತ್ನಿ ಜಯ ನಗರದ ಇಂದಿರಮ್ಮ ಎಂಬಾಕೆಯನ್ನೇ ಜೈಲುಪಾಲಾಗುವಂತೆ ಮಾಡಿದ್ದು, ವಿದ್ಯಾರಣ್ಯಪುರದ ಪದ್ಮನಾಭರಾವ್ ಎಂಬಾತನ ಆಸ್ತಿ ಕಬಳಿಸಲು ಯತ್ನಿಸಿದ್ದು, ಜೋಸೆಫ್ ಎಂಬಾತನಿಂದ ದುಡ್ಡು ಕಿತ್ತು ನೌಕರಿ ಕೊಡಿಸದೇ ಮುಂಡಾಯಿಸಿದ್ದು ವಿವೇಕಾನಂದನ ದಗಲುಬಾಜಿ ಬುದ್ಧಿಗೆ ಕೆಲ ಸ್ಯಾಂಪಲ್ಲುಗಳಷ್ಟೇ.

ಹ್ಯೂಮನ್ ರೈಟ್ಸ್ ಹೆಸರಲ್ಲಿ ಇಷ್ಟೆಲ್ಲಾ ಅನಾಹುತ ಮಾಡಿದ ವಿವೇಕಾನಂದನ ಬಗ್ಗೆ ಪೊಲೀಸ್ ಕಮಿಷನರ್ ಶಂಕರ್ ಬಿದರಿ ಇನ್ನೂ ತಲೆಕೆಡಿಸಿಕೊಳ್ಳದೇ ಹೋದರೆ ಅದು ದೌರ್ಭಾಗ್ಯವಲ್ಲದೇ ಮತ್ತೇನು? ●

ಸಿದ್ದರಾಮಯ್ಯ ಕೈಮ ತಿನ್ನದಿಲ್ಲ ಸಾರ್

ಬಿಬಿಎಂಪಿ ಕಚೇರಿಯಲ್ಲಿ ಕುಳಿತು ಅರ್ಧ ರಾತ್ರಿಯಾದ ನಂತರ ಬೆಂಗಳೂರು ಕಟ್ಟುವ ಕೆಲಸದ ಈಕ್‌ಬ್ಯಾಕಿನಲ್ಲಿ ಮೊದಲು ಎಡೂರಪ್ಪನಿಗೆ ಬರೋಬರಿ ನೂರೈವತ್ತು ಕೋಟಿ ಮೀಸಲು ಹಣ ಎತ್ತಿಟ್ಟ ನಂತರ ಉಳಿದದ್ದನ್ನು ಕಟ್ಟಾ ಮತ್ತು ಅಶೋಕ ಹಂಚಿಕೊಳ್ಳುವಾಗ ಮೋಹನ ಎಂಬ ಯಡ್ಡಿಯ ಮನಮೋಹನ "ನನ್ನ ಕಮಿಷನ್ ಐದು ಕೋಟಿ ಇತ್ತ ಮಡಗಿ" ಎಂದನಂತಲ್ಲಾ, ಆತನ ಜುಜುಬಿ ಕಾಸಿನ ಕಡೆ ಗಮನ ಕೊಡದ ಕಂಟ್ರಾಕ್ಟರುಗಳನ್ನು ನೋಡಿದರೆ ಅವರಾರೂ ಕರ್ನಾಟಕದವರಾಗಿರಲಿಲ್ಲವಂತಲ್ಲಾ, ಇನ್ನು ದೊಡ್ಡಮೊತ್ತದ ಕಮೀಷನ್ ಕತ್ತರಿಸಿಕೊಳ್ಳುವ ಭರತಲಾಲ್ ಮೀನಾ ಕೂಡ ಕರ್ನಾಟಕದವನಲ್ಲವಂತಲ್ಲಾ, ಅಂತೂ ಕರ್ನಾಟಕದ ಹೊರಗಿನವರೇ ಸೇರಿಕೊಂಡು ಪ್ಯಾಕೇಜಿನ ಪೂರ್ಣ ಲಾಭ ಪಡೆದು ಗಂಟುಮೂಟೆ ಕಟ್ಟುವಾಗ ಇತ್ತ ಕನ್ನಡದ ಕುವರರು "ಕಾರ್ಪೊರೇಷನ್ ಕ್ಯಾಂಡೇಟುಗಳಿಗೆ ಕನಿಷ್ಠ ಒಂದು ಕೋಟಿ ಕೊಡಬೇಕು. ನಮ್ಮವರೆ ಗೆದ್ದು ಬರುವಂತೆ ಮಾಡಬೇಕಾದರೆ ನಾವು ಬಿಬಿಎಂಪಿ ಬಂಡವಾಳಕ್ಕೆ ಕೈ ಹಾಕದೆ ಇನ್ನೆಲ್ಲಿ ಕೈ ಎಟ್ಟಬೇಕು" ಎಂದು ಗೋಳಾಡುತ್ತಿದ್ದಾರಂತಲ್ಲಾ, ಥೂತ್ತೇರಿ!

****

ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ "ಇದೊಂದು ಈಡಿಯಟ್ ಸರಕಾರ" ಎಂದ ಮಾತನ್ನು ತನ್ನ ಮೇಲೆ ಎಳೆದುಕೊಂಡು ಹೇಚಾಡುತ್ತಿರುವ ಇಂಧನ ಸಚಿವ ಈಶ್ವರಪ್ಪನನ್ನ ಮಾತನಾಡಿಸಿ ನೊಂದ ಮನಸ್ಸಿಗೆ ಸಾಂತ್ವನ ನೀಡಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಕರಿಯ ಕಂಬಳಿ ಗದ್ದಿಗೆ ಮಾಡಿ ವೀರದೊಳ್ಳ ತಂದಿರಿಸಿದರೊ."

"ಹಲೋ ಯಾರ್ರೀ?"

"ನಾನು ಸಾರ್ ಯಾಹೂ ಅಂತ, ಪತ್ರಕರ್ತ."

"ಏನಾಗಬೇಕು ಹೇಳಿ ಸಾರ್."

"ಏನಿಲ್ಲ ಸಾರ್, ಸಿದ್ದರಾಮಯ್ಯ ಅಂಗನ್ನಬಾರದಿತ್ತಲ್ಲವ ಸಾರ್."

"ಅದ್ಕೆ ನಾನು ಸರಿಯಾಗಿ ಉತ್ತರ ಕೊಟ್ಟಿದ್ದಿನಲ್ಲಾ?"

"ಏನಂತ ಕೊಟ್ರಿ ಸಾರ್?"

"ಸಿದ್ದರಾಮಯ್ಯನಂಗೆ ನಾನೂ ಕೂಡ ಕುರಿ ಕೈಮ ತಿಂದು ಬೆಳೆದಿದ್ದಿನಿ. ಹೆಚ್ಚಿಗೆ ಮಾತಾಡಿದ್ರೆ ಸರಿಯಾಗಲ್ಲ ಅಂದಿದ್ದಿನಿ"

"ಸಿದ್ದರಾಮಯ್ಯ ಕೈಮ ತಿನ್ನಲ್ಲವಂತೆ ಸಾರ್. ಬರೀ ಬಾಡಿನೆ ತಿನ್ನದು, ಅದರಲ್ಲೂ ನಾಟಿಕೋಳಿ ಇಷ್ಟವಂತೆ."

"ರೀ, ಮಾಂಸದಿಂದ್ಲೆ ಅಲ್ಲವೇನ್ರಿ ಕೈಮ ಮಾಡದು."

"ಗೊತ್ತು ಸಾರ್, ಆದ್ರೆ ಹಲ್ಲು ಸರಿಯಿಲ್ಲದೋರು ಕೈಮ ಮಾಡಿಸಿಕೊಂಡು ತಿಂತರೆ."

"ನನಿಗೂ ಹಲ್ಲು ಸರಿಯಿರಲಿಲ್ಲ ಕಂಡ್ರಿ, ಈಗ ಸರಿ ಮಾಡಿಸಿಕೊಂಡಿದ್ದಿನಿ."

"ಅದು ನನಿಗೂ ಗೊತ್ತು ಸಾರ್. ನನ್ನ ಪ್ರಕಾರ ಮಾಂಸ ತಿನ್ನೋರು ಸ್ವಲುಪ ಒರಟಾಗಿರತರೆ, ಕೈಮ ತಿನ್ನೋರು ಸಾಫ್ಟಾಗಿರತರಂತೆ."

"ಅಂಗೇನು ಇಲ್ಲಾ ಕಂಡ್ರಿ. ಈಗ ನಾನು ಕೈಮ ತಿಂತಿನಿ, ಆದ್ರು ನಾನು ಜೋರಾಗಿಲ್ವ."

"ನಿಜ ಸಾರ್, ಇಷ್ಟೊಂದು ಅದ್ವಾನೆದ್ದಿರೊ ಖಾತೆಯ ಇನ್ನಾರೂ ನಿಭಾಯಿಸಕ್ಯಾಯ್ತಿರಲಿಲ್ಲ, ನೀವು ಜೋರಾಗಿರಕ್ಕೆ ಜನಗಳ ಬೈಗಳಕ್ಕೂ ಕೇರ್ ಮಾಡಂಗಿದ್ದಿರಿ. ಆದ್ರೆ ಸಿದ್ದರಾಮಯ್ಯನ ಬೈಗಳಕ್ಕೆ ಕೆರಳಿದ್ದು ಆಶ್ಚರ್ಯ."

"ಮತ್ತೆ ಈಡಿಯಟ್ ಅಂತರಲ್ರೀ."

"ಅವ್ರುರೇಳಿದ್ದು ಸರಕಾರಕ್ಕಂತೆ ಸಾರ್. ಇದೊಂದು ಈಡಿಯಟ್ ಸರಕಾರ ಅಂದರಂತೆ."

"ರೀ, ಸರಕಾರಕ್ಕೆ ಹೇಳಿದ್ರೆ ನನಿಗೇಳಿದಂಗಲವೇನ್ರಿ?"

"ಸಾರ್, ಸರಕಾರದಲ್ಲಿ ನೀವೊಬ್ಬರೇಯಿಲ್ಲಾ, ಎಡೂರಪ್ಪನಿಂದ ಹಿಡಿದು ರೇಣುಕಾಚಾರಿವರಿಗೂ ಅವ್ರುರೆ. ಅವ್ರುರಲ್ಲಿ ಯಾರಾದ್ರು ಉತ್ತರ ಕೊಡ್ತಯಿದ್ರು. ಈಗ ಅವ್ರುರೆಲ್ಲಾ ಸುಮ್ಮನಿದ್ದು ನೀವು ಮಾತ್ರ ಉತ್ತರ ಕೊಟ್ಟದ್ರಿಂದ ನೀವೊಬ್ರೆ ಈಡಿಯಟ್ ಅನ್ನಂಗಾಯ್ತು, ನಿಮ್ಮ ಸರಕಾರದ ಲಿಂಗಾಯಿತ್ರು ಏನಂತಾಯಿದಾರೆ ಗೊತ್ತ?"

"ಏನಂತಾಯಿದಾರ್ರಿ?"

"ಅದ್ಕೆ ಕುರುಬ ಅನ್ನದು. ನಾವೆಲ್ಲಾ ಸುಮ್ಮನಿದ್ರು ಈ ಈಶ್ವರಪ್ಪ ಈಡಿಯಟ್ಟಾದ ಅಂತ ನಗತಿದ್ರು."

"ಅವ್ರುರೆಲ್ಲ ಸ್ಟುಪಿಡ್ ಕಂಡ್ರಿ."

"ಯಾರು ಸಾರ್?"

"ಈಡಿಯಟ್ ಅಂತ ಬೈದೋರು."

"ಈಡಿಯಟ್ ಅಂತ ಬೈದೋರೆಲ್ಲಾ ಸ್ಟುಪಿಡ್ಡ ಸಾರ್?"

"ಹೌದು ಮತ್ತೆ?"


"ಸಾರ್ ಈಡಿಯಟ್ ಅಂದ್ರೇನು? ಸ್ಟುಪಿಡ್ ಅಂದ್ರೇನು ಸಾರ್?"


"ಬೈಗಳ ಕಂಡ್ರಿ, ಅವು ಕೆಟ್ಟ ಬೈಗಳ."

"ಅದೆ ಏನು ಬೈಗಳ ಅಂತ?"

"ನಮ್ಮ ಶಂಕರಮೂರ್ತಿ ಕೇಳಿ ಹೇಳ್ತಿನಿರಿ."

"ಥೂತ್ತೇರಿ!!"






ಹರಕು ನಾಲಿಗೆ ಈಶ್ವರಿಯ ಹೆಗಲೇರಿದ ಬಿಜೆಪಿ

ಬಿಜೆಪಿ ರಾಜ್ಯ ಘಟಕ ಅಧ್ಯಕ್ಷರಾಗಿ ಹರಕು ನಾಲಿಗೆಯ ಈಶ್ವರಪ್ಪ ಆಯ್ಕೆಯಾಗಿದ್ದಾರೆ. ಅಲ್ಲ, ಆಯ್ಕೆಯಾಗಿದ್ದಾರೆ ಎಂಬುದಕ್ಕಿಂತ ಆರ್‌ಎಸ್‌ಎಸ್ ಅವರನ್ನು ನೇಮಕ ಮಾಡಿದೆ ಎನ್ನುವುದೇ ಸರಿ. ಇಂಧನ ಸಚಿವರಾಗಿ ಜನತೆಗೆ ಏನನ್ನೂ ಮಾಡದ, ರಾಜ್ಯದ ಹಳ್ಳಿಗಳನ್ನು ಕತ್ತಲೆಯಲ್ಲಿಟ್ಟು ರೈತರ ಹಿಡಿಶಾಪಕ್ಕೆ ಗುರಿಯಾಗಿರುವ ಈಶ್ವರಪ್ಪ, ಒಂದು ರೀತಿಯಲ್ಲಿ ಕತ್ತಲೆ ಆವರಿಸಿಕೊಂಡಿರುವ ಬಿಜೆಪಿಗೆ ಬೆಳಕು ನೀಡುವ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಇಲ್ಲಿಯೂ ಅವರು ಯಶಸ್ವಿಯಾಗುವ ಸೂಚನೆಯೇನೂ ಇಲ್ಲ.

ಅಧ್ಯಕ್ಷಗಾದಿಗೆ ಕಳೆದ ಎರಡು ತಿಂಗಳಿನಿಂದ ಹುಡುಕಾಟ ನಡೆಸಿದ್ದ ಸಂಘಪರಿವಾರದ ಮಂದಿ 'ಹಾಳೂರಿಗೆ ಉಳಿದವನೇ ಗೌಡ' ಎಂದು ಕೊನೆಗೆ ಈಶ್ವರಪ್ಪನನ್ನು ಎಳೆದುಕೊಂಡು ಬಂದು ಪಕ್ಷದ ಜವಾಬ್ದಾರಿ ಹೋರಿಸಿದ್ದಾರೆ. ಇದರ ಹಿಂದೆ ಅನಂತಕುಮಾರ್ ಕೈವಾಡವೂ ಇದೆ.



ಅಡ್ಡಾದಿಡ್ಡಿಯಾಗಿ ಹಾರಾಡುತ್ತಿದ್ದ ಯಡ್ಡಿ ಈಗಿನಂತೆಯೇ ಬಾಯಿ ಮುಚ್ಚಿಕೊಂಡು ಕುಳಿತಿರುವಂತೆ ಮಾಡಲು ಈಶ್ವರಪ್ಪನಿಂದ ಮಾತ್ರ ಸಾಧ್ಯ ಎಂದು ಲೆಕ್ಕ ಹಾಕಿಯೇ ಅನಂತು ಪಕ್ಷದ ಹೈಕಮಾಂಡ್ ಮುಂದೆ ಈಶ್ವರಿಯ ಹೆಸರು ಪ್ರಸ್ತಾಪಿಸಿದ್ದರು. ಒಂದಿಷ್ಟು ಜೋರಾಗಿ ಮಾತನಾಡಿ ವಿಪಕ್ಷಗಳ ಬಾಯಿ ಮುಚ್ಚಿಸಲು ಮತ್ತು ಹಿಂದುಳಿದ ಜಾತಿಗಳನ್ನು ಆಕರ್ಷಿಸಲು ಈಶ್ವರಿಯೇ ಸೂಕ್ತ ಎಂದು ತೀರ್ಮಾನಿಸಿ ಆರ್‌ಎಸ್‌ಎಸ್ ಕೂಡ ಇವರ ಹೆಸರಿಗೆ ಒಪ್ಪಿಗೆ ನೀಡಿತು. ಪರಿಣಾಮ ಹಠಾತ್ತನೆ ಈಶ್ವರಪ್ಪರ ಹೆಸರು ಅಧ್ಯಕ್ಷಗಾದಿಗೆ ಸೂಚಿಸಲ್ಪಟಿತು.

ಈಶ್ವರಪ್ಪ ಒಪ್ಪಿಕೊಂಡಿದ್ದೇಕೆ?

ಈ ಹಿಂದಿನ ಸರ್ಕಾರದಲ್ಲಿ ಜಲಸಂಪನ್ಮೂಲ ಸಚಿವರಾಗಿ ಚೆನ್ನಾಗಿ ದುಡ್ಡು ಮಾಡಿಕೊಳ್ಳುತ್ತಿದ್ದ ಈಶ್ವರಪ್ಪರ ಮೇಲೆ ಸಹಜವಾಗಿಯೇ ಯಡ್ಡಿಯ ವಕ್ರದೃಷ್ಟಿ ಬಿದ್ದಿತ್ತು. ಈಶ್ವರಿಯನ್ನು ಹೀಗೇ ಬಿಟ್ಟರೆ ನಾಳೆ ಆತ ತಮ್ಮನ್ನೂ ಮೀರಿಸಬಹುದು ಎಂಬ ಭಯವೂ ಯಡ್ಡಿಯನ್ನು ಕಾಡಲಾರಂಭಿಸಿತು. ಹೀಗಾಗಿ ಈ ಬಾರಿ ದುಡ್ಡು ಮಾಡಿಕೊಳ್ಳಲು ಅವಕಾಶವಿದ್ದರೂ ಜನರಿಂದ 'ಛೀ.. ಥೂ...' ಎಂದು ಉಗಿಸಿಕೊಳ್ಳಬೇಕಾದ ಇಂಧನ ಖಾತೆಯನ್ನು ನೀಡಿ ಈಶ್ವರಿಯನ್ನು ನಿಯಂತ್ರಿಸಲು ಯತ್ನಿಸಿದರು.

ಕೆ೦ೀ-ಜಾ ಸರ್ಕಾರದಲ್ಲಿ ಯಡ್ಡಿ ಉಪ ಮುಖ್ಯಮಂತ್ರಿಯಾಗಿದ್ದಾಗಲೇ ಹಳೆಯ ಗೆಳೆಯ ಈಶ್ವರಿಯೊಂದಿಗೆ ಜಗಳ ಕಾದಿದ್ದರು. ಈಶ್ವರಪ್ಪ ಹೇಳಿದ ಒಂದೇ ಒಂದು ಕೆಲಸವನ್ನೂ ಮಾಡದೆ, ಅವರನ್ನು ದೂರವಿಟ್ಟಿದ್ದರು.

ಇದೆಲ್ಲದರಿಂದ ರೋಸತ್ತ ಈಶ್ವರಪ್ಪ, ಶಂಕರಮೂರ್ತಿ ಮತ್ತು ಜಗದೀಶ್ ಶೆಟ್ಟರ್ ಜೊತೆ ಸೇರಿಕೊಂಡು ಯಡ್ಡಿಯ ವಿರುದ್ಧ ಹೈಕಮಾಂಡ್‌ಗೆ ದೂರು ಕೂಡ ನೀಡಿದ್ದರು. ಶೋಭಾ ಕರಂದ್ಲಾಜೆಗೆ ಮಂತ್ರಿಗಿರಿ ನೀಡುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಪುತ್ರಮಹಾಶಯ ರಾಘವೇಂದ್ರನಿಗೆ ಲೋಕಸಭಾ ಟಿಕೆಟ್ ನೀಡುವ ಯಡ್ಡಿಯ ನಿರ್ಧಾರವನ್ನು ವಂಶಪಾರಂಪರ್ಯ ರಾಜಕೀಯ ಎಂದು ಜರೆದಿದ್ದರು. ರಾಜ್ಯ ಬಿಜೆಪಿಯಲ್ಲಿ ಭಿನ್ನಮತ ಭುಗಿಲೆದ್ದಾಗ ಯಡ್ಡಿಯ ವಿರುದ್ಧ ಬಹಿರಂಗವಾಗಿ ಮಾತನಾಡಿದ್ದರು. ಮಾತ್ರವಲ್ಲ, ಯಡ್ಡಿಯ ಯಡವಟ್ಟುಗಳನ್ನು, ವಿಫಲತೆಗಳನ್ನು ಮತ್ತು ತಪ್ಪುಗಳನ್ನು ಪಟ್ಟಿ ಮಾಡಿ ಹೈಕಮಾಂಡ್‌ಗೆ ನೀಡಿದ್ದರು.

ಈ ಎಲ್ಲ ಸಂದರ್ಭಗಳಲ್ಲಿ ಯಡ್ಡಿಯೇನೂ ಸುಮ್ಮನೆ ಕೂತಿರಲಿಲ್ಲ. ರಾಜ್ಯದಲ್ಲಿನ ವಿದ್ಯುತ್ ಸಮಸ್ಯೆಗಳಿಗೆ ಈಶ್ವರಿಯೇ ಹೊಣೆಯೆಂಬಂತೆ ಮಾತನಾಡಿ, ಅವರನ್ನು ವಿಫಲ ಸಚಿವನ್ನಾಗಿ ಮಾಡಿದ್ದರು. ಶಿವಮೊಗ್ಗದಲ್ಲಿ ಅವರು ಕೈ ಹಾಕಿದ ಕೆಲಸಕ್ಕೆಲ್ಲಾ ಅಡ್ಡ ಪಡಿಸಿ, ಪಕ್ಷದ ಕಾರ್ಯಕರ್ತರನ್ನು ಅವರ ವಿರುದ್ಧವೇ ಎತ್ತಿ ಕಟ್ಟುವ ಕೀಳು ರಾಜಕೀಯ ಮಾಡಿದರು. ಈಶ್ವರಪ್ಪನನ್ನು ಬಾಯಿಗೆಬಂದಂತೆ ಬೈದಾಡಿಕೊಂಡು ಓಡಾಡಿಕೊಂಡಿದ್ದ ಆಯನೂರ ಮಂಜುನಾಥ ಎಂಬ ಹರಕಲು ಚೆಡ್ಡಿಯನ್ನು ಪಕ್ಷಕ್ಕೆ ಕರೆದುಕೊಂಡು ಬಂದು, ಈಶ್ವರಿಯ ವಿರುದ್ಧವೇ ಛೂಬಿಟ್ಟರು. ಹೀಗೆ ಇವರಿಬ್ಬರ ನಡುವೆ ಒಂದು ರೀತಿಯಲ್ಲಿ 'ಕೋಲ್ಡ್ ವಾರ್' ನಡೆಯುತ್ತಲೇ ಇತ್ತು.



ಇಂತಹ ಸಂದರ್ಭದಲ್ಲೇ ಅನಂತು ಅಧ್ಯಕ್ಷಗಾದಿಯ ಪ್ರಸ್ತಾಪವನ್ನು ಈಶ್ವರಿ ಮುಂದಿಟ್ಟರು. "ಮುಖ್ಯಮಂತ್ರಿಯಾಗಿ ಯಡ್ಡಿ ನಿಮ್ಮನ್ನು ಕುಣಿಸಿದ್ದಾರೆ, ಅಸಮರ್ಥ ಸಚಿವ ಎಂದು ಬಿಂಬಿಸಿದ್ದಾರೆ. ಈಗ ನೀವು ಪಕ್ಷದ ಅಧ್ಯಕ್ಷರಾಗಿ ಈ ಕೆಲಸ ಮಾಡಿ" ಎಂದು ಈಶ್ವರಿಯ ಕಿವಿ ಊದಿದರು. "ಹೌದಲ್ಲಾ, ಇದು ಒಳ್ಳೆಯ ಅವಕಾಶ. ಹೆಚ್ಚುಕಡಿಮೆಯಾಗಿ ಮುಂದೆ ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಯೂ ಆಗಬಹುದು" ಎಂದು ಲೆಕ್ಕಾಚಾರ ಹಾಕಿದ್ದೇ ಈಶ್ವರಿ "ಎಸ್" ಎಂದು ಹಲ್ಲುಗಿಂಜಿದರು. ಅಲ್ಲಿಗೆ ಯಡ್ಡಿ ವಿರುದ್ಧ ಈ ಯುದ್ಧದಲ್ಲಿ ಅನಂತು ಗೆದ್ದಂತಾಗಿದೆ.

ಸಂಘಪರಿವಾರಕ್ಕೆ ಮೂರು ಕಾರಣ

ಹರಕು ನಾಲಿಗೆಯ, ಬಾಯಿಗೆ ಬಂದಹಾಗೆ ಮಾತನಾಡುವುದರಲ್ಲಿ ಪಕ್ಷದ ವಕ್ತಾರ ಸಿ.ಟಿ. ರವಿಯನ್ನೂ ಮೀರಿಸುವ ಈಶ್ವರಪ್ಪನಿಗೆ ಪಕ್ಷದ ಜವಾಬ್ದಾರಿ ಹೊರಿಸಲು ಸಂಘಪರಿವಾರಕ್ಕೆ ಮೂರು ಕಾರಣಗಳಿದ್ದವು.



ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ನಡೆಸುತ್ತಿದ್ದ ಚೆಡ್ಡಿ ನಾಯಕರೆಲ್ಲಾ ಅನನುಭವಿಗಳು ಹಾಗೂ ವಯಸ್ಸಿನಲ್ಲಿ ಚಿಕ್ಕವರು. ಹೀಗಾಗಿ 1993ರಲ್ಲಿ ಪಕ್ಷದ ಅಧ್ಯಕ್ಷರಾಗಿ ಪಕ್ಷ ಕಟ್ಟಿದ ಅನುಭವ ಇರುವ ಈಶ್ವರಪ್ಪರಿಗೆ ಈ ಜವಾಬ್ದಾರಿ ಹೊರಿಸುವುದೇ ಸರಿ ಎಂದು ಚೆಡ್ಡಿಗಳ ದೊಣ್ಣೆ ನಾಯಕರು ತೀರ್ಮಾನಿಸಿದರು.

ಎರಡನೆಯದಾಗಿ, ಯಡ್ಡಿಯ ಲಿಂಗಾಯತ ಪರ ಆಡಳಿತದಿಂದಾಗಿ ಪಕ್ಷದಿಂದ ದೂರ ಸರಿಯುತ್ತಿರುವ ಹಿಂದುಳಿದ ಜಾತಿಗಳನ್ನು ಮತ್ತೆ ಬಿಜೆಪಿಗೆ ಎಳೆದುಕೊಂಡು ಬರಲು ಕುರುಬ ಸಮುದಾಯಕ್ಕೆ ಸೇರಿದ ಈಶ್ವರಪ್ಪರೇ ಸೂಕ್ತ ಆಯ್ಕೆ ಎಂದು ಅವರು ಲೆಕ್ಕ ಹಾಕಿದರು. ಅಲ್ಲದೆ ಮುಂದಿನ ಮುಖ್ಯಮಂತ್ರಿ ಎಂದೇ ಬಿಂಬಿಸಲ್ಪಡುತ್ತಿರುವ ಕಾಂಗ್ರೆಸ್‌ನ ಸಿದ್ದರಾಮಯ್ಯಗೆ ಬಲವಾದ ಹೊಡೆತ ನೀಡುವ ಉದ್ದೇಶವೂ ಇದರ ಹಿಂದಿದೆ.

ಇನ್ನು ಮೂರನೆಯದಾಗಿ, ಪಕ್ಷದಲ್ಲಿನ ಭಿನ್ನಮತೀಯರನ್ನು ಮಣಿಸುವುದು. ಬೇರೆ ಯಾರೇ ಅಧ್ಯಕ್ಷರಾದರೂ ಭಿನ್ನಮತೀಯರನ್ನು ಸಮಾಧಾನಪಡಿಸಲು ಚಿಕ್ಕವರಾಗುತ್ತಾರೆ. ಅಧ್ಯಕ್ಷರು ಹೇಳಿದ ಮಾತನ್ನು ಶಾಸಕರೂ ಕೇಳುವುದಿಲ್ಲ. ಈಶ್ವರಪ್ಪರಾದರೆ ಎಲ್ಲರನ್ನೂ ಸಂಭಾಳಿಸಬಹುದು. ಅಲ್ಲದೆ, ಯಡ್ಡಿ ಹಾದಿ ತಪ್ಪಿದರೆ ಅವರನ್ನು ಕರೆದು ಬುದ್ಧಿಮಾತು ಹೇಳಲೂ ಈಶ್ವರಪ್ಪ ಹಿಂಜರಿಯರು ಎಂದು ಭಾವಿಸಿ ಅವರ ಹೆಗಲಿಗೆ ಈ ಜವಾಬ್ದಾರಿ ವಹಿಸಲಾಗಿದೆ. ಆದರೆ 'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' ಎಂಬ ಗಾದೆ ಮಾತಿನಂತೆ ಈಶ್ವರಪ್ಪ ಮನೆ ಕೆಡಿಸುವ ಎಲ್ಲ ಲಕ್ಷಣಗಳೂ ಇವೆ.

ಏನೇ ಆಗಲಿ ಇಂಧನ ಖಾತೆಯಿಂದ ಮುಕ್ತಿ ಸಿಕ್ಕಿತಲ್ಲ ಎಂದು ಈಶ್ವರಪ್ಪ ಫುಲ್ ಖುಷಿಯಾಗಿದ್ದಾರೆ. ಪಕ್ಷದ ಅಧ್ಯಕ್ಷರಾಗಿ ಎಲ್ಲ ಸಚಿವರ ಮೇಲೆ ಪರೋಕ್ಷವಾಗಿ ನಿಯಂತ್ರಣ ಹೇರಿ ತಮ್ಮ ಕೆಲಸ ಮಾಡಿಸಿಕೊಳ್ಳಬಹುದು ಎಂದು ಒಳಗೊಳಗೇ ಲೆಕ್ಕಾಚಾರ ಹಾಕುತ್ತಿದ್ದಾರೆ. ಇನ್ನು ಮುಂದಿನ ಬಿಬಿಎಂಪಿ, ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಸೋತರೆ ಅದರ ಹೊಣೆ ಹೊರಬೇಕಾಗುತ್ತದೆಯಲ್ಲ ಎಂಬ ಭಯ ಕೂಡ ಅವರಿಗಿಲ್ಲ. ಏಕೆಂದರೆ ಅದನ್ನು ಯಡ್ಡಿಯ ಹೆಗಲಿಗೆ ಹೇಗೆ ಕಟ್ಟಬೇಕೆಂದು ಈಗಾಗಲೇ ನರಿಬುದ್ಧಿಯ ಅನಂತು ಹೇಳಿಕೊಟ್ಟಿದ್ದಾರೆ!

ತೆರೆಮರೆಯಲ್ಲಿ ಪೈಪೋಟಿ ನಡೆಸಿದವರಿಗೆ ನಿರಾಶೆ

ಬಹುತೇಕ ಬಿಜೆಪಿ ನಾಯಕರಿಗೆ ತಾವೇ ಅಧ್ಯಕ್ಷರಾಗಬೇಕೆಂಬ ಹುಮ್ಮಸ್ಸು ಈ ಬಾರಿ ಇಲ್ಲದೇ ಇದ್ದರೂ, ಒಂದು ಅವಕಾಶ ಸಿಕ್ಕರೆ ನೋಡೋಣ ಎಂದು ಕೆಲವರು ಪ್ರಯತ್ನ ಕೂಡ ನಡೆಸಿದ್ದರು. ಇವರಲ್ಲಿ ಅನರ್ಹರ ಸಂಖ್ಯೆಯೇ ಹೆಚ್ಚು. ಯಡ್ಡಿಯ ಬಣ, ರೆಡ್ಡಿಗಳ ಗ್ಯಾಂಗ್, ಅನಂತು ತಂಡ ಮತ್ತು ಆರ್.ಅಶೋಕ್‌ನ ಹಿಂಡು ಎಲ್ಲರೂ ತಾವು ಹೇಳಿದವರೇ ಅಧ್ಯಕ್ಷರಾಗಬೇಕೆಂದು ಪಟ್ಟು ಹಿಡಿದು ಕುಳಿತಿದ್ದರು. ಹೀಗಾಗಿ ಅಧ್ಯಕ್ಷರ ಆಯ್ಕೆ ಕಗ್ಗಂಟಾಗಿ ಪರಿಣಮಿಸಿದೆ ಎಂದೇ ವಿಶ್ಲೇಷಿಸಲಾಗಿತ್ತು.

ಹಿಂದುಳಿದ ಜಾತಿಗೆ ಸೇರಿದ ಸಚಿವ ಅರವಿಂದ ಲಿಂಬಾವಳಿ, ಕುರುಬ ಸಮುದಾಯಕ್ಕೆ ಸೇರಿದ ವಿಜಯಶಂಕರ್, ಬ್ರಾಹ್ಮಣ ಸಂಸದ ಪ್ರಹ್ಲಾದ್ ಜೋಷಿ, ಪಕ್ಷದ ವಕ್ತಾರ ಒಕ್ಕಲಿಗ ಸಿ.ಟಿ.ರವಿ ಮತ್ತು ಮಾಜಿ ಶಾಸಕ ಆರಗ ಜ್ಞಾನೇಂದ್ರರ ಹೆಸರು ಅಧ್ಯಕ್ಷ ಸ್ಥಾನಕ್ಕೆ ಪ್ರಮುಖವಾಗಿ ಕೇಳಿಬಂದಿದ್ದವು.

ಅರವಿಂದ ಲಿಂಬಾವಳಿ ನೇಮಕಕ್ಕೆ

ಕಣ್ಣಿಟ್ಟಿದ್ದ ಕರುಣಾ



ಅಧ್ಯಕ್ಷಗಾದಿಗೆ ಯಾರು ಅರ್ಹರು ಎಂದು ಆರ್‌ಎಸ್‌ಎಸ್ ವರಿಷ್ಠರು ತಲೆಕೆರೆದುಕೊಂಡು ಕುಳಿತಿದ್ದಾಗ ಕಂದಾಯ ಸಚಿವ ಕರುಣಾಕರ ರೆಡ್ಡಿ "ನಾನು ರೆಡಿ" ಎಂದು ಗಣಿ ಧೂಳನ್ನು ಕೆಡವಿಕೊಳ್ಳುತ್ತಾ ಎದ್ದು ನಿಂತಿದ್ದರು.

ಸದ್ಯಕ್ಕೆ ಗಣಿ ಕುಣಿಕೆ ಬಿಗಿಯಾಗುತ್ತಿರುವುದರಿಂದ ಅದರ ತಲೆಬಿಸಿಯಲ್ಲಿರುವ ಗಣಿ ರೆಡ್ಡಿಗಳು ಇತ್ತ ಮುಖ ಹಾಕಲಾರರು ಎಂದೇ ಭಾವಿಸಿದ್ದ ಬಿಜೆಪಿ ನಾಯಕರಿಗೆ ಕರುಣಾಕರ ರೆಡ್ಡಿಯ ರಂಗಪ್ರವೇಶ ಆಶ್ಚರ್ಯ ಮೂಡಿಸಿತ್ತು.

ಯಾರೇ ಅಧ್ಯಕ್ಷರಾದರೂ ಅವರನ್ನು 'ದುಡ್ಡು ಕೊಟ್ಟು ಖರೀದಿಸಬಹುದು' ಎಂದು ಈ ಹಿಂದೆ ಲೆಕ್ಕಹಾಕುತ್ತಿದ್ದ ಗಣಿ ಧಣಿಗಳಿಗೆ ಆಂಧ್ರ ಮತ್ತು ರಾಜ್ಯದಲ್ಲಿನ ರಾಜಕೀಯ ಬೆಳವಣಿಗೆಗಳು ವಾಸ್ತವದ ಅರಿವು ಮೂಡಿಸಿವೆ. ಹೀಗಾಗಿ ಮುಂದೆಯೂ ಅಧಿಕಾರ ಮತ್ತು ಲೂಟಿ ಮಾಡಲು ಪರ್ಮಿಷನ್ ಬೇಕೆಂದರೆ ತಾವೇ ರಾಜ್ಯದ ಮುಖ್ಯಮಂತ್ರಿಯಾಗಬೇಕೆಂದು ರೆಡ್ಡಿ ಬ್ರದರ್ಸ್ ಚಿಂತಿಸಿದ್ದರು.

ಆದರೆ ದುಡ್ಡಿದೆ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಆಗಲು ಪಕ್ಷವಾಗಲಿ, ಆರ್‌ಎಸ್‌ಎಸ್‌ಆಗಲಿ ಸುಲಭವಾಗಿ ಬಿಡುವುದಿಲ್ಲ. ಆದ್ದರಿಂದ ಪಕ್ಷದ ಅಧ್ಯಕ್ಷರಾಗಿ ಒಂದಿಷ್ಟು ಓಡಾಡಿಕೊಂಡಿದ್ದರೆ ಮುಖ್ಯಮಂತ್ರಿಯಾಗುವುದು ಸುಲಭವಾಗುತ್ತದೆ ಎಂದು ಸ್ಕೆಚ್ ಹಾಕಿದ್ದ ರೆಡ್ಡಿ ಗ್ಯಾಂಗ್ ಕರುಣಾಕರ ರೆಡ್ಡಿಯನ್ನು ಮುಂದೆ ಬಿಟ್ಟಿದ್ದರು. ಗಣಿ ಧಣಿಗಳ ಹಂಗಿನಲ್ಲಿ ಸಿಲುಕಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕಿ ಸುಷ್ಮಾ ಸ್ವರಾಜ್ ಅವರೇ ಜವಾಬ್ದಾರಿ ಹೊತ್ತು ಕರುಣಾಕರನನ್ನು ರಾಜ್ಯಾಧ್ಯಕ್ಷ ಸ್ಥಾನಕ್ಕೆ ಕೂರಿಸಬಹುದು ಎಂದು ರೆಡ್ಡಿ ಬಣ ಕನಸು ಕಾಣುತ್ತಿತ್ತು.

ಈಗಾಗಲೇ ರಾಜ್ಯ ಸರ್ಕಾರ ಗಣಿ ರೆಡ್ಡಿಗಳ ಹಿಡಿತದಲ್ಲಿದೆ ಎಂಬುದು ಸಾಬೀತಾಗಿದೆ. ಈಗ ಪಕ್ಷದ ಹೊಣೆಯನ್ನೂ ಅವರಿಗೇ ನೀಡಿದರೆ ಪಕ್ಷದ ಕಾರ್ಯಕರ್ತರಿಗೆ, ಮತದಾರರಿಗೆ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ ಎಂದು ಆರ್‌ಎಸ್‌ಎಸ್ ವರಿಷ್ಠರು ನಯವಾಗಿಯೇ ಅವರ ಬೇಡಿಕೆಯನ್ನು ತಿರಸ್ಕರಿಸಿದ್ದಾರೆ. ಅಷ್ಟೇ ಅಲ್ಲ "ನೋಡಿ, ನಿಮ್ಮ ಪರವಾಗಿರುವ ಈಶ್ವರಪ್ಪರೇ ಅಧ್ಯಕ್ಷರಾಗುತ್ತಾರೆ, ಯಾವ ಕೆಲಸವನ್ನಾದರೂ ಮಾಡಿಸಿಕೊಳ್ಳಬಹುದು" ಎಂದು ರೆಡ್ಡಿ ಬ್ರದರ್ಸ್‌ಗೆ ಬೆನ್ನು ತಟ್ಟಿ ಕಳುಹಿಸಿದ್ದಾರೆ. ಈಶ್ವರಪ್ಪರಾದರೆ 'ನೋ ಪ್ರಾಬ್ಲಮ್' ಎಂದು ರೆಡ್ಡಿ ಬ್ರದರ್ಸ್ ಹಿಂದಿರುಗಿದರಂತೆ.

-ನೀರದ ಬೆಂಗಳೂರು

ಪೈಲ್ವಾನ್ ಈಶ್ವರಪ್ಪನ ನಾಯಕತ್ವದಲ್ಲಿ ಬಿಜೆಪಿ ಚಿತ್

ಈ ಬಿಜೆಪಿಗಳಿಗೆ ಬಂದೊದಗಿರುವ ದುರ್ಗತಿಗೆ ನೆಯೇ ಇಲ್ಲದಂತಾಗಿದೆ. ರಾಷ್ಟ್ರಮಟ್ಟದಲ್ಲಿ ಗಡ್ಕರಿ ಬಿ ತೂಕವಿರದ ದಢೂತಿ ವ್ಯಕ್ತಿ ಬಿಜೆಪಿ ಕ್ಷನಾಗಿರುವ ಬೆನ್ನಲ್ಲೆ ಇತ್ತ ಕರ್ನಾಟಕದಲ್ಲೂ ಜೆ ಪೈಲ್ವಾನ ಈಶ್ವರಪ್ಪ ಅಧ್ಯಕ್ಷರಾಗುತ್ತಿದ್ದಾರೆ. ಕೈ-ಬಾಯಿ ಎರಡೂ ಶುದ್ಧವಾಗಿರುವ ರುಷ್ಯ ಎಂದು ಈಶ್ವರಪ್ಪನವರನ್ನು ಅಧ್ಯಕ್ಷಗಿರಿಗೆ ಸಬೇಕೆಂದು ಆರ್‌ಎಸ್‌ಎಸ್ ಪುರೋಹಿತರ ಯಲ್ಲಿ ನಿರ್ಧಾರವಾಗಿದೆ. ಅಂದರೆ ಇದರರ್ಥ ದ ಬಿಜೆಪಿ ನಾಯಕರುಗಳ ಬಾಯಿ ಶುದ್ಧವಿಲ್ಲ ಎಂದು ಪರಿವಾರಿಗಳೇ ಕೊಂಡಂತಾಯಿತು. ಇಷ್ಟರ ಲೂ ಈಶ್ವರಪ್ಪ ಸಾಚಾ ಏನಲ್ಲ. ಟಿಯೂರಪ್ಪನೊಂದಿಗೆ ಪೋಟಿಗೆ ಬಿದ್ದವರಂತೆ ದುಡ್ಡು ಮುತ್ತಾ ಶಿವಮೊಗ್ಗ ಗಳೂರಿನಲ್ಲಿ ಕೋಟಿಗಟ್ಟಲೆ ಮಾಡಿಕೊಂಡಿರುವ ಈಶ್ವರಪ್ಪ ಗಳ ಕಣ್ಣಲ್ಲಿ ಸಾಚಾ ಆಗಿ ುತ್ತಿರುವುದು ರ್ಯಕರವಾಗಿದೆ.

ಅವಕಾಶ ಸಿಕ್ಕಾಗಲೆಲ್ಲಾ ುಳಿದ ವರ್ಗಗಳ ನಾಯಕನಂತೆ ಪೋಸು ುತ್ತಿದ್ದ ಈಶ್ವರಪ್ಪ ಪುರೋಹಿತಶಾಹಿಗಳ ಪಾದ ಮಾಡುತ್ತಾ ಹಿಂದುಳಿದವರಿಗೆ ದ್ರೋಹ ಬಗೆದದ್ದೇ ಯಿದೆ. ಉಡುಪಿಯ ಬ್ರಾಹ್ಮಣ ಮಠಾಧೀಶರು ಗೋಪುರ ಕೆಡವಿದಾಗ ಈಶ್ವರಪ್ಪ ಬಾಯೇ ಲಿಲ್ಲ. 'ಗೋಮಾಂಸ ತಿನ್ನುವವರ ನಾಲಿಗೆ ಿಸಬೇಕು' ಎಂದು ಒಮ್ಮೆ ಈಶ್ವರಪ್ಪ ಕೊಂಡಿದ್ದರು. ಹೀಗೆ ಕತ್ತರಿಸುವ ಭಾಷೆ ತನಾಡುವ ವ್ಯಕ್ತಿ ಬಿಜೆಪಿ ಕ್ಷರಾಗುತ್ತಿರುವುದರಿಂದ ಲಾಭವಾಗುವುದು ಿಗಲ್ಲ, ಬದಲಾಗಿ ಕಾಂಗ್ರೆಸ್ಸಿಗೆ. ಏಕೆಂದರೆ ಕುರುಬ ದಾಯವೂ ಸೇರಿದಂತೆ ಸಕಲ ಹಿಂದುಳಿದ ವರ್ಗಗಳಿಗೂ ಈಗ ಸಿದ್ದರಾಮಯ್ಯ ತರದ ಲೀಡರ್‌ಗಳಿದ್ದಾರೆ. ಒಂದು ಕ್ವಿಂಟಾಲ್ ತೂಕವಿರಬಹುದಾದ ಈಶ್ವರಪ್ಪ ಸಿದ್ದರಾಮಯ್ಯನವರ ಎದುರು ಒಂದು ಒಣ ಕಾಗದದ ಚೂರು ಅಷ್ಟೆ.

ಇನ್ನೊಂದು ವಿಚಾರ ಏನೆಂದರೆ ಈಶ್ವರಪ್ಪನನ್ನು ಬಿಜೆಪಿ ಅಧ್ಯಕ್ಷಗಿರಿಗೆ ತಂದು ಕೂರಿಸುವಲ್ಲಿ ಯಡ್ಡಿಯ ಪಿತೂರಿಯೂ ಇದೆ. ತನ್ನ ಸರ್ಕಾರದಲ್ಲಿ ಈಶ್ವರಪ್ಪನನ್ನು ಕರೆಂಟು ಮಂತ್ರಿ ಮಾಡಿ ಆತ ಎಲ್ಲರಿಂದಲೂ ಉಗಿಸಿಕೊಳ್ಳುವಂತಾ ಸ್ಥಿತಿ ನಿರ್ಮಿಸಿದ್ದರು ಯಡ್ಡಿ. ಅದೇ ರೀತಿ ಈಗ ಭಿನ್ನಮತ,



ಒಳಜಗಳ, ಭ್ರಷ್ಟಾಚಾರದಿಂದ ಹರಿದು ಚಿಂದಿಯಾಗುತ್ತ ಮುಳುಗುತ್ತಿರುವ ಬಿಜೆಪಿ ಹಡಗಿಗೆ ಈಶ್ವರಪ್ಪನನ್ನು ಕಫ್ತಾನ್‌ನನ್ನಾಗಿಸಿ ಯಡ್ಡಿ ಒಂದೇ ಏಟಿಗೆ ಎರಡು ಹಕ್ಕಿ ಹೊಡೆಯುವ ಪ್ಲಾನ್ ಮಾಡಿದ್ದಾರೆ. ಮುಂಬರಲಿರುವ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇನ್ನಿತರ ಎಲೆಕ್ಷನ್‌ನಲ್ಲಿ ಬಿಜೆಪಿ ಅಕಸ್ಮಾತ್ ಗೆದ್ದರೆ ಅದು ತನ್ನ ಸರ್ಕಾರದ ಸಾಧನೆ ಎಂದು ಬಿಂಬಿಸಿಕೊಳ್ಳುವುದು. ಸೋತರೆ ಅದನ್ನ ಈಶ್ವರಪ್ಪ ತಲೆಗೆ ಕಟ್ಟಿ 'ಹರಕೆಯ ಕುರಿ' ಆಗಿಸುವುದೇ ಯಡ್ಡಿ ಪ್ಲಾನ್.

ನೂರಾರು ಪಾಪಕೃತ್ಯಗಳಲ್ಲಿ ಸಿಲುಕಿ ಕರಗಿಹೋಗುತ್ತಿರುವ ಬಿಜೆಪಿ ಪಕ್ಷ ಈಗ ಪೈಲ್ವಾನ್ ಈಶ್ವರಪ್ಪನ ಕೈಲೇ ಚಿತ್ ಆದರೆ ಏನೂ ಅಚ್ಚರಿಯಿಲ್ಲ.

ಸ್‌ಎಸ್ ಕೂಡ ಒಲವು ವ್ಯಕ್ತಪಡಿಸಿತ್ತು, ಉನ್ನತ ನನ್ನು ಕೇಸರೀಕರಣಗೊಳಿಸುವಲ್ಲಿ ಬಿಜಿಯಾಗಿರುವ ವಳಿ ಈ ಹುದ್ದೆ ತಮಗೆ ನೀಡಿದರೆ ಳ್ಳುವುದು ಎಂದು ತೀರ್ಮಾನಿಸಿದ್ದರು. ಹೀಗಾಗಿಯೇ 18 ತಿಂಗಳಿನಲ್ಲಿ ಉನ್ನತ ಶಿಕ್ಷಣ ಇಲಾಖೆ ಮಾಡಿದ ರೆ ಕೆಲಸವನ್ನೆಲ್ಲಾ ದೊಡ್ಡ ಸಾಧನೆ ಎಂಬಂತೆ ಪುಸ್ತಕ ರೂಪದಲ್ಲಿ ಪ್ರಕಟಿಸಿ ಅವುಗಳನ್ನು ಹಂಚಿದ್ದರು. ಶಿಕ್ಷಣ ಇಲಾಖೆ ಲಕ್ಷಾಂತರ ರೂ. ಖರ್ಚು ಈ ಪುಸ್ತಕ ಪ್ರಕಟಿಸಿದ್ದು, ಇದರಲ್ಲಿ ಬರೀ ವಳಿ ಸಾಹೇಬರ ಫೋಟೋಗಳೇ ುಳುಕುತ್ತಿವೆ. ಆದರೆ ಅವರ ರಾಜಕೀಯ ಗುರು ಅವರಿಗೆ ಕೈ ಕೊಟ್ಟಿದ್ದಾರೆ. ಹೈಕಮಾಂಡ್ ಈಶ್ವರಿಯ ಹೆಸರಿಟ್ಟು, ಲಿಂಬಾವಳಿ ಯೋಗ್ಯರಲ್ಲ ಸಂದೇಶ ನೀಡಿದ್ದರು. ಲಿಂಬಾವಳಿ ಪಕ್ಷದ ರಾಷ್ಟ್ರೀಯ ಗಡ್ಕರಿಯನ್ನು ಭೇಟಿಯಾಗಿ ಬಂದರೂ ಏನೂ ಜನವಾಗಲಿಲ್ಲ. 'ನೀವು ಮಾಡುತ್ತಿರುವ ಕೆಲಸ ಮುಂದುವರೆಸಿ' ಎಂಬ ಸೂಚನೆಯಷ್ಟೇ ಗಡ್ಕರಿಯಿಂದ

ನಡುವೆ, ಮೈಸೂರಿನ ಮಾಜಿ ಸಂಸದ ಶಂಕರ್ ಹೆಸರು ಕೂಡ ಕೇಳಿಬಂದಿತ್ತು. ಆದರೆ ನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಸಂಸದ ಪ್ರಹ್ಲಾದ್ ಜೋಷಿಗೆ ಅನಂತು ಬೆಂಬಲ ದಾಗಿಯೂ ಭರವಸೆ ನೀಡಿದ್ದರು. ರೆಡ್ಡಿಗಳ ಬಣ ಅವರಿಗೆ 'ಎಸ್' ಎಂದಿತ್ತು, ಕೊನೆಗೆ ಜೋಷಿಗೆ ಅನಂತು ಟೋಪಿ ಹಾಕಿದ್ದರು.


ನ್ನು ಶಾಸಕ ಸಿ.ಟಿ. ರವಿ "ಅಧ್ಯಕ್ಷ ಸ್ಥಾನವನ್ನು ಗಿರಿ ಒಕ್ಕಲಿಗರಿಗೇ ಕೊಡಬೇಕು. ಬಿಜೆಪಿಯಲ್ಲಿ ಮೀರಿಸುವ ಒಕ್ಕಲಿಗ ನಾಯಕನಿಲ್ಲ" ಎಂದು ಂದು ಈ ಹುದ್ದೆಗೆ ಲಾಬಿ ನಡೆಸಿದ್ದ. ಮೈಸೂರಿನಲ್ಲಿ , ಬೆಂಗಳೂರಿನಲ್ಲಿ ಪಾರ್ಟಿ ಎಲ್ಲ ಮಾಡಿ, ಪಕ್ಷದ ನ್ನು ಬುಟ್ಟಿಗೆ ಹಾಕಿಕೊಳ್ಳಲು ರವಿ ಯತ್ನಿಸಿದ್ದ. ಅಲ್ಲ, ಬೆಂಗಳೂರಿನ ಒಕ್ಕಲಿಗ ಶಾಸಕರು ಸಚಿವ ್ ನೇತೃತ್ವದಲ್ಲಿ ಒಗ್ಗಟ್ಟಾಗಿ ರವಿಯನ್ನು ಸಿದ್ದರು. ಆದರೆ ಅದೆಲ್ಲದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಪಕ್ಷ ಸಂಘಟನೆಗಿಂತ ಕೂಗುಮಾರನಾಗಿ ಚೆಡ್ಡಿಗಳ ವಕ್ತಾರನ ಕೆಲಸವೇ ರವಿಗೆ ಸೂಕ್ತ ಎಂದು ವರಿಷ್ಠರು ತೀರ್ಮಾನಿಸಿದರು.

ಈ ನಡುವೆ, ಶೋಭಾ ಕರಂದ್ಲಾಜೆ ಕೂಡ ಆರ್‌ಎಸ್‌ಎಸ್ ಕಚೇರಿ, ದೆಹಲಿಯ ವರಿಷ್ಠರ ಮನೆಗಳನ್ನೆಲ್ಲಾ ಸುತ್ತಿ ಬಂದಿದ್ದರು. ನಾನ್ಯಾಕೆ ಅಧ್ಯಕ್ಷೆಯಾಗಬಾರದು ಎಂಬ ಆಕೆಯ ಪ್ರಶ್ನೆಗೆ ವರಿಷ್ಠರು ನೇರವಾಗಿ ಉತ್ತರಿಸಿರಲಿಲ್ಲ. ಆಕೆ ಸಚಿವೆಯಾದಾಗಲೂ ಪಕ್ಷದ ದೊಡ್ಡ ಗುಂಪೊಂದು ಬಿಟ್ಟಿಲ್ಲ, ಇನ್ನು ಅಧ್ಯಕ್ಷಗಿರಿ ದೂರದ ಮಾತು ಎಂದು ಗೊಣಗಿ ಆಕೆಯ ಪ್ರಯತ್ನವನ್ನು ಆರಂಭದಲ್ಲಿಯೇ ಚಿವುಟಿ ಹಾಕಿದ್ದರು.

ತೀರ್ಥಹಳ್ಳಿಯ ನಾಯಕ ಆರಗ ಜ್ಞಾನೇಂದ್ರ ಈ ಪಟ್ಟಕ್ಕೆ ಸೂಕ್ತ ಎಂದು ಯಡ್ಡಿ ಗ್ಯಾಂಗ್ ಅವರ ಹೆಸರು ತೇಲಿ ಬಿಟ್ಟಿತ್ತು. ಆರ್‌ಎಸ್‌ಎಸ್ ನಾಯಕರೂ, ಮುಖ್ಯಮಂತ್ರಿ ಯಡ್ಡಿ ಕೂಡ ಜ್ಞಾನೇಂದ್ರರ ನೇಮಕಕ್ಕೆ ಒಲವು ವ್ಯಕ್ತಪಡಿಸಿದ್ದಾರೆ ಎಂದೇ ಹೇಳಲಾಗುತ್ತಿತ್ತು. ಉಪದ್ರ ಕೊಡದ ತಮ್ಮವರು ಅಧ್ಯಕ್ಷರಾಗಿದ್ದರೆ ಒಳ್ಳೆಯದು ಎಂದು ಯಡ್ಡಿ ಯೋಚಿಸಿದ್ದರು. ಹೀಗಾಗಿ ಶಿವಮೊಗ್ಗದೊಂದಿಗೆ ಸಂಬಂಧ ಹೊಂದಿರುವ ಆರ್‌ಎಸ್‌ಎಸ್ ನಾಯಕರಿಗೆಲ್ಲಾ ಜ್ಞಾನೇಂದ್ರರ ಹೆಸರನ್ನೇ ಸೂಚಿಸುವಂತೆ ಸಲಹೆ ನೀಡಿದ್ದರು. ಸಂಘಪರಿವಾರದ ನಾಯಕರು ಶಿವಮೊಗ್ಗದವರಿಗೇ ಅಧ್ಯಕ್ಷ ಪಟ್ಟವನ್ನೇನೋ ನೀಡಿದ್ದಾರೆ. ಆದರೆ ಯಡ್ಡಿ ಹೇಳಿದವರಿಗೆ ಅಲ್ಲ!

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಹೆಸರೇ ಕೇಳಿರದ ಗಡ್ಕರಿಯನ್ನು ತಂದು ಕೂರಿಸಿದಂತೆ ಆರ್‌ಎಸ್‌ಎಸ್ ಇಲ್ಲೂ ಯಾರನ್ನೋ ಅಧ್ಯಕ್ಷರನ್ನಾಗಿ ನೇಮಕ ಮಾಡಬಹುದು ಎಂದೇ ಪಕ್ಷದ ಕೆಲ ನಾಯಕರು ನಿರೀಕ್ಷಿಸುತ್ತಿದ್ದರು. ಹೀಗಾಗಿ ನಾವೇಕೆ ತಲೆಕೆಡಿಸಿಕೊಳ್ಳಬೇಕೆಂದು ಸುಮ್ಮನಿದ್ದರು. ಆದರೆ ಆರ್‌ಎಸ್‌ಎಸ್ ಹಳೆಯ ನಾಯಕನನ್ನು ಕರೆತಂದು ಯಡ್ಡಿಗೆ ಮೂಗುದಾರ ಹಾಕಲು ಹೊರಟಿದೆ.

ಈಶ್ವರಪ್ಪ ಸಂಘಪರಿವಾರದ ನೇಮಕ ಎಂಬುದರಲ್ಲಿ ಅನುಮಾನವೇ ಇಲ್ಲ. ತಮ್ಮದು ಪ್ರಜಾತಾಂತ್ರಿಕ ವ್ಯವಸ್ಥೆ ಹೊಂದಿರುವ ಪಕ್ಷ ಎಂದು ಕೊಚ್ಚಿಕೊಳ್ಳುವ ಬಿಜೆಪಿ ನಾಯಕರಿಗೆ ಈ ದುರ್ಗತಿ ಬರಬಾರದಿತ್ತು!



ಪ್ರಸಿದ್ಧ ಕಮ್ಯೂನಿಸ್ಟ್ ನಾಯಕ, ಪಶ್ಚಿಮ ಬಂಗಾಳವನ್ನು ಸತತ ಇಪ್ಪತ್ತಮೂರು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಆಳಿ ವಿಶ್ವದಾಖಲೆ ನಿರ್ಮಿಸಿದ ಜ್ಯೋತಿ ಬಸು ತಮ್ಮ ತೊಂಭತ್ತೈದನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಎಡ ಪಕ್ಷಗಳು ಒತ್ತಟ್ಟಿಗಿರಲಿ, ದೇವೇ ಗೌಡರಿಂದ ಮೊದಲ್ಗೊಂಡು ದೇಶದ ದೊಡ್ಡ ದೊಡ್ಡ ಉದ್ಯಮಪತಿಗಳ ತನಕ ಎಲ್ಲರೂ ಜ್ಯೋತಿ ಬಸು ಅವರ ಸಾಧನೆಗಳನ್ನು ಕೊಂಡಾಡುತ್ತಿದ್ದಾರೆ. ಕೊನೆಗೆ ವಿಜಯ ಕರ್ನಾಟಕದಂಥ ವಿಜಯ ಕರ್ನಾಟಕ ಕೂಡಾ ಜ್ಯೋತಿ ಬಸು ನಿಧನದ ಬಗ್ಗೆ ಒಂದು ಪುಟವನ್ನು ಮೀಸಲಿಡಲೇ ಬೇಕಾಯಿತು. ಇಷ್ಟಾದರೂ ಜ್ಯೋತಿ ಬಸುರವರ 23 ವರ್ಷಗಳ ಮುಖ್ಯಮಂತ್ರಿತ್ವವನ್ನು ವಿಶ್ಲೇಷಣೆ ಮಾಡಿ ಅದರಲ್ಲಿನ ಮುಖ್ಯಾಂಶಗಳು ಮತ್ತು ಅದಕ್ಕೆ ಬಸುರವರ ಕೊಡುಗೆಗಳನ್ನು ಏನೆಂಬುದು ಮಾತ್ರ ಯಾವ ಪತ್ರಿಕೆಗಳಲ್ಲೂ ಕಾಣಸಿಗಲಿಲ್ಲ.

ದೊಡ್ಡ ಜನನಾಯಕನೊಬ್ಬ ಮರಣ ಹೊಂದಿದಾಗ ಇಂತಹ ಹೊಗಳಿಕೆಗಳು, ಗುಣಗಾನಗಳು ಸರ್ವೇಸಾಮಾನ್ಯ. ಕೆಲವು ತಿಂಗಳುಗಳ ಹಿಂದೆ ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿ ಹೆಲಿಕಾಪ್ಟರ್ ದುರಂತದಲ್ಲಿ ಅಸುನೀಗಿದಾಗಲೂ ಮಾಧ್ಯಮಗಳು, ರಾಜಕೀಯ ನಾಯಕರು ಪಕ್ಷಬೇಧ ಮರೆತು ಅವರನ್ನು ಕೊಂಡಾಡಿದ್ದರು. ಈಗ ಜ್ಯೋತಿ ಬಸು ಅವರ ವಿಚಾರದಲ್ಲೂ ಅದೇ ಆಗುತ್ತಿದೆ. ಅದರರ್ಥ ಜ್ಯೋತಿ ಬಸು ಮತ್ತು ರಾಜಶೇಖರ ರೆಡ್ಡಿ ಇಬ್ಬರು ಒಂದೇ ಏನಲ್ಲ, ಹಿರಿಯ ರಾಜಕಾರಣಿಯ ಸಾವು ವಿಷಾದ ಹುಟ್ಟಿಸಬೇಕು. ಆದರೆ ಪ್ರಜ್ಞಾವಂತ ಪತ್ರಿಕೋದ್ಯಮ ಅಲ್ಲಿಗೇ ನಿಲ್ಲಬಾರದು. ನಿಷ್ಪಕ್ಷಪಾತ ವಿಶ್ಲೇಷಣೆಯನ್ನೂ ಮಾಡಬೇಕು.

ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಓದುತ್ತಿರುವಾಗಲೇ ಹೆರಾಲ್ಡ್ ಲಾಸ್ಕಿಯಂತ ರಾಜಕೀಯ ನಾಯಕರ ಭಾಷಣ ಗಳಿಂದ ಪ್ರಭಾವಿತರಾದ ಬಸು 1930ರ ದಶಕದಲ್ಲೇ ಇಂಗ್ಲೆಂಡ್‌ನ ಕಮ್ಯೂನಿಸ್ಟ್ ಪಕ್ಷದ ಸದಸ್ಯರೂ ಆಗಿ ಅಲ್ಲೇ ತಮ್ಮ ರಾಜಕೀಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಕಮ್ಯೂನಿಸ್ಟ್ ಸಿದ್ಧಾಂತಿ, ತತ್ವಶಾಸ್ತ್ರಜ್ಞ ಹಾಗೂ ಪ್ರಸಿದ್ಧ ಬರಹಗಾರರಾಗಿದ್ದ ರಜನಿ ಪಾಮ್ ದತ್ ಅವರಿಂದ ಬಹಳಷ್ಟು ಪ್ರಭಾವಿತರಾಗಿ ತಮ್ಮ ಕಮ್ಯೂನಿಸ್ಟ್ ತಿಳುವಳಿಕೆಯನ್ನು ಹೆಚ್ಚಿಸಿಕೊಂಡು ಕೊನೆಗೆ ಬ್ಯಾರಿಸ್ಟರ್ ಪದವಿ ಮುಗಿಸಿ 1940 ರಲ್ಲಿ ಭಾರತಕ್ಕೆ ಮರಳಿದರು.

ಅಷ್ಟುಹೊತ್ತಿಗಾಗಲೇ ಭಾರತದಲ್ಲೂ ಭಾರತ ಕಮ್ಯೂನಿಸ್ಟ್ ಪಕ್ಷ (ಸಿಪಿಐ) ಹುಟ್ಟಿಕೊಂಡು ಅನೇಕ ಚಾರಿತ್ರಿಕ ಕಾರ್ಮಿಕ ಹೋರಾಟಗಳನ್ನು ಸಂಘಟಿಸಿತ್ತು. ಜ್ಯೋತಿ ಬಸು ಇಂಗ್ಲೆಂಡಿನಿಂದ ಬಂದವರೇ ಸಿಪಿಐ ನಾಯಕರನ್ನು ಸಂಪರ್ಕಿಸಿ ಪೂರ್ಣಾವಧಿ ಕಾರ್ಯಕರ್ತರಾಗಿ ಪಕ್ಷ ಸೇರಿಕೊಂಡರು. 1944ರಿಂದೀಚೆಗೆ ಸಿಪಿಐ ನೇತೃತ್ವದ ಕಾರ್ಮಿಕ ಸಂಘಟನೆಗಳನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊತ್ತುಕೊಂಡರು. 1946-47ರಲ್ಲಿ ನಡೆದ ಚಾರಿತ್ರಿಕ ತೇಬಾಗ ಕಾರ್ಮಿಕ ಹೋರಾಟದಲ್ಲಿ ಜ್ಯೋತಿ ಬಸು ಅವರು ನಿರ್ವಹಿಸಿದ ಪಾತ್ರ ನಿಜಕ್ಕೂ ಶ್ಲಾಘನೀಯವಾದದ್ದು. 1951ರಲ್ಲಿ ಅವರು ಸಿಪಿಐನ ಕೇಂದ್ರ ಸಮಿತಿಗೂ ಆಯ್ಕೆಯಾದರು. ವಾಸ್ತವದಲ್ಲಿ ಜ್ಯೋತಿ ಬಸು ಅವರ ರಾಜಕೀಯ ಅಡ್ಡ ದಾರಿ ಹಿಡಿದಿದ್ದೇ ಅಲ್ಲಿಂದಾಚೆಗೆ. ಅಲ್ಲಿಯತನಕ ಕ್ರಾಂತಿಕಾರಿಯಾಗಿದ್ದ ಜ್ಯೋತಿ ಬಸು ಸಂಸದೀಯ ರಾಜಕಾರಣಕ್ಕೆ ಬಿದ್ದು ಸುಧಾರಣಾವಾದಿ ಬಸುವಾಗಿ ಮಾರ್ಪಡುತ್ತಿದ್ದ ಸಂಕ್ರಮಣ ಕಾಲಘಟ್ಟವದು. ಅದು ಕೇವಲ ಜ್ಯೋತಿ ಬಸು ಅವರ ಮಿತಿಯಾಗಿರದೆ ಇಡೀ ಸಿಪಿಐ ಪಕ್ಷದ ನಾಯಕತ್ವದ ಪ್ರಧಾನ ಕೊರತೆಯಾಗಿತ್ತು.

ಆ ಕಾಲಘಟ್ಟದಲ್ಲಿ ಇಪ್ಪತ್ತನೇ ಶತಮಾನ ಕಂಡ ಅತ್ಯಂತ ಬೃಹತ್ ಜನಬಂಡಾಯಗಳಲ್ಲಿ ಒಂದಾದ ತೆಲಂಗಾಣ ಸಶಸ್ತ್ರ ಬಂಡಾಯ ಸಾಗುತ್ತಿತ್ತು. 1946ರಿಂದ 1952ರ ತನಕ ನಡೆದ ಈ ಬಂಡಾಯದಲ್ಲಿ ಸಿಪಿಐ ಪಕ್ಷ ಸುಮಾರು ಮೂರು ಸಾವಿರ ಹಳ್ಳಿಗಳನ್ನು ಭೂಮಾಲಿಕರಿಂದ ವಿಮೋಚನೆಗೊಳಿಸಿತ್ತು; ಲಕ್ಷಾಂತರ ಎಕರೆ ಭೂಮಿಯನ್ನು ಬಡ ರೈತಕೂಲಿಗಳಿಗೆ ಹಂಚಿತ್ತು; ಆ ಹಳ್ಳಿಗಳಲ್ಲಿ ರೈತಕೂಲಿಗಳೇ ಆಡಳಿತ ನಡೆಸುವಂಥ ಸ್ಥಳೀಯ ಪರ್ಯಾಯ ಸರ್ಕಾರಗಳನ್ನು ರಚಿಸಿತ್ತು. ಈ ಹೋರಾಟದ ತೀವ್ರತೆ ಎಷ್ಟರಮಟ್ಟಿಗೆ ಇತ್ತೆಂದರೆ ಜವಾಹರಲಾಲ್ ನೆಹರೂ ಮತ್ತು ಸರ್ದಾರ ವಲ್ಲಭಬಾಯಿ ಪಟೇಲ್ ಹೈದರಾಬಾದ್ ಪ್ರಾಂತ್ಯವನ್ನು ಭಾರತ ಒಕ್ಕೂಟದೊಳಕ್ಕೆ ಬಲವಂತವಾಗಿ ಸೇರಿಸಿಕೊಳ್ಳುವ ನೆಪದಲ್ಲಿ ಈ ಜನಬಂಡಾಯವನ್ನು ಸದೆಬಡಿಯುವುದಕ್ಕೆ ಭಾರತೀಯ ಸೈನ್ಯವನ್ನು ಕಳಿಸಿಕೊಟ್ಟಿದ್ದರು. ಈ ಸೇನೆ ಸತತ ಐದಾರು ವರ್ಷಗಳ ಕಾಲ ತೆಲಂಗಾಣದ ಗ್ರಾಮೀಣ ಪ್ರದೇಶದಲ್ಲಿ ಚಳವಳಿಯನ್ನು ಮುನ್ನಡೆಸುತ್ತಿದ್ದ ಸಿಪಿಐ ಕಾರ್ಯಕರ್ತರನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲುತ್ತಿದ್ದರೂ, ಸಾವಿರಾರು ಕಾರ್ಯಕರ್ತರನ್ನು ಬಂಧಿಸಿ ಮೈಮೇಲೆ ಸುತ್ತಿಗೆ - ಕುಡುಗೋಲಿರುವ ಕಮ್ಯೂನಿಸ್ಟ್ ಲಾಂಛನವನ್ನು ಚಾಕುವಿನಿಂದ ಕೆತ್ತಿ ಕೊಲ್ಲುತ್ತಿದ್ದರೂ ಆ ಹೋರಾಟವನ್ನು ಮಾತ್ರ ಸಂಪೂರ್ಣವಾಗಿ ಸದೆಬಡಿಯಲಾಗಲಿಲ್ಲ.

ವಾಸ್ತವದಲ್ಲಿ, ತೆಲಂಗಾಣ ಹೋರಾಟ ಭಾರತದ ಕ್ರಾಂತಿಗೆ ಹೊಸ ದಿಕ್ಕನ್ನು ತೋರಿಸಿತ್ತು. ಆದರೆ ತಲೆಯೊಳಗೆ ಸೋವಿಯತ್ ಹುಳವನ್ನು ಬಿಟ್ಟುಕೊಂಡಿದ್ದ ಕೇಂದ್ರ ಸಮಿತಿ ಅದಕ್ಕೆ ಒಪ್ಪಲಿಲ್ಲ. ಅಂತಿಮವಾಗಿ ಶಸ್ತ್ರಾಸ್ತ್ರ ಕೆಳಗಿಡುವಂತೆ ಕೇಂದ್ರ ಸಮಿತಿ ಹೋರಾಟಗಾರರಿಗೆ ಆದೇಶ ಕೊಟ್ಟಿತು. ಅದಕ್ಕೆ ಮನ್ನಣೆ ಕೊಟ್ಟ ತೆಲಂಗಾಣ ಹೋರಾಟಗಾರರು ಶಸ್ತ್ರಾಸ್ತ್ರ ಕೆಳಗಿಡುತ್ತಿದ್ದಂತೆಯೇ ಭಾರತೀಯ ಸೈನ್ಯ ಅವರ ಮೇಲೆರಗಿ ಇಡೀ ಹೋರಾಟವನ್ನು ಹೇಳ ಹೆಸರಿಲ್ಲದಂತೆ ಹೊಸಕಿಹಾಕಿತು. ನಂತರ 1952ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಗಳು ನಡೆದಾಗ ಸಿಪಿಐ ಪಕ್ಷವೂ ಅದರಲ್ಲಿ ಸ್ಪರ್ಧಿಸುವುದರೊಂದಿಗೆ ಸಶಸ್ತ್ರ ಹೋರಾಟದ ಮೂಲಕ ಕ್ರಾಂತಿ ಸಂಘಟಿಸಿ ರಾಜ್ಯಾಧಿಕಾರ ಪಡೆಯಬೇಕೆಂಬ ಸಿದ್ಧಾಂತವನ್ನು ಹೊಂದಿದ್ದ ಸಿಪಿಐ ಸಂಸದೀಯ ಮಾರ್ಗ ಹಿಡಿಯಿತು. ಇಂಥ ಚಾರಿತ್ರಿಕ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಅದರ ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಜ್ಯೋತಿ ಬಸು ಅವರ ಪಾತ್ರವೂ ವಿಶೇಷವಾಗಿತ್ತು.


ನಂತರ ಸಿಪಿಐನಲ್ಲೇ ಇದ್ದ ಹಲವಾರು ಕ್ರಾಂತಿಕಾರಿಗಳು ಭ್ರಮನಿರಸನಗೊಂಡು ಪಕ್ಷದ ನಾಯಕತ್ವದ ವಿರುದ್ಧ ಬಂಡೆದ್ದು 1964ರಲ್ಲಿ ಹೊರನಡೆದರು. ಅವರಲ್ಲಿ ಜ್ಯೋತಿ ಬಸು ಕೂಡ ಒಬ್ಬರು. ಈ ಬಂಡುಕೋರರು ಜ್ಯೋತಿ ಬಸುರಂಥ ಹಿರಿಯ ನಾಯಕರ ನೇತೃತ್ವದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯ (ಮಾರ್ಕ್ಸಿಸ್ಟ್) -ಸಿಪಿಐ-ಎಂ- ಎಂಬ ಹೊಸ ಪಕ್ಷವನ್ನು ರಚಿಸಿಕೊಂಡರು. ಪ್ರಾರಂಭದಲ್ಲಿ ಸಿಪಿಎಂ ಅತ್ಯಂತ ತೀಕ್ಷ್ಣವಾದ ಕ್ರಾಂತಿಕಾರಿ ಪದಪುಂಜಗಳನ್ನು ಬಳಸುತ್ತಾ ಭಾರತದ ಕ್ರಾಂತಿಯನ್ನು ಮುನ್ನಡೆಸಬಲ್ಲ ಏಕೈಕ ಕಮ್ಯೂನಿಸ್ಟ್ ಪಕ್ಷ ಎಂಬಂತೆ ಬಿಂಬಿತವಾಗಿದ್ದು ನಿಜ. ಈ ಕಾರಣಕ್ಕಾಗಿಯೇ ಸಿಪಿಐನಿಂದ ಭ್ರಮನಿರಸನಗೊಂಡಿದ್ದ ಸಾವಿರಾರು ಕಾರ್ಯಕರ್ತರು, ನಾಯಕರು ಹೊಸದಾಗಿ ರಚನೆಗೊಂಡ ಸಿಪಿಎಂ ಹಿಂದೆ ಸಾಗರೋಪಾದಿಯಲ್ಲಿ ಅಣಿನೆರೆದದ್ದೂ ನಿಜ. ಆದರೆ, ಸಿಪಿಎಂ ಕೂಡ ಸಿಪಿಐಗಿಂತ ಮೂಲಭೂತವಾಗಿ ಭಿನ್ನವಾಗಿಲ್ಲ ಎಂಬುದು ಅರ್ಥವಾಗುವುದಕ್ಕೆ ಬಹಳ ಕಾಲ ಬೇಕಾಗಲಿಲ್ಲ.

1967ರಲ್ಲಿ ಸಿಪಿಎಂ ಒಳಗಡೆಯೇ ಇದ್ದ ಇನ್ನೊಂದು ಕ್ರಾಂತಿಕಾರಿ ಗುಂಪು ಚಾರು ಮುಜುಂದಾರ್ ನೇತೃತ್ವದಲ್ಲಿ ಪಕ್ಷದ ನಾಯಕತ್ವದ ವಿರುದ್ಧ ಬಂಡೆದ್ದಿತು. ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಪಕ್ಷದ ಕಾರ್ಯದರ್ಶಿಯಾಗಿದ್ದ ಚಾರು ಮುಜುಂದಾರ್ ನೇತೃತ್ವದಲ್ಲಿ ನಕ್ಸಲ್ಬರಿ ಎಂಬ ಹಳ್ಳಿಯಲ್ಲಿ ಸಿಡಿದ ಹೋರಾಟ ಕೆಲವೇ ಸಮಯದಲ್ಲಿ ಅತಿದೊಡ್ಡ ಸಶಸ್ತ್ರ ಜನಬಂಡಾಯವಾಗಿ ಹೊರಹೊಮ್ಮಿತು. ಚಾರು ನೇತೃತ್ವದ ಸಿಪಿಎಂ ಕಾರ್ಯಕರ್ತರು ಭೂಹೀನ ರೈತರು, ಕೂಲಿಕಾರ್ಮಿಕರೊಡಗೂಡಿ ಶಸ್ತ್ರಸಜ್ಜಿತವಾಗಿ ಭೂಮಾಲಿಕರನ್ನು ಓಡಿಸುವುದು, ಅವರ ಭೂಮಿಯಲ್ಲಿ ಕೆಂಪುಬಾವುಟ ನೆಟ್ಟು ಭೂಹೀನರಿಗೆ ಹಂಚುವುದು ನಿತ್ಯದ ಮಾತಾಗಿತ್ತು. ಕಾಡ್ಗಿಚ್ಚಿನಂತೆ ಹಬ್ಬುತ್ತಿದ್ದ ಈ ಹೋರಾಟ ಕೊಲ್ಕತ್ತಾ ನಗರದ ವಿದ್ಯಾರ್ಥಿ ಬುದ್ಧಿಜೀವಿಗಳನ್ನೂ ಅತೀವವಾಗಿ ಪ್ರಭಾವಿಸಿತ್ತು. ಸಿಪಿಎಂ ನಾಯಕತ್ವ ಚಾರು ಸಮೇತವಾಗಿ ಈ ಹೋರಾಟಕ್ಕೆ ನಾಯಕತ್ವ ನೀಡಿದ್ದ ಎಲ್ಲಾ ನಾಯಕರನ್ನು ಪಕ್ಷದಿಂದ ಉಚ್ಚಾಟಿಸಿತು. ಪಕ್ಷದಿಂದ ಹೊರಬಂದ ನಾಯಕರೆಲ್ಲರೂ ಚಾರು ನೇತೃತ್ವದಲ್ಲಿ 1969ರಲ್ಲಿ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯ (ಮಾರ್ಕ್ಸಿಸ್ಟ್-ಲೆನಿನಿಸ್ಟ್) ಎಂಬ ಹೊಸ ಪಕ್ಷ ರಚಿಸಿಕೊಳ್ಳುವುದರೊಂದಿಗೆ ಸಿಪಿಎಂ ಪಕ್ಷವೂ ಇಬ್ಭಾಗವಾಯಿತು. ಈ ಪಕ್ಷವನ್ನೇ ಆಗ ನಕ್ಸಲೈಟರೆಂದೂ ಈಗ ಮಾವೋವಾದಿಗಳೆಂದೂ ಕರೆಯಲಾಗುತ್ತದೆ.

ವಾಸ್ತವದಲ್ಲಿ ನಕ್ಸಲ್ಬರಿ ಹೋರಾಟ ಜ್ಯೋತಿ ಬಸುಗೂ ಒಂದು ಪರೀಕ್ಷಾ ಕಾಲವಾಗಿತ್ತು. ಅಷ್ಟುಹೊತ್ತಿಗಾಗಲೇ ಸಿಪಿಎಂ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳಲ್ಲಿ ಗಣನೀಯ ಸ್ಥಾನಗಳನ್ನು ಗೆದ್ದು ರಾಜ್ಯದಲ್ಲಿ ಬೆಂಗಾಲ್ ಕಾಂಗ್ರೆಸ್-ಸಿಪಿಎಂ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಜ್ಯೋತಿ ಬಸು ಅವರೇ ರಾಜ್ಯ ಗೃಹಮಂತ್ರಿಗಳಾಗಿದ್ದರು. ಚಾರು ನೇತೃತ್ವದಲ್ಲಿ ಭುಗಿಲೆದ್ದ ರೈತಕೂಲಿಗಳ ಈ ಸಶಸ್ತ್ರ

▶▶ 15


ಉತ್ತರಕನ್ನಡ: ಅಡ್ನಾಡಿ ಮಂತ್ರಿ ಅಸ್ನೋಟಿಕರ್ ಮಾವನ ಆಲಾಪ!


ಬಾಂದೇಕರ್

ಇದೊಂದು ತಮಾಷೆ!

ರಾಜಕೀಯ ಮತ್ತು ಸಾಂಸಾರಿಕ ಬದುಕಿನಲ್ಲಿ ಗೊಂದಲಗೊಂಡಿರುವ ಪುಢಾರಿಯೊಬ್ಬ ಹತಾಶನಾದಾಗ ಅದೆಂತಹ ಎಡವಟ್ಟಾಗುತ್ತದೆ ಎಂಬುದಕ್ಕೆ ಗೋವಾದ ಮಾಜಿ ಸಚಿವ ಸಂಜಯ್ ಬಾಂದೇಕರ್ ಕಾರವಾರಕ್ಕೆ ಬಂದು ಬಾಯಿಗೆ ಬಂದಂತೆ ಒದರಿಹೋಗಿರುವುದು ನಿದರ್ಶನದಂತಿದೆ. ಈ ಬಾಂದೇಕರ್ ಗೋವಾದಲ್ಲಿ 'ಕಬು' ಸೇರಿರುವ ರಾಜಕಾರಣಿ. ಅಲ್ಲಾತನ ಮಾತುಗಳಿಗೆ ಕಿಮ್ಮತ್ತಿಲ್ಲ. ಗಡಿಯಾಚೆಯ ಕನ್ನಡ ನೆಲ ಕಾರವಾರದ ಶಾಸಕ ಕಂ ಕರ್ನಾಟಕದ ಮಂತ್ರಿ ಆನಂದ ಅಸ್ನೋಟಿಕರ್‌ಗೆ ಹೆಣ್ಣು ಕೊಟ್ಟ ಮಾವನೀತ. ಹೀಗಾಗಿ ಈ ಬಫೂನ್‌ನ ಅಸಂಬದ್ಧ ಆಲಾಪ ಜಿಲ್ಲೆಯನ್ನೊಂದಿಷ್ಟು ಡಿಸ್ಟರ್ಬ್ ಮಾಡಿಬಿಟ್ಟಿದೆ!

ಕಾರವಾರದ 'ಉಸುಕು ರಾಜಕೀಯ' ನೆಪಮಾಡಿಕೊಂಡು ಬಾಂದೇಕರ್ ಹುಚ್ಚುಚ್ಚಾಗಿ ಹಾರಾಡಿದ್ದಾರೆ. ಇದು 'ನಾಲಾಯಕ್ ಮಿನಿಸ್ಟರ್' ಎಂದು ಕಾರವಾರದಲ್ಲಿ ಉಗುಳಿಸಿಕೊಳ್ಳುತ್ತಿರುವ ಅಳಿಯ ಆನಂದ್ ಅಸ್ನೋಟಿಕರ್‌ಗೆ ಆಗುತ್ತಿರುವ ಡ್ಯಾಮೇಜ್ ಕಂಟ್ರೋಲ್ ಕಿತಾಪತಿ ಎಂದು ಕೆಲವರು ವ್ಯಾಖ್ಯಾನಿಸುತ್ತಿದ್ದಾರೆ. ಆದರೆ ಇನ್ನೊಂದು ಅಭಿಪ್ರಾಯವೇ ಬೇರೆ. ಅಳಿಯನ 'ರಂಗೀಲಾ'ದಿಂದ ರಾಂಗ್ ಆಗಿರುವ ಬಾಂದೇಕರ್ ಆತನನ್ನು ಟ್ರ್ಯಾಕಿಗೆ ತರಲು ಈ ತಂತ್ರಗಾರಿಕೆ ಮಾಡಿದ್ದಾರಂತೆ. ಅದೇನೇ ಇರಲಿ ಮಾವ ಬಾಂದೇಕರ್ ಯಾವುದೋ 'ನಿಗೂಢ ಉದ್ದೇಶ' ವಿಟ್ಟುಕೊಂಡು "ಉಸುಕು ಸಮಸ್ಯೆ ಪರಿಹರಿಸಲಾಗದ ಅಸಮರ್ಥ ಆನಂದ್ ಅಸ್ನೋಟಿಕರ್ ಮಂತ್ರಿಗಿರಿಗೆ ರಾಜೀನಾಮೆ ಬಿಸಾಕಲಿ..." ಎಂದು ಬಡಬಡಿಸಿದ್ದು ಅಳಿಯನ ಮಾನ ಹರಾಜಾಕಿರುವುದಂತೂ ಖರೆ.


ಜನಾರ್ದನ ರೆಡ್ಡಿ

ಉಸುಕು ಉಸಾಬರಿ

ಕಾರವಾರದ ಜೀವ ನದಿ ಕಾಳಿಯಿಂದ ತೆಗೆದ ಸಾವಿರಾರು ಲಾರಿ ಲೋಡ್ ಮರಳು ಪ್ರತಿದಿನ ಪಕ್ಕದ ಗೋವಾಕ್ಕೆ ಲಾಗಾಯ್ತಿನಿಂದಲೂ ಸಾಗಾಟವಾಗುತ್ತಿದೆ. ಗೋವಾದ ಅಭಿವೃದ್ಧಿ ನಿಂತಿರುವುದೇ ಕಾರವಾರದ ಮರಳಿನ ಮೇಲೆ. ಕಾರವಾರದಲ್ಲಿ ಈ ಮರಳು ದಂಧೆಯ ದೊಡ್ಡದೊಂದು ಮಾಫಿಯಾ ಗ್ಯಾಂಗ್ ಇದೆ. ಇದರಲ್ಲಿ ಜೂನಿಯರ್ ಮಂತ್ರಿ ಆನಂದ್ ಅಸ್ನೋಟಿಕರ್ ಎಂಬ ಗೂಂಡಾಗರ್ದಿ ಪುಂಡನ ಹಿಂಬಾಲಕ-ಮುಂಬಾಲಕರೇ ಹೆಚ್ಚು. ಬಳ್ಳಾರಿಯ ಮ್ಯಾಂಗನೀಸ್ ಅದಿರನ್ನು ವಿದೇಶಕ್ಕೆ ಹಡಗಿನಲ್ಲಿ ಕಳಿಸುವ 'ಎಕ್ಸ್‌ಪೋರ್ಟರ್' ಆನಂದ್ ಅಸ್ನೋಟಿಕರ್ ಬೇನಾಮಿ ಉಸುಕು ದಂಧೆದಾರನೂ ಹೌದು. ಮಾಲ್ಡೀವ್ಸ್‌ಗೆ ಹಡಗಿನಲ್ಲಿ ಕೋಟ್ಯಂತರ ರೂ. ಉಸುಕು ಕಳ್ಳ ಸಾಗಾಣಿಕೆಗೂ ಆನಂದ್ ಬಳಗ ಸ್ಕೆಚ್ ಹಾಕಿಕೊಂಡಿತ್ತು. ಆದರೆ ಸ್ಥಳೀಯ ವಿರೋಧ, ಉಸುಕು ಸಾಗಾಣಿಕೆ ನಿಷೇಧದಿಂದ ಇದು ಸಾಧ್ಯವಾಗಲಿಲ್ಲ.

ಬರೋಬ್ಬರಿ ಆರು ತಿಂಗಳ ಒಹಿಂದೆ ಯಡ್ಡಿ ಸರ್ಕಾರ ರಾಜ್ಯದ ಹೊರಗೆ ಮರಳು ಸಾಗಿಸದಂತೆ ನಿರ್ಬಂಧ ಹೇರಿತು. ಸಹಜವಾಗೇ ಈ ನಿಷೇಧ ಕಾರವಾರದಿಂದ ಗೋವಾಕ್ಕೆ ಹೋಗುವ ಉಸುಕಿನ ಮೇಲೂ ಬಿತ್ತು. ಅಸ್ನೋಟಿಕರ್‌ನ ಮರಳು ಮಾಫಿಯಾಕ್ಕೆ ದಿಕ್ಕೇ ತೋಚದಂತಾಯಿತು. ಕಂಗಾಲಾದ ಉಸುಕು ವ್ಯವಹಾರಸ್ಥರು ನಿಷೇಧ ತೆಗೆಸುವಂತೆ ಮಂತ್ರಿ ಅಸ್ನೋಟಿಕರ್‌ಗೆ ದುಂಬಾಲು ಬಿದ್ದರು. ಇದು ಆನಂದ್‌ಗೆ ಪ್ರತಿಷ್ಠೆಯ ಪ್ರಶ್ನೆಯೂ ಆಯ್ತು. ಅಸ್ನೋಟಿಕರ್‌ನ ಬಾಲ ಕತ್ತರಿಸಲು ಕಾಯುತ್ತಿದ್ದ ಜಿಲ್ಲಾ ಉಸ್ತುವಾರಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಮರಳು ನಿಷೇಧ ತೆಗೆಯದಂತೆ ಸಿಎಂ ಯಡ್ಡಿಯ ಕಿವಿಯೂದಿದರು.

ಅಸ್ನೋಟಿಕರ್ ಗಾಡ್‌ಫಾದರ್ ರೆಡ್ಡಿ ಬ್ರದರ್ಸ್ ಮೂಲಕ ನಿರ್ಬಂಧ ತೆಗೆಸಲು ತಿಪ್ಪರಲಾಗ ಹಾಕಿದರು. ಊಹುಂ. ಸಿಎಂ ಒಪ್ಪಲಿಲ್ಲ, ಆ ವೇಳೆಗಾಗಲೇ ಯಡ್ಡಿ-ರೆಡ್ಡಿ ಕಿತ್ತಾಟ ಜೋರಾಗಿತ್ತು. ಕಾಗೇರಿ ಯಡ್ಡಿ ಬಳಗದಲ್ಲಿ ಠಳಾಯಿಸಲಾರಂಭಿಸಿದ್ದರು. ಹೀಗಾಗಿ ಸಿಎಂ ಯಡ್ಡಿ ಅಧಿಕಪ್ರಸಂಗಿ ಸಚಿವ ಅಸ್ನೋಟಿಕರ್‌ನ ಹಾರಾಟಕ್ಕೆ ಕಡಿವಾಣ ಹಾಕುವ ಹಠದಿಂದ ಕಾರವಾರದ ಉಸುಕಿನ ಮೇಲಿನ ನಿರ್ಬಂಧ ಹಿಂಪಡೆಯಲು ಸುತರಾಂ ಸಿದ್ದರಾಗಲೇ ಇಲ್ಲ. ಇದು ಆನಂದನ ವರ್ಚಸ್ಸನ್ನು ಕಾರವಾರದಲ್ಲಿ ಮಣ್ಣುಪಾಲು ಮಾಡಿಬಿಟ್ಟಿತು. 'ಕೆಲಸಕ್ಕೆ ಬಾರದ ಮಂತ್ರಿ, ಕಿಮ್ಮತ್ತಿಲ್ಲದ ಎಮ್ಮೆಲ್ಲೆ' ಎಂದೆಲ್ಲ ಕಾರವಾರದ ದಶದಿಕ್ಕುಗಳಲ್ಲಿ ಗುಲ್ಲೆದ್ದಿತು.


ಕಾಗೇರಿ

ಕಾಗೇರಿ ಕಾರಸ್ಥಾನ

ಹಸೀ ಹುಂಬ, ಮುನ್ಸಿಸಿಪಾಲ್ಟಿ ಮೆಂಬರಿಕೆಗೂ ಯೋಗ್ಯನಲ್ಲದ ಬುದ್ಧಿಮತ್ತೆಯ ಅಸ್ನೋಟಿಕರ್ ಈ ಉಸುಕು ಉಸಾಬರಿಯಿಂದ ಕೊತಕೊತನೆ ಕುದಿಯತೊಡಗಿದ. ತನಗಾಗುತ್ತಿರುವ ಮುಖಭಂಗಕ್ಕೆಲ್ಲ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಎಂಬ ಒರಿಜಿನಲ್ ಚೆಡ್ಡಿಯ ಕಿತಾಪತಿಯೇ ಕಾರಣವೆಂದು ಬಹಿರಂಗವಾಗೇ ಬೊಬ್ಬೆ ಹೊಡೆಯತೊಡಗಿದ. ಯಡ್ಡಿ-ರೆಡ್ಡಿಗಳ ಕೊಳಕು ಕದನಕ್ಕೆ ಅಲ್ಪ ವಿರಾಮ ಬಿದ್ದಾಗಂತೂ ಅಸ್ನೋಟಿಕರ್ ಕಾಗೇರಿ ಮೇಲೆ ಮುಗಿಬಿದ್ದು ಬೈದಾಡಿದ. ಶುದ್ಧ ನರಿಬುದ್ಧಿಯ ಬ್ರಾಹ್ಮಣ ಕಾಗೇರಿ ನಿರ್ವಿಕಾರಭಾವ ಪ್ರದರ್ಶಿಸುತ್ತ ಒಳಗೊಳಗೇ ಅಸ್ನೋಟಿಕರ್‌ನ 'ಆಟ' ನಡೆಯದಂತೆ ಕರಾಮತ್ತು ಮಾಡುತ್ತ ಸಾಗಿದರು. ಕಾಗೇರಿಯ ಬೆನ್ನಿಗೆ 'ಕೇಶವ ಕೃಪೆ' ಇದ್ದುದರಿಂದ ಶೂದ್ರ ಅಸ್ನೋಟಿಕರ್‌ಗೆ ಉಸುಕು ಸಾಗಾಟದ ಮೇಲಿನ ನಿಷೇಧ ತೆಗೆಸಲು ಇದುವರೆಗೆ ಸಾಧ್ಯವಾಗಿಲ್ಲ.

ಅಸ್ನೋಟಿಕರ್‌ಗೆ ಆಪತ್ತು

ರಂಗುರಂಗಿನ ಕನಸುಗಳನ್ನು ಕಟ್ಟಿಕೊಂಡು ಬಿಜೆಪಿ ಸೇರಿ ಸಚಿವನಾದ ಆನಂದ್ ಅಸ್ನೋಟಿಕರ್ ಆ ಗರ್ಭಗುಡಿ ಸಂಸ್ಕೃತಿಯ ಪಕ್ಷದಲ್ಲಿ ಅಪ್ಪಟ ಅಸ್ಪೃಶ್ಯನಂತಾಗಿ ಒದ್ದಾಡುತ್ತಿದ್ದಾನೆ. ಈಗಿತ್ತಲಾಗಿ ದೇವಪಿತೃ ಜನಾರ್ಧನ ರೆಡ್ಡಿಯೂ ಈ 'ಸೀಜರಿನ್ ಸಚಿವ'ನ ಹತ್ತಿರ ಸೇರಿಸಿಕೊಳ್ಳುತ್ತಿಲ್ಲ. ಗಣಿ ಗಲಾಟೆಯಲ್ಲಿ ರೆಡ್ಡಿಗಳಿಗೆ ತಾವು ಬಚಾವಾಗುವುದೇ ದೊಡ್ಡ ಸಮಸ್ಯೆಯಾಗಿದೆ. ಹೀಗಾಗಿ ರೆಡ್ಡಿಗಳ ನಂಬಿದ್ದ ಮೊದ್ಮಣಿ ಅಸ್ನೋಟಿಕರ್ ಈಗ ಅಂತರ್‌ಪಿಶಾಚಿಯಂತಾಗಿ ಹೋಗಿದ್ದಾನೆ, ಪಾಪ! ಅಸ್ನೋಟಿಕರ್‌ನ ಮಾತಿಗೆ ಕ್ಯಾಬಿನೆಟ್‌ನಲ್ಲಾಗಲಿ, ಅಧಿಕಾರಿ ವಲಯದಲ್ಲಾಗಲಿ ಮೂರುಕಾಸಿನ ಬೆಲೆಯೂ ಸಿಗುತ್ತಿಲ್ಲ. ಅತ್ತ ಭಿನ್ನಮತೀಯ ಶಾಸಕರೂ ಈತನ ಮುಸುಕು ಕಂಡರೆ ಮೂಗು ಮುರಿಯುತ್ತಿದ್ದಾರೆ.

ಉತ್ತರ ಕನ್ನಡದಲ್ಲಂತೂ ಅಸ್ನೋಟಿಕರ್‌ನನ್ನು 'ನಾಮಕಾವಸ್ಥೆ ಮಿನಿಸ್ಟರ್' ಮಾಡುವಲ್ಲಿ ಕುತಂತ್ರಿ ಕಾಗೇರಿ ಸಕ್ಸಸ್ ಆಗಿದ್ದಾರೆ. ಜಿಲ್ಲಾ ಬಿಜೆಪಿಯಲ್ಲಂತೂ ಅಸ್ನೋಟಿಕರ್ ಎಂದರೆ ಯಾರೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಗೂಟದ ಕಾರಿನ ಸೌಭಾಗ್ಯ ಬಿಟ್ಟರೆ ಇನ್ನೇನೂ ಅಧಿಕಾರ ಅಸ್ನೋಟಿಕರ್‌ಗೆ ಇಲ್ಲ. ಆತನ ಮೀನುಗಾರಿಕೆ-ವಿಜ್ಞಾನ-ತಂತ್ರಜ್ಞಾನ ಇಲಾಖೆ ಮತ್ತು ಜಿಲ್ಲಾಮಟ್ಟದಲ್ಲಿ ಅಸ್ನೋಟಿಕರ್ ಚಿರಅಪರಿಚಿತ!


ಅಸ್ನೋಟಿಕರ್

ಅಸ್ನೋಟಿಕರ್‌ಗೆ ಜಿಲ್ಲೆಯಲ್ಲಿ ತನಗೆ ಸಿಕ್ಕಿರುವ ಮಂತ್ರಿಗಿರಿ ಖಾತೆಯಲ್ಲಿ ಕ್ಯಾರೇ ಅನ್ನುವವರಿಲ್ಲದ್ದಕ್ಕೆ ಬೇಸರವೇನಿಲ್ಲ. ಆದರೆ ಸ್ವಕ್ಷೇತ್ರ ಕಾರವಾರ-ಅಂಕೋಲೆಯಲ್ಲಿ ಸ್ವಂತ ದೋ ನಂಬರ್ ದಂಧೆ, ದೌಲತ್ತಿಗೂ ಕುತ್ತು ಬಂದಿರುವುದು ತಲೆಕೆಡಿಸಿಬಿಟ್ಟಿದೆ! ಅಪಾರ ಆಮದಾನಿಯ ಮೂಲವಾಗಿದ್ದ, ಪುಂಡಬಂಟರ ಪೋಷಣೆಯ ದುಡ್ಡಿ ಗಣಿಯಂತಾಗಿದ್ದ ಉಸುಕು ಉದ್ಯಮ ಪುನರಾರಂಭಿಸುವುದು ಅಸ್ನೋಟಿಕರ್‌ಗೆ ದೊಡ್ಡ ಪ್ರತಿಷ್ಠೆಯ ಈಷ್ಯೂ ಆಗಿದೆ. ಮರಳುದಂಧೆ ಶುರು ಮಾಡುವಂತೆ ಮೊದಲು ದೊರೆ ರೆಡ್ಡಿ ಮೂಲಕ ಸಿಎಂಗೆ ಹೇಳಿಸಿ ನೋಡಿದರು. ನಂತರ ಗೋವಾ ಸಿಎಂ ದಿಗಂಬರ ಕಾಮತ್ ಜತೆ ರೆಡ್ಡಿಜೀ ಮಾತುಕತೆ ನಡೆಸುವಂತೆ ಮಾಡಿದರು. ಅದರಿಂದ ಪ್ರಯೋಜನವಾಗದಿದ್ದಾಗ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿಗೆ ಬೈದು ಬೆದರಿಸಿದರು. ಯಾವುದರಿಂದಲೂ ಪ್ರಯೋಜನವಾಗದೇ ಹತಾಶನಾದ ಅಸ್ನೋಟಿಕರ್ ಈಗ ಮಾವ-ಗೋವಾ ರಾಜಕಾರಣಿಯಿಂದ ಉಸುಕು ವಿವಾದಕ್ಕೆ ಗಡಿ ತಂಟೆಯ ತಳುಕು ಹಾಕಿಸಿ ಬ್ಲ್ಯಾಕ್‌ಮೇಲ್ ಟ್ಯಾಕ್ಟೀಸ್ ಮಾಡುತ್ತಿದ್ದಾರಾ? ಇಂಥದೊಂದು ಅನುಮಾನ ಬಾಂದೇಕರ್ ಮಾತುಗಾರಿಕೆ ಹುಟ್ಟುಹಾಕಿದೆ.

ಬಾಂದೇಕರ್ ಬಡಬಡಿಕೆ

ಮೊನ್ನೆ 17-1-2010ರ ರವಿವಾರ ಲಗುಬಗೆಯಿಂದ ಕಾರವಾರದ ಹೆಬ್ಬಾಗಿಲಲ್ಲಿರುವ ಭದ್ರಾ ಹೋಟೆಲ್‌ಗೆ ವಕ್ಕರಿಸಿದ ಸಂಜಯ ಬಾಂದೇಕರ್ ಆಯ್ದ ಪತ್ರಕರ್ತರನ್ನು ಕರೆಸಿಕೊಂಡಿದ್ದರು. ಪತ್ರಕರ್ತರು ಕಂಡಿದ್ದೇ ತಡ, ಮೈಮೇಲೆ ಬಂದಂತೆ ಒದರತೊಡಗಿದರು. ಕರ್ನಾಟಕ ಸರ್ಕಾರ, ಸಚಿವ ಕಾಗೇರಿ, ಇನ್ನೊಬ್ಬ ಸಚಿವ ಅಳಿಯ ಅಸ್ನೋಟಿಕರ್, ಜಿಲ್ಲಾಡಳಿತದ ಮೇಲೆ ಒಂದೇ ಸಮನೆ ಪಿರ್ಕೀಸ್‌ನಂತೆ ದಾಳಿ ಮಾಡತೊಡಗಿದರು. ಇಷ್ಟಕ್ಕೆ ಸುಮ್ಮನಾಗದ ಬಾಂದೇಕರ್ ಗಡಿ ಗಲಾಟೆ ಎಬ್ಬಿಸುವ ಪಾತಕಕ್ಕೂ ಕೈಹಾಕಿದರು...

ಬಾಂದೇಕರ್ ಮೊದಲು ಮೂದಲಿಸಿದ್ದು ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಎಂಬ ತನ್ನ ಅಳಿಮಯ್ಯನ ವೈರಿಯನ್ನು! "ನನ್ನ ಅಳಿಯ ಅಸ್ನೋಟಿಕರ್‌ನ ಡೌನ್ ಮಾಡುವ ಒಂದೇ ಕಾರಣಕ್ಕೆ ಕಾರವಾರದ ಉಸುಕು ಗೋವಾಕ್ಕೆ ಹೋಗದಂತೆ ಕಾಗೇರಿ ತಡೆಯುತ್ತಿದ್ದಾರೆ. ಕಾಗೇರಿ-ಅಸ್ನೋಟಿಕರ್ ಮೇಲಾಟದಿಂದ ವಿನಾಕಾರಣ ಗೋವಾ ಗೋಳನುಭವಿಸುತ್ತಿದೆ. ಅಪಾರ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಉಸುಕು ದಂಧೆಕಾರರು ಕಷ್ಟಕ್ಕೆ ಸಿಲುಕಿದ್ದಾರೆ. ಗೋವಾದ ಅಭಿವೃದ್ಧಿಗೆ ಹಿನ್ನಡೆಯಾಗಿದೆ..." ಎಂದೆಲ್ಲ ಗೋವಾದ ಹಿತೈಷಿಯಂತೆ ಮಾತಾಡಿದ ಬಾಂದೇಕರ್‌ನ ಅಸಲಿ ಉದ್ದೇಶವೇ ಬೇರೆಯಾಗಿತ್ತು ಬಿಡಿ.

"ನನ್ನ ಅಳಿಯ ಮರಳು ಸಾಗಾಣಿಕೆ ಮತ್ತೆ ಶುರು ಮಾಡಲು ರಾಶಿ ಪ್ರಯತ್ನ ಮಾಡಿದರೂ ಪ್ರಯೋಜವಾಗಿಲ್ಲ...ಕ್ಷೇತ್ರದ ಸಮಸ್ಯೆ ಬಗೆಹರಿಸಲಿಕ್ಕಾಗುವುದಿಲ್ಲ ಅಂತಾದ ಮೇಲೆ ಮಂತ್ರಿಯಾಗೇಕೆ ಉಳೀಬೇಕು, ಹೇಳಿ... ಅಂವ ರಾಜೀನಾಮೆ ಕೊಡೋದೇ ಬೆಸ್ಟು..." ಎಂದುಬಿಟ್ಟರು ಗೋವಾದ ಕಾಂಗ್ರೆಸ್ ಅಧ್ಯಕ್ಷ ಬಾಂದೇಕರ್ ಆ ನಂತರದ್ದೆಲ್ಲ ಪಕ್ಕಾ ಧಮಕಿ ಮಾತುಗಳೇ.. "ಉಸುಕು ಗೋವಾಕ್ಕೆ ಕಳಿಸದಿದ್ರೆ, ಕಾರವಾರದಿಂದ ಗೋವಾಕ್ಕೆ ಬರುವ ಮೀನು ಲಾರಿ ತಡೆಯುತ್ತೇವೆ... ಕರ್ನಾಟಕದ ಮಂತ್ರಿ-ಅಧಿಕಾರಿಗಳು ನಮ್ಮ ರಾಜ್ಯಕ್ಕೆ ಬಂದ್ರೆ ಘೇರಾವ್ ಹಾಕ್ತೇವೆ..." ಎಂದಬ್ಬರಿಸಿ ಬೊಬ್ಬಿರಿದರು ಮಂತ್ರಿ ಅಸ್ನೋಟಿಕರ್‌ನ ಮಾವಯ್ಯ!!

ಹುಚ್ಚು ಮನಸ್ಸಿನ ಹತ್ತು ಮುಖ ಪ್ರದರ್ಶಿಸಿದ ಸಂಜಯ್ ಬಾಂದೇಕರ್ ಅಂತಿಮವಾಗಿ ಗೋವಾ-ಕರ್ನಾಟಕ ಗಡಿ ಕೆದಕುವ ಕುಹಕವನ್ನೂ ಮಾಡಿದರು. ಕಾಳಿ ನದಿಯ ಎಡದಂಡೆ ಪ್ರದೇಶವನ್ನು ಗೋವಾಕ್ಕೆ ಸೇರಿಸಿದರೆ ಇಡಿಯಾಗಿ ಉಸುಕು ಗಣಿಯನ್ನೇ ಕಬಳಿಸಬಹುದೆಂಬ ದೂ(ದು)ರಾಲೋಚನೆಯೋ ಏನೋ? ಕಾರವಾರದ ಉತ್ತರಭಾಗ ಗೋವಾದಲ್ಲಿ ವಿಲೀನ ಮಾಡಬೇಕೆಂಬ ಅಪ್ಪಣೆ ಕೊಡಿಸಿದರು. ಈ ಅಡ್ಡಕಸುಬಿ ಗೋವಾ ಪುಢಾರಿ!!

ಈತ ಎಂಥ ಶತಮೂರ್ಖನೆಂದರೆ ಇವತ್ತು ಗೋವಾ ಹಲವು ಕಾರಣಕ್ಕೆ ಕಾರವಾರ ಮತ್ತು ಕರ್ನಾಟಕವನ್ನು ಅವಲಂಬಿಸಿದೆ. ಕರ್ನಾಟಕದ ವಿದ್ಯುತ್, ತರಕಾರಿ, ಉಸುಕು, ಮೀನು-ಕೂಲಿ ಕಾರ್ಮಿಕರು ಇಲ್ಲದಿದ್ದರೆ ಗೋವಾಕ್ಕೆ ಗತಿಗೇಡಿ ಸ್ಥಿತಿ ಗ್ಯಾರಂಟಿ! ಇಂಥ ಪರಾವಲಂಬಿ ರಾಜ್ಯದ ತಿರುಬೋಕಿ ರಾಜಕಾರಣಿ ಬಾಂದೇಕರ್ ವಿನಾಕಾರಣ ಕನ್ನಡಿಗರ ಕೆಣಕುವ ಮೂಲಕ ಅಳಿಯನ ಅಳಿಯುತ್ತಿರುವ ರಾಜಕೀಯ-ಸಾಮಾಜಿಕ ಅಸ್ತಿತ್ವ ಕಾಪಾಡಲು ಹೆಣಗುತ್ತಿರುವುದು ನಾಚಿಕೆಗೇಡೇ ಸರಿ!

ಏನೋ ಮಾಡಲು ಹೋಗಿ ಬಾಂದೇಕರ್ ಇನ್ನೇನೋ ಮಾಡಿಬಿಟ್ಟಿದ್ದಾರೆ. ಆತನ ಪ್ರಚೋದನಾತ್ಮಕ ಪುರಾಣ ಅಳಿಯನನ್ನು ಇನ್ನಷ್ಟು ಹೈರಾಣಾಗಿಸುತ್ತಿದೆ. ಮೊದಲೇ ಬುರ್ನಾಸ್ ಬುದ್ಧಿಯಿಂದ ಬಣ್ಣಗೆಟ್ಟಿರುವ ಅವಾಂತರಕಾರಿ-ಅವ್ಯವಹಾರಿ ಅಸ್ನೋಟಿಕರ್ ಮಾವನ ಮೂರ್ಖ ಮಾತುಗಳ ತರಲೆ ತಲೆಹರಟೆಯಿಂದ ಸ್ಥಳೀಯ ಕನ್ನಡಿಗರ ಕೆಂಗಣ್ಣಿಗೆ ತುತ್ತಾಗಿದ್ದಾರೆ. ಈ ಎಡವಟ್ಟು ಮಾವ-ಅಳಿಯ ತಮ್ಮ ಥರ್ಡ್‌ಕ್ಲಾಸ್ ಪಾಲಿಟಿಕ್ಸ್‌ಗೆ ಕನ್ನಡ ನೆಲ-ಜನ-ಸಂಪತ್ತನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ಕನ್ನಡಪರ ಸಂಘಟನೆಗಳನ್ನು ಕೆರಳಿಸಿದೆ! ಕನ್ನಡಿಗರೇನಾದರೂ ತಿರುಗಿಬಿದ್ದರೆ ಮಾವ-ಅಳಿಯ ಬಚಾವಾಗುವುದು ಕಷ್ಟ-ಕಷ್ಟ!!

'ಕೈಲಾಗದವ ಮೈ ಪರಚಿಕೊಂಡನಂತೆ' ಎಂಬಂತಾಗಿದೆ ಹೇತ್ಲಾಂಡಿ ಮಂತ್ರಿ ಅಸ್ನೋಟಿಕರ್ ಕತೆ, ಪಾಪ!

● ನಹುಶ

ಮರಳು ಮತ್ತು ಮಸ್ತಿ

ಗೋವಾ ಕಾಂಗ್ರೆಸ್ ಅಧ್ಯಕ್ಷ- ಕರ್ನಾಟಕದ ಮೀನುಗಾರಿಕೆ ಮಂತ್ರಿ ಆನಂದ ಅಸ್ನೋಟಿಕರ್‌ನ ಹೆಂಡತಿಯ ಅಪ್ಪ- ಸಂಜಯ್ ಬಾಂದೇಕರ್ ಅಳಿಯನಿಗೆ "ನೀನು ನಾಲಾಯಕ್ ಮಂತ್ರಿ... ಸುಮ್ಮನೆ ರಾಜೀನಾಮೆ ಬಿಸಾಕಿ ಮಾನ ಉಳಿಸಿಕೋ ಮಾರಾಯಾ..." ಎಂದು ಮೂದಲಿಸಿರುವುದರ ಹಿಂದೆ ದಾಂಪತ್ಯ ಸಮಸ್ಯೆಯೇನಾದರೂ ಅಡಗಿದೆಯಾ? ಹಾಗಂತ ಇಡೀ ಉತ್ತರ ಕನ್ನಡದಲ್ಲಿ ಬಿಸಿಬಿಸಿ ತರ್ಕ-ಕುತರ್ಕ ನಡೆದಿದೆ. ಆನಂದನ ರಂಗೀಲಾ ರಗಳೆಗಳೇ ಇದಕ್ಕೆ ಕಾರಣ.

ಅಸ್ನೋಟಿಕರ್‌ನ ಕೃಷ್ಣಾವತಾರದ ಕತೆ ಹಲವಿದೆ. ಕಳೆದ ಸಾರ್ವತ್ರಿಕ ಚುನಾವಣೆ ಹೊತ್ತಲ್ಲಿ ಆನಂದ್ ಮತ್ತವನ ಪೋಲಿ ಪಟಾಲಂ ಇನ್ಶೂರೆನ್ಸ್ ಕಂಪೆನಿಯೊಂದರ ಏಜೆಂಟಳೊಬ್ಬಳಿಗೆ ಬೃಹತ್ ಮೊತ್ತದ ಪಾಲಿಸಿ ಕೊಡುವ ಆಮಿಷ ಒಡ್ಡಿ ಆಕೆಯನ್ನು ತಿಂದು ಮುಗಿಸಿದ ಸುದ್ದಿ ಹಬ್ಬಿತ್ತು. ಸಣ್ಣ ಸೈಜಿನ ಜನಪ್ರತಿನಿಧಿಯೊಬ್ಬಳೊಂದಿಗಿನ ಮಂತ್ರಿಜೀಯ ಸ್ನೇಹ-ಸಲಿಗೆ ನಾನಾ ನಮೂನೆಯ ರಸಿಕ ಕತೆಗಳನ್ನು ಹುಟ್ಟು ಹಾಕಿತ್ತು. ಆಕೆಯ ತಂಗಿಗೂ ಈ ಎಳೆಯ ಪ್ರಾಯದ ಸುಂದರಾಂಗ ಆತ್ಮೀಯನಂತೆ. ಅಂಕೋಲಾ ಮೂಲದ ಅರಣ್ಯ ಅಧಿಕಾರಿಯೊಬ್ಬನ ಮುರಿದುಬಿದ್ದ ದಾಂಪತ್ಯದ ಮಗಳೊಂದಿಗಿನ ಹನಿಬೀಚ್ ರೋಮಾನ್ಸ್ ಬಹಿರಂಗ ರಹಸ್ಯ!



ಚಂದದ ಪ್ರೊಬೆಷನರಿ ಐಎಎಸ್ ಅಧಿಕಾರಿಣಿ ಜತೆಗಿನ ಅಸ್ನೋಟಿಕರ್ ಒಡನಾಟ ಆತನ ದಾಂಪತ್ಯದಲ್ಲಿ ಬಿರುಕು ಮೂಡಿಸಿದೆಯೆಂಬ ಊಹಾಪೋಹ ಕಳೆದೆರಡು ತಿಂಗಳ ಹಿಂದೆ ಕಾರವಾರದಲ್ಲಿ ಟಾಕ್ ಆಫ್ ದಿ ಟೌನ್ ಆಗಿತ್ತು. ಮಂತ್ರಿ ಮಡದಿ ಮುನಿಸಿಕೊಂಡು ತವರಿಗೆ ಹೋಗಿದ್ದಳಂತೆ. ಇದರಿಂದ ಸಿಟ್ಟಿಗೆದ್ದ ಮಂತ್ರಿಯ ಮಾವ ಬೀಗತಿಗೆ ಫೋನಾಯಿಸಿ ದಬಾಯಿಸಿದರಂತೆ. ತಾಯಿ ಅವಮಾನದಿಂದ ಮಗನನ್ನು ತರಾಟೆಗೆ ತೆಗೆದುಕೊಂಡಳಂತೆ. ಅಮಲಲ್ಲಿದ್ದ ಮಗ ತಾಯಿ ಮೇಲೇರಿ ಹೋದಾಗ ಗನ್‌ಮ್ಯಾನ್ ತಡೆದನಂತೆ. ಆಗ ಮಗ ಆ ಸರ್ಕಾರಿ ನೌಕರ ಮುಸುಡು ಪಾರೇಟು ಮಾಡಿದನಂತೆ. ಇದು ಕಾರವಾರದ ಅಂತೆ-ಕಂತೆ.

ಅಳಿಯನ ಹಗ್ಗ ಕಡಿಯುವ ಚಾಳಿ ತಪ್ಪಿಸಲು ಮಾವ ಕಾರವಾರದ ಉಸುಕು ರಾಜಕಾರಣ ಬಳಸಿಕೊಂಡರಾ? ಅಳಿಯನ ಮೇಲಿನ ಸಿಟ್ಟು ಮರಳಿನ ಮೂಲಕ ತೀರಿಸಿಕೊಳ್ಳುತ್ತಿದ್ದಾರಾ?



ಎರಡೂವರೆ ಲಕ್ಷ ರೂ.ಗಳ ಎತ್ತು!

"ಬುಕ್ಕನ ಬೆಟ್ಟದ ಜಾತ್ರೆಗೆ ಎರಡೂವರೆ ಲಕ್ಷ ರೂಪಾಯಿ ಬೆಲೆ ಬಾಳುವ ಎತ್ತುಗಳು ಬಂದಿವೆ. ನೋಡಲು ಬರುತ್ತೀರಾ?" ಎಂದು ಗೆಳೆಯ ಮಂಜಯ್ಯ ಫೋನು ಮಾಡಿದ.

ಬುಕ್ಕನ ಬೆಟ್ಟ ಚನ್ನರಾಯಪಟ್ಟಣದ ಸಮೀಪದಲ್ಲಿದೆ. ಬಹುಶಃ ಹಾಸನದ ಜಾತ್ರೆ ನಂತರ ನಡೆಯುವ ಮೊದಲ ಜಾತ್ರೆ ಇದೆ. ವಿಜಯನಗರ ಸಾಮ್ರಾಜ್ಯದ ಜೊತೆಗೆ ಈ ಜಾತ್ರೆಯ ವೈಭವವೂ ಸೇರಿಕೊಂಡಿದೆ. ವಿಜಯನಗರ ಸಾಮ್ರಾಜ್ಯ ನಿರ್ಮಾತೃಗಳಾದ ಹಕ್ಕಬುಕ್ಕರ ಪೈಕಿ ಬುಕ್ಕ ಇಲ್ಲಿ ನೆಲೆನಿಂತು ಬೆಟ್ಟದ ಮೇಲೆ ದೇವಸ್ಥಾನ ನಿರ್ಮಿಸಿ, ಪ್ರತಿ ವರ್ಷ ಇಲ್ಲಿ ದನಗಳ ಜಾತ್ರೆ ನಡೆಯುವಂತೆ ಮಾಡಿಹೋದನೆಂದು ನಮ್ಮ ಹಿರಿಯರು ಹೇಳುತ್ತಿದ್ದರು.

ಸುಮಾರು ನಲವತ್ತೈದು ವರ್ಷಗಳ ಹಿಂದೆ ನಾನು ಈ ಬೆಟ್ಟದ ಮೇಲೆ ನಿಂತು ನೋಡಿದಾಗ ನನ್ನ ಕಣ್ಣು ಕಾಣುವವರೆಗೂ ಬೆಟ್ಟದ ಸುತ್ತಲೂ ದನಗಳು ಸೇರಿದ್ದವು. ಸಿನಿಮಾ ಟೆಂಟು, ನಾಟಕದ ಕಂಪನಿ ಬಂದು ಬೀಡು ಬಿಟ್ಟಿದ್ದವು. ರೈತರ ಬದುಕಿನ ಸಕಲಷ್ಟು ಪದಾರ್ಥಗಳ ಅಂಗಡಿಗಳಲ್ಲದೆ ಒಂದು ಲಾರಿ ಲೋಡು ರಾಗಿಕಲ್ಲು, ಒನಕೆ, ನೊಗ, ಪಾತ್ರೆ ಅಂಗಡಿಗಳು ವಿಂಲಿಟ್ರ ಹೋಟೆಲುಗಳು, ಸಾಲುಗಟ್ಟಿದ್ದವು. ಕಿರೀಟದಂತೆ ಜೋಡಿಸಿದ್ದ ಮಿಠಾಯಿ ಅಂಗಡಿ, ಖರ್ಜೂರ, ಶರಬತ್ತಿನ ಅಂಗಡಿಗಳು... ನೆನೆಸಿಕೊಂಡರೆ ಆ ಮಾಯಾಲೋಕ ಕನಸೊ, ನಿಜವೊ ಎನ್ನುವಂತಾಗುತ್ತದೆ. ಆ ಕಾಲವನ್ನು ನೆನೆಯುತ್ತ ಈ ಕಾಲದಲ್ಲಿ ತಿರುಗಾಡುವುದು ಮಹಾ ಹಿಂಸೆಯ ಕೆಲಸ. ಬರೋಬ್ಬರಿ ಎರಡು ವಾರ ನಡೆಯುತ್ತಿದ್ದ ಜಾತ್ರೆ ಈಗ ನಾಲ್ಕೈದು ದಿನಕ್ಕೆ ಬಂದು ನಿಂತಿದೆ.

ಜಾತ್ರೆಗೆ ಹೋದಕೂಡಲೇ ಮೊದಲು ಶ್ರೀರಂಗನಾಥ ಸ್ವಾಮಿ ಹಿಂದೂ ಪಿಗ್ ಹೋಟೆಲಿಗೆ ಭೇಟಿಯಿತ್ತೆ. ಅಚ್ಚರಿಯೆಂದರೆ, ಹಂದಿ ಜಾತಿಗಳ ಪೈಕಿ ಚೀಣಾ ಹಂದಿ, ಫಾರಂ ಹಂದಿ, ನಾಟಿ ಹಂದಿ ಎಂಬ ದೇಹಾಕೃತಿಗೆ ಸಂಬಂಧಿಸಿದ ವಿಭಾಗಗಳಿವೆ ಅಷ್ಟೇ. ಅದರಲ್ಲಿ ಹಿಂದೂ ಪಿಗ್, ಕ್ರಿಶ್ಚಿಯನ್ ಪಿಗ್ ಇರಲು ಸಾಧ್ಯವೇ? ಅದರಲ್ಲೂ ಮುಸ್ಲಿಂ ಪಿಗ್ಗಂತೂ ಇರಲು ಸಾಧ್ಯವೇ ಇಲ್ಲ ಎಂದು ಯೋಚಿಸುತ್ತಿರುವಾಗ ಹಿಂದೂ ಪಿಗ್ ಬಂದಿತು. ಅದರ ರುಚಿ ನೋಡಿದಾಗ ನಿಜಕ್ಕೂ ಇದು ಹಿಂದೂ ಪಿಗ್ ಎನ್ನಿಸಿತು. ಎಷ್ಟೇ ಆಗಲಿ ಜಾತ್ರೆ ಹೋಟೆಲ್ಲಲ್ಲವೇ. ಗತಿಗೆಟ್ಟ ಗಿರಾಕಿ ಬಂದೇ ಬರುತ್ತಾನೆ. ನಾಳೆ ಬರದಿದ್ದರೇನಂತೆ ಹೋಟೆಲಿಗೆ. ಇದಂತೂ ಪರ್ಮನೆಂಟ್ ಜಾಗವಂತೂ ಅಲ್ಲ ಎಂಬ ಅಸಡ್ಡೆಯಿಂದ ಮಾಡಿದ್ದ ಹಿಂದೂ ಪಿಗ್ ತಿಂದು ದನ ನೋಡಲು ಹೊರಟೆ.

ಜಾತ್ರೆಯಲ್ಲಿ ನನಗೊಂದು ಆಶ್ಚರ್ಯ ಕಾದಿತ್ತು. ಬಹುಶಃ ನಮ್ಮ ಪ್ರಾಂತ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ನಮ್ಮೂರ ಕ್ಷೌರಿಕರ ಕುಂಟಣ್ಣನ ಮಗ ರಂಗ ಮುಂದೊಮ್ಮೆ ಲಕ್ಷ ರೂ.ಗಳ ಬೆಲೆಬಾಳುವ ಕರುಗಳನ್ನು ಜಾತ್ರೆಗೆ ತಂದಿದ್ದ. ನಮ್ಮ ಜನಾಂಗದ ಹುಡುಗ ಇಷ್ಟು ಬೆಲೆಬಾಳುವಂತಹ ದನ ಸಾಕಿದ್ದರಿಂದ ಹೆಮ್ಮೆಗೊಂಡ ಕ್ಷೌರಿಕರೆಲ್ಲಾ ಮುಫತ್ತಾಗಿ ಮೆರವಣಿಗೆಯಲ್ಲಿ ಓಲಗ ಊದಲು ಬಂದಿದ್ದರು. ಒಂದೊಂದು ಕರುವಿನ ಕೊರಳಿಗೂ ನೂರಾರು ರೂಪಾಯಿಗಳ ಹೂಮಾಲೆ ಹಾಕಿದ್ದರು. ಒಳ್ಳೆಯ ದನ ಸಾಕಿ ಜಾತ್ರೆಯಲ್ಲಿ ಬಹುಮಾನ ಗಳಿಸುತ್ತಿದ್ದ ಒಕ್ಕಲಿಗರು, ಕುರುಬರ ನಡುವೆ ಕ್ಷೌರಿಕನೊಬ್ಬ ಅದ್ದೂರಿ ಮೆರವಣಿಗೆಯಲ್ಲಿ ತನ್ನ ದನಗಳನ್ನು ಕರೆತರುತ್ತಿದ್ದುದು ಒಂದು ದಾಖಲೆಯಾಗಿತ್ತು. ನನ್ನೂರ ಮಟ್ಟಿಗಂತು ಇದೊಂದು ದಾಖಲೆಯೇ ಸರಿ.

ಜಾತ್ರೆಗೆ ಬಂದಕೂಡಲೇ ವ್ಯಾಪಾರವಾದ ಆ ಕರುಗಳನ್ನು ಬೀಳ್ಕೊಡುವ ಮುನ್ನ ರಂಗನ ಪರಿವಾರ ಅಳತೊಡಗಿದರು. ಮಾರಿದವನು ಕೊಳ್ಳುವವನನ್ನು ನೆಮ್ಮದಿಯಿಂದ ಹಾರೈಸಬೇಕು. ಅದು ಬಿಟ್ಟು ರೋದಿಸತೊಡಗಿದ ರಂಗ ಎಲ್ಲರಿಂದಲೂ ಗದರಿಸಿಕೊಂಡ.

ರಂಗನ ಸಾಹಸವನ್ನು ಕೊಂಡಾಡಿದ ನಾನು ಎರಡೂವರೆ ಲಕ್ಷ ರೂಪಾಯಿ ಬೆಲೆಯ ಎತ್ತು ಕಟ್ಟಿರುವಲ್ಲಿಗೆ ಹೋದೆ. ನೋಡುಗರನ್ನು ವಶೀಕರಣಗೊಳಿಸಿದ್ದ ಆ ಎತ್ತುಗಳು ಹಿರಿಸೇವೆ ಪಕ್ಕದ ಜಿನ್ನೇನಹಳ್ಳಿ ತೋಟಿಯಿಂದ ಬಂದಿದ್ದವು. ಅವುಗಳ ಪಕ್ಕದಲ್ಲೇ ಒಂದೂವರೆ ಲಕ್ಷ, ಒಂದು ಲಕ್ಷ–ಹೀಗೆ ನಾನಾ ಬೆಲೆಯ ಮತ್ತು ವಯಸ್ಸಿನ ಎತ್ತುಗಳನ್ನು ಕಟ್ಟಿದ್ದರು. ಈ ಎರಡೂವರೆ ಲಕ್ಷ ರೂಪಾಯಿ ಎತ್ತುಗಳ ಮೂಳೆ ಎಲ್ಲೆಲ್ಲಿವೆ ಎಂಬುದೇ ತಿಳಿಯುತ್ತಿರಲಿಲ್ಲ. ಅಷ್ಟರಮಟ್ಟಿಗೆ ಸಾಕಿದ್ದರು. ತೋಟಿಯ ಗೌಡರ ಮಗ ಮನು ಅವು ಸಗಣಿ ಹಾಕಿದ ಕೂಡಲೇ ಅದನ್ನು ಪ್ರಸಾದವೆಂಬಂತೆ ತೆಗೆದು ದೂರ ಬಿಸಾಡುತ್ತಿದ್ದ. ಗಂಜಲವನ್ನು ತೀರ್ಥದಂತೆ ಡಬ್ಬದಲ್ಲಿ ಹಿಡಿದು ಹುಯ್ಯುತ್ತಿದ್ದ. ಸದಾ ಅವುಗಳ ಮೈ ಸವರುವುದು, ಹುಲ್ಲು ಹಿಂಡಿ ತಿಂಡಿ ಕೊಡುವು ದರಲ್ಲೇ ತನ್ಮಯನಾಗಿದ್ದ ಆತನನ್ನು ಗೋರಕ್ಷಣೆ ಘೋಷಣೆಯ ಗೋಮುಖ ವ್ಯಾಘ್ರಗಳು ಒಮ್ಮೆ ಬಂದು ನೋಡಿ ಹೋಗಬಹುದಲ್ಲಾ ಅನ್ನಿಸಿತು.



ಹಾಗೆ ನೋಡಿದರೆ ಈ ಜಾತ್ರೆಯಲ್ಲಿ ದನ ತಂದು ಕಟ್ಟಿರುವವರಿಗೂ, ಗೋಯಾತ್ರೆಯ ಬಲರಾಮನ ಗೋವುಗಳಿಗೂ ಯಾವ ಸಂಬಂಧವೂ ಇಲ್ಲ. ದನ ಸಾಕುವುದು ಒಂದು ಪರಂಪರೆಯಿಂದ ಬಂದ ಕಸುಬು. ಅವುಗಳಿಗಾಗಿ ಮಾಡುವ ಖರ್ಚು ಮತ್ತು ಅವು ಮಾರಾಟವಾಗುವ ಬೆಲೆಯನ್ನು ಕೂಡಿ ಕಳೆದು ನೋಡಿದರೆ ದನ ಸಾಕಿದವನ ಘನತೆ, ಧೀಮಂತಿಕೆ ಅರ್ಥವಾಗುತ್ತದೆ. ಜಾತ್ರೆಯಲ್ಲಿ ಲಕ್ಷಾಂತರ ರೂಪಾಯಿ ಬೆಲೆಬಾಳುವ ದನ ಕಟ್ಟಿದವರು ಅವುಗಳನ್ನು ನೋಡಲು ಬಂದ ನೆಂಟರು, ಗೆಳೆಯರನ್ನು ಹಾಗೇ ಕಳುಹಿಸಲು ಬರುವುದಿಲ್ಲ. ಅವರ ಊಟದ ಏರ್ಪಾಟು ನಡೆಯುತ್ತಿರಬೇಕು. ಅದರಲ್ಲೂ ಮಾಂಸದ ಅಡುಗೆಯೇ ತಯಾರಾಗಬೇಕು. ದನ ಕಟ್ಟಿದ್ದ ದಾವಣಿ ಪಕ್ಕ ಉರಿಯುತ್ತಿದ್ದ ಒಲೆಗಳು ಅದಕ್ಕೆ ಸಾಕ್ಷಿ ಒದಗಿಸುತ್ತಿತ್ತು.

ಜಾತ್ರೆಯಾಗಲೇ ಖಾಲಿಯಾಗುತ್ತಿತ್ತು. ಆದರೂ ಎರಡೂವರೆ ಲಕ್ಷ ರೂಪಾಯಿ ಕೊಟ್ಟು ಎತ್ತು ಕೊಳ್ಳುವ ಆಸಾಮಿಗಳಾರು ಬಂದಂತೆ ಕಾಣಲಿಲ್ಲ. ಆದರೂ ಎತ್ತಿನ ಮಾಲೀಕರಲ್ಲಿ ಯಾವ ನಿರಾಶೆಯೂ ಇರಲಿಲ್ಲ. ಬಳಿಗೆ ಅವುಗಳು ತರುವ ಬಹುಮಾನದ ಬಗ್ಗೆ ಹೆಮ್ಮೆಯಿತ್ತು.

ಈ ನಡುವೆ ದೂರದಲ್ಲೊಂದು ಬೀಜದ ಹೋರಿ ಕಾಣಿಸಿತು. ಮೊದಲಿಗೆ ಕನಿಷ್ಠ ಎಂಟ್ಹತ್ತು ಹೋರಿಗಳಾದರೂ ಈ ಜಾತ್ರೆಗೆ ಬರುತ್ತಿದ್ದವು. ಆದರೆ ಒಂದೇ ಒಂದು ಹೋರಿ ಬಂದಿರುವುದನ್ನು ನೋಡಿ ಬಹಳ ಬೇಸರವಾಯ್ತು. ಮೊದಲಿಗೆ ನಮ್ಮೂರಿನಲ್ಲೇ ಎರಡು ಹೋರಿಗಳಿದ್ದವು. ಹಸುಗಳ ಸಂಖ್ಯೆ ಕಡಿಮೆಯಾಗಿ ಈಗ ಹೋರಿಗಳೂ ಅಪರೂಪವಾಗುತ್ತಿವೆ.


ಈ ಜಾತ್ರೆಯಲ್ಲಿ ನಾನು ವಿಶೇಷವಾದ ಜನಾಂಗವೊಂದನ್ನು ನೋಡಿದೆ. ಅವರಿಗೂ ಈ ಜಾತ್ರೆಗೂ ಯಾವಾಗಲೋ ಲಿಂಕ್ ತಪ್ಪಿದಂತೆ ಕಾಣುತ್ತಿತ್ತು. ಅವರಿಗೆ ದನಗಳನ್ನು ನೋಡುವುದಕ್ಕಿಂತ ಜಾತ್ರೆಯ ಹೋಟೆಲುಗಳಲ್ಲಿ ತಿಂದು ಕುಡಿದು ಹಾಗೇ ಧಿಮಾಕಿನಿಂದ ತಿರುಗಾಡಿ ತೊಲಗುವುದೇ ಸಂಭ್ರಮವಾಗಿತ್ತು.

ಬೆಂಗಳೂರಿನ ಹೋಟೆಲುಗಳಲ್ಲೊ, ಶಾಸಕರುಗಳ ಹಿಂದೊ ಇಲ್ಲಾ ಭೂಗತ ಲೋಕದ ಚಿಲ್ಲರೆ ರೌಡಿಗಳ ಸಹವಾಸದಲ್ಲೋ ಯಾಚಕ ಮಾಡುತ್ತಿರುವ ಈ ತೋಳ್ಬಲದ ಪಡೆ ಹಿಂದೆ ಇದೇ ಜಾತ್ರೆಯಲ್ಲಿ ಎತ್ತು ಕಟ್ಟುತ್ತಿದ್ದವರ ಮಕ್ಕಳೆಂಬುದರಲ್ಲಿ ಯಾವ ಅನುಮಾನವೂ ಇರಲಿಲ್ಲ. ಲಕ್ಷ ಲಕ್ಷ ರೂ.ಗಳ ಬೆಲೆಬಾಳುವ ಎತ್ತು ಕಟ್ಟಿ ಸುತ್ತಲ ಸೀಮೆಯ ಜನರ ಬಾಯಲ್ಲಿ ಮೆಚ್ಚುಗೆ ಗಳಿಸಿದ ತೋಟಿಯ ಗೌಡರಂತವರಿಂದ ಈ ಯುವ ಜನಾಂಗ ಸ್ಫೂರ್ತಿ ಪಡೆದರೆ ಮತ್ತೆ ನಾವು ಕಳೆದುಕೊಂಡದ್ದು ಸಿಗಬಹುದೇನೋ ಎಂಬ ಸುಳ್ಳು ಭರವಸೆಯನ್ನು ಧ್ಯಾನಿಸುತ್ತ ಹೊರಟೆ.

● ಬಿ. ಚಂದ್ರೇಗೌಡ


ಕೊಳ್ಳೇಗಾಲ: ಅಬಕಾರಿ ಇನ್ಸ್‌ಪೆಕ್ಟರ್ ಪ್ರಕಾಶ್‌ಗೆ ಲಂಚದ ಅಮಲು

ಕೊಳ್ಳೇಗಾಲ ತಾಲ್ಲೂಕಿನ ಬಾರ್ ಅಂಡ್ ರೆಸ್ಟೋರೆಂಟ್‌ಗಳು ನಕಲಿ ಮದ್ಯ ನೀಡಿ ಜನರಿಗೆ ನಿಶೆ ಏರಿಸುತ್ತಿದ್ದರೆ, ತಾಲ್ಲೂಕಿನ ಅಬಕಾರಿ ಸರ್ಕಲ್ ಇನ್ಸ್‌ಪೆಕ್ಟರ್ ಎನ್.ಬಿ. ಪ್ರಕಾಶನಿಗೆ ಅದೆಲ್ಲ ಕಾಣುವುದಿಲ್ಲ. ಏಕೆಂದರೆ ಈತನಿಗೆ ಸದಾ ಲಂಚದ ಅಮಲು. ಅಕ್ರಮ ಮದ್ಯ ವ್ಯವಹಾರ ನಡೆದಷ್ಟೂ ಪ್ರಕಾಶ ಪ್ರಕಾಶಿಸುತ್ತಲೇ ಇರುತ್ತಾನೆ.



ಪ್ರಕಾಶ್

ಕೊಳ್ಳೇಗಾಲ ಊರೊಂದರಲ್ಲೇ 18 ಬಾರ್ ಮತ್ತು ವೈನ್‌ಶಾಪ್‌ಗಳಿವೆ. ಇನ್ನು ಹನೂರು, ರಾಮಾಪುರ, ಸತ್ತೇಗಾಲ, ಒಡೆಯರ್ ಪಾಳ್ಯ ಮುಡಿಗುಂಡ, ಯಕ್ಕನಹಳ್ಳಿ, ಬಂಡಳ್ಳಿ ಗ್ರಾಮಗಳಲ್ಲಿರುವ 36 ಬಾರ್ ಕಮ್ ವೈನ್‌ಶಾಪ್‌ಗಳು ಸೇರಿದರೆ ತಾಲ್ಲೂಕಿನಲ್ಲಿ ಅಧಿಕೃತವಾಗಿ 54 ಬಾರ್‌ಗಳಾಗುತ್ತವೆ. ಇವುಗಳಲ್ಲಿ ಕೆಲವೇ ಕೆಲವು ಬಾರ್‌ಗಳನ್ನು ಬಿಟ್ಟರೆ ಉಳಿದವುಗಳಲ್ಲಿ ಬರೀ ನಕಲಿ ಮದ್ಯ ಸರಬರಾಜು ನಡೆದೇ ಇದೆ. ಲಂಚದ ಅಮಲಿನಲ್ಲಿರುವ ಅಬಕಾರಿ ಸಿಪಿಐ ಪ್ರಕಾಶ್‌ಗೆ ಮಂತ್ಲಿ ಕೊಟ್ಟರೆ ಮುಗೀತು. ಜನರಿಗೆ ಏನಾದರೂ ಕುಡಿಸಿ ಹಣ ಮಾಡಬಹುದು ಎಂಬುದು ಬಾರ್ ಮತ್ತು ವೈನ್‌ಶಾಪ್ ಗಳವರಿಗೆ ಗೊತ್ತಾಗಿಹೋಗಿದೆ. ಹೀಗಾಗಿ ನಕಲಿ ಮದ್ಯವು ಲೇಬಲ್‌ಗಳನ್ನು ಅಂಟಿಸಿಕೊಂಡು ಹರಿದಾಡುತ್ತಾ ದುಡಿವ ಜನರ ಕರುಳು ಸುಡುತ್ತಿದೆ.



ರಾಜ್ಯಾದ್ಯಂತ ಸಾರಾಯಿ ನಿಷೇಧ ಮಾಡಿದ ಮೇಲೆ ಕಾಡಂಚಿನ ಹಳ್ಳಿಗಳಾದ ಹೊಗೇನಕಲ್, ಗೋಪಿನಾಥಂ, ಬಂಡಳ್ಳಿ, ರಾಮಾಪುರ, ಲೊಕ್ಕನಹಳ್ಳಿ, ಪುಷ್ಪಪುರ, ಅರ್ಜುನದೊಡ್ಡಿ, ಅಜ್ಜೀಪುರ, ದೊಮ್ಮನಗದ್ದೆ, ಪೊನ್ನಾಚಿ, ದಿನ್ನಳ್ಳಿ, ಮಾರ್ಟಳ್ಳಿ, ಪಳನಿಮೇಡು, ಗೊಲ್ಲರದೊಡ್ಡಿ ಗ್ರಾಮಗಳಲ್ಲಿ ಕಳ್ಳಭಟ್ಟಿ ತಯಾರಿಕಾ ಘಟಕಗಳು ತಲೆಯೆತ್ತಿ ಬಡವರನ್ನು ನಿತ್ಯ ಸಾಯಿಸುತ್ತಿವೆ. ಇವುಗಳಿಂದ ಕಪ್ಪ ಪಡೆಯುವ ಭೂಪ ಪ್ರಕಾಶ್ ಎಲ್ಲ ಅಕ್ರಮಗಳಿಗೂ ಗ್ರೀನ್ ಸಿಗ್ನಲ್ ಕೊಟ್ಟು ಬಿಟ್ಟಿದ್ದಾನೆ. ತಾಲ್ಲೂಕಿನಲ್ಲಿ 150 ಬುಕ್ ಪಾಯಿಂಟ್‌ಗಳಿದ್ದು ಪ್ರಕಾಶ್ ಮಾತ್ರ ಒಂದಕ್ಕೂ ಭೇಟಿ ನೀಡುವುದಿಲ್ಲ. ಈತ ಚೆಕಿಂಗ್ ರೌಂಡ್ಸ್‌ಗೆ ಹೋಗುವುದಿಲ್ಲ! ಕೊಳ್ಳೇಗಾಲ ಪಟ್ಟಣದ ವೈನ್‌ಶಾಪ್‌ಗಳು, ಬಾರ್ ಅಂಡ್ ರೆಸ್ಟೋರೆಂಟ್‌ಗಳು ರಾಜಾರೋಷದಿಂದ ನಿಯಮ ಉಲ್ಲಂಘಿಸುತ್ತಿವೆ. ಪ್ರಕಾಶನಿಗೆ ಪಾಲು ಸಲ್ಲಿಸಿಯೇ ಅವು ವ್ಯಾಪಾರ ನಡೆಸುವುದರಿಂದ ಆಡಿದ್ದೇ ಆಟ, ಕುಡಿಸಿದ್ದೇ ಎಣ್ಣೆ ಎಂಬಂತಾಗಿಹೋಗಿದೆ. ಕಳಪೆ ಮದ್ಯ ಕುಡಿದ ಜನರ ಆರೋಗ್ಯ ಹದಗೆಡುತ್ತಿದ್ದು, ಪ್ರಕಾಶನ ಹಡಬೆ ಸಂಪತ್ತು ಮಾತ್ರ ವೃದ್ಧಿಯಾಗುತ್ತಿದೆ.

ಅಬಕಾರಿ ಇಲಾಖೆಯ ವ್ಯಾಪ್ತಿಗೆ ಬರುವ ವಾರ್ಡ್, ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ತಿಂಗಳು ತಪ್ಪದೇ ಸಭೆ ಮಾಡಿ, ಅಲ್ಲಿ ನಡೆಯುವ ಅಕ್ರಮ ಮದ್ಯ ಸರಬರಾಜು, ಕಳ್ಳಭಟ್ಟಿ ದಂಧೆ ತಡೆಗೆ ಯತ್ನಿಸಬೇಕು. ಆದರೆ ಪ್ರಕಾಶ್ ಅಂತಹ ಉಸಾಬರಿಗೆ ಹೋಗುವುದಿಲ್ಲ. ಹೇಗೂ ವಸೂಲಿ ಮನೆ ಬಾಗಿಲಿಗೆ ಬರುತ್ತಲ್ಲ?




ಸಂಜೆಯಾಯಿತೆಂದರೆ ಸಾಕು ಸಾಮಾನ್ಯ ಪೋಲೀಸ್‌ನಂತೆ ಬಾರ್‌ಗಳ ಮುಂದೆ ತನ್ನ ಜೀಪ್ ನಿಲ್ಲಿಸಿಕೊಂಡು ಹಣ ವಸೂಲಿ ಮಾಡುವ ಪ್ರಕಾಶ್, ಕತ್ತಲಾದರೆ ಸಾಕು ಹೊಟ್ಟೆ ತುಂಬಾ ಎಣ್ಣೆ ಸುರಿದುಕೊಂಡು ಮೈಸೂರಿನ ತನ್ನ ಮನೆ ಸೇರುತ್ತಾನೆ. ತಾಲ್ಲೂಕಿನಲ್ಲಿ ಇಬ್ಬರು ಅಬಕಾರಿ ಸಬ್ ಇನ್ಸ್‌ಪೆಕ್ಟರ್‌ಗಳಿರಬೇಕಿತ್ತು. ಆದರೆ ಪ್ರಕಾಶ್ ಒಂದು ಹುದ್ದೆ ಖಾಲಿ ಬೀಳುವಂತೆ ಕುತಂತ್ರ ಮಾಡಿ, ಇರುವ ಗಂಗಯ್ಯ ಎಂಬೊಬ್ಬ ಸಬ್‌ಇನ್ಸ್‌ಪೆಕ್ಟರ್‌ನ ಮೂಲಕ ಭರಪೂರ ಕಲೆಕ್ಷನ್ ಮಾಡುತ್ತಿದ್ದಾನೆ. ಹಿಂದಿನ ಅಬಕಾರಿ ಸಿಪಿಐ ವೆಂಕಟಕೃಷ್ಣ 196 ಕಳ್ಳಭಟ್ಟಿ ತಯಾರಕರಿಗೆ ಪಾಠ ಕಲಿಸಿದ್ದರು. ಪ್ರಕಾಶ್ ಬಂದ ಮೇಲೆ ಈ ಕಳ್ಳಭಟ್ಟಿ ಕುಳಗಳು ಮತ್ತೆ ಚಿಗಿತಿವೆ. ಅವು ಚಿಗಿಯಲು ಪ್ರಕಾಶನ ಪಾಲನೆ, ಪೋಷಣೆಯೇ ಕಾರಣವಾಗಿದೆ. ಕೇರಳ, ತಮಿಳುನಾಡುಗಳಿಗೆ ಅಕ್ರಮವಾಗಿ ಸ್ಪಿರಿಟ್ ಸಾಗಿಸುವ ಮಾಫಿಯಾಕ್ಕೂ ಪ್ರಕಾಶನ ಶ್ರೀರಕ್ಷೆಯಿದೆ.

ಹೀಗೆ ಇಡೀ ಕೊಳ್ಳೇಗಾಲ ತಾಲ್ಲೂಕಿನ ತುಂಬ ಅಕ್ರಮ ಮದ್ಯ ಪೂರೈಕೆ, ಅಕ್ರಮ ಸ್ಪಿರಿಟ್ ಸಾಗಾಣಿಕೆ, ಕಳ್ಳಭಟ್ಟಿ ತಯಾರಿಕೆಗಳನ್ನು ಪೋಷಿಸುತ್ತಿರುವ ಈ ಪ್ರಕಾಶ್ ವಿರುದ್ಧ ಅಂಬೇಡ್ಕರ್ ಸಂಘ ಮತ್ತು ಇತರ ಪ್ರಗತಿಪರ ಸಂಘಟನೆಗಳು ದೂರು ನೀಡಿ, ಕಾಯುತ್ತಿವೆ.

ಅಬಕಾರಿ ಎಸ್ಪಿ ಮಾದಯ್ಯ ಡಿವೈಎಸ್ಪಿ ಮಾದೇಶ್ ಮತ್ತು ಅಬಕಾರಿ ಆಯುಕ್ತ ಯೋಗೇಂದ್ರ ತ್ರಿಪಾಠಿಗಳು ಎಚ್ಚೆತ್ತು ಪ್ರಕಾಶನ ಲಂಚದ ಅಮಲನ್ನು ಇಳಿಸಬೇಕಾಗಿದೆ.

● ಚಿಕ್ಕಮಾಳಿಗೆ

ಗುರುಶಿಷ್ಯರ ಸಂಬಂಧ ಹೇಗಿತ್ತು...


ಗುರು ಸಮಾಧಿಯ ಮುಂದೆ ತರೀಕೆರೆ

ಮೊನ್ನೆ ಮೊಹರಂ ಹಬ್ಬವನ್ನು ವೀಕ್ಷಿಸಲು ಮಿತ್ರರಾದ ರಹಮತ್ ತರೀಕೆರೆಯವರು ನನ್ನೂರಾದ ತುರುವೇಕೆರೆ ತಾಲ್ಲೂಕಿನ ದಂಡಿನಶಿವರಕ್ಕೆ ಬಂದಿದ್ದರು. ತರೀಕೆರೆ ಅವರು ಭಾರತದಲ್ಲಿ ನಡೆಯುವ ಮೊಹರಂ ಆಚರಣೆಯ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ. ಅದೇ ರೀತಿ ನನ್ನೂರ ಹತ್ತಿರದ ಹಳ್ಳಿಗಳಾದ ಹಟ್ಟಿಹಳ್ಳಿ ಮತ್ತು ಬೀಚನಹಳ್ಳಿಯಲ್ಲಿ ನಡೆಯುವ ಮೊಹರಂ ಆಚರಣೆಯನ್ನು ನೋಡಲು ಬಂದಿದ್ದರು. ತರೀಕೆರೆ ಎಂಥ ಭಾವುಕ ಜೀವಿಯೆಂದರೆ ಆ ಹಬ್ಬದಲ್ಲಿ ಆಚರಿಸುವ ಕೋಡಂಗಿ, ಹಿಡುಂಬೆ, ಹುಲಿವೇಷಗಳನ್ನು ಹಾಕಿ ಕುಣಿಯುತ್ತಿದ್ದ ಹಟ್ಟಿಹಳ್ಳಿಯ ಪಾತ್ರಧಾರಿಗಳ ಜೊತೆಯಲ್ಲಿಯೇ ಲೀನರಾದಂತೆ ಕಂಡಿತು. ಇದು ಒಂದು ಭಾವೈಕ್ಯತೆ ಹಬ್ಬ ಎಂದು ತೃಪ್ತಿಪಟ್ಟರು.

ಆನಂತರ ತರೀಕೆರೆಯವರು "ಗೌಡ್ರೆ, ನನಗೆ ಪಾಠ ಹೇಳಿಕೊಟ್ಟ ಮೇಷ್ಟ್ರ ಊರು ಇಲ್ಲೇ ಸಮೀಪದಲ್ಲೇ ಇದೆ. ಅದು ತಿಪಟೂರಿನ ಸಮೀಪದ ನೊಣವಿನಕೆರೆ. ಬನ್ನಿ ಹೋಗಿಬರೋಣ" ಎಂದರು.


ಇಬ್ಬರೂ ಬೈಕ್ ಏರಿ ನನ್ನೂರಿನಿಂದ ಹೊರಟೆವು. "ನೊಣವಿನಕೆರೆ ಬಂತು, ಗಾಡಿ ನಿಲ್ಸಿ ಗೌಡ್ರೆ" ಎಂದವರೆ ಅಲ್ಲಿ ಕಾಣುತ್ತಿದ್ದ ಸರ್ಕಾರಿ ಶಾಲೆಯ ಗೇಟ್ ಬಳಿ ಹೋಗಿ, "ಇಲ್ಲಿ ಪ್ರೊಫೆಸರ್ ಎನ್.ಎಸ್. ತಿಮ್ಮೇಗೌಡ್ರು ಅಂತ ಸಹ್ಯಾದ್ರಿ ಕಾಲೇಜ್ನಲ್ಲಿ ಉಪನ್ಯಾಸಕರು ಆಗಿದ್ದರು. ಇಲ್ಲಿಗೆ ವರ್ಷ ಆಯಿತು ತೀರ್ಕೊಂಡು. ಅವ್ರ ಮನೆ ಎಲ್ಲಿ ಇದೆ ಅಂತ ಹೇಳ್ತೀರಾ" ಅಂತ ಅಲ್ಲಿದ್ದ ಇಬ್ಬರು ಮೇಷ್ಟ್ರುಗಳನ್ನು ಕೇಳಿದರು. ನಾವು ಕೇಳಿದ್ದು ಯಾವುದೋ ಸಿನೆಮಾ ನಟನ ಅಡ್ರೆಸ್ ಆಗಿದ್ದರೆ ಹೇಳುತ್ತಿದ್ದರೋ ಏನೋ. "ನಮಗೊತ್ತಿಲ್ಲ, ಆ ಹೋಟ್ಲರ್ನ ಕೇಳಿ" ಅಂದರು. ಆಮೇಲೆ ಅವರ ಮನೆ ಸಿಕ್ತು ಅನ್ನಿ. ಪ್ರೊಫೆಸರ್ ತಿಮ್ಮೇಗೌಡರ ತಮ್ಮನ ಹೆಂಡ್ತಿ ಮತ್ತು ಮಗು ಮನೆ ಹತ್ತಿರ ಇದ್ದರು. ಹಟ್ಟಿ ಮುಂದೇನೆ ಬಾಗಿಲ ಹತ್ತಿರ ಕುಳಿತುಕೊಂಡ ತರೀಕೆರೆ ಅವರ ಯೋಗಕ್ಷೇಮ ವಿಚಾರಿಸಿ "ಮೇಷ್ಟ್ರನ ಮಣ್ಣಾಡಿರೋ ಸಮಾಧಿ ಎಲ್ಲಿದೆ?" ಅಂತ ಕೇಳಿದರು. "ಅದು ಊರಾಚೆ ಗುಂಗುರುಮೆಳೆಗೆ ಹೋಗೋ ರಸ್ತೆ ಪಕ್ದಲೇ ಐತೆ. ಹಿಂಗೆ ಸೀದಾ ಹೋಗಿ" ಅಂದರು.

ಮೇಷ್ಟ್ರ ಸಮಾಧಿ ಕಣ್ಣಿಗೆ ಗೋಚರಿಸುತ್ತಿತ್ತು, ಅದರ ಮುಂದೆ ಗೇಟ್ ಹಾಕಿದ್ದರು. ಗೇಟ್ ಬೀಗದಕ್ಕೆ ಇಲ್ಲದಿದ್ದರಿಂದ, ಮುಳ್ಳುತಂತಿನ ನುಸಿದು ಇಬ್ಬರು ಒಳಗೆ ಹೋದೆವು. ತರೀಕೆರೆ ತಮ್ಮ ಕೈಯಲ್ಲಿದ್ದ ಒಂದು ಹೂವಿನ ಹಾರವನ್ನು ಮೇಷ್ಟ್ರ ಸಮಾಧಿ ಮೇಲೆ ಹಾಕಿ, ಆ ಸಮಾಧಿ ಮುಂದೆ ಕೂತುಕೊಂಡು ಸಣ್ಣ ಮಗುವಿನ ತರ ಅಳಲಾರಂಭಿಸಿದರು. ಅದನ್ನು ನೋಡಿ ನಾನು ಭಾವುಕನಾದೆ. ಆನಂತರ ತಮ್ಮ ಮೇಷ್ಟ್ರ ಬಗ್ಗೆ ಹೇಳುತ್ತಾ ತರೀಕೆರೆ ಅವರು "ಗೌಡ್ರೆ, ಇವ್ರು ಸಹ್ಯಾದ್ರಿ ಕಾಲೇಜ್ನಲ್ಲಿ ಉಪನ್ಯಾಸಕರಿದ್ದಾಗ ನನ್ನಂತ ಎಷ್ಟೊಂದು ಹುಡುಗ್ರಿಗೆ ಯಾವ್ಯಾವ್ತರ ಸಹಾಯ ಮಾಡಿದ್ದಾರೆ ಅಂತ ಹೇಳ್ತಾ ಹೋದ್ರೆ ಅದು ದೊಡ್ಡ ಪಟ್ಟಿ ಆಗುತ್ತೆ, ನನ್ನನ್ನು ಸಾಹಿತ್ಯ ಕ್ಷೇತ್ರಕ್ಕೆ ಬರವಣಿಗೆಗೆ ಎಳೆದು ತಂದಿದ್ದೇ ಈ ಮೇಷ್ಟ್ರು. ಇವರ ಕಾವ್ಯನಾಮ 'ನೊಸಂತಿ'. ಅಂದ್ರೆ ನೊಣವಿನಕೆರೆ ಸಂಗಪ್ಪನ ಮಗ ತಿಮ್ಮೇಗೌಡ್ರು ಅಂಥ. ಆಗ್ಲೆ ಇವ್ರುದು ಪ್ರೇಮವಿವಾಹ. ಇವರಿಗೆ ಒಬ್ಬಳೇ ಮಗಳು. ಈಗ ಅದೇ ಕಾಲೇಜ್ನಲ್ಲಿ ಉಪನ್ಯಾಸಕಿಯಾಗಿದ್ದಾರೆ. ಮುಂದೆ ಯಾವುದಾದರೊಂದು ದಿನ ಈ ಸಮಾಧಿಯ ಬಳಿಯಲ್ಲೇ ಸ್ನೇಹಿತರನ್ನೆಲ್ಲಾ ಸೇರಿಸ್ಕೊಂಡು ಒಂದು ಕಮ್ಮಟ ಕಾರ್ಯಕ್ರಮ ನಡೆಸೋಣ ತಿಮ್ಮೇಗೌಡ್ರೆ" ಎಂದರು.


ತರೀಕೆರೆಯವರನ್ನು ನೋಡಿ, ನನಗೆ ಅನ್ನಿಸಿದ್ದು: ಗುರು ಶಿಷ್ಯರ ಸಂಬಂಧ ಎಂದರೆ ಹಿಂದೆ ಹೇಗೆ ಇತ್ತು... ಆದರೆ ಮುಂದೆ ಇಂತಹ ಸಂಬಂಧಗಳು ಕಂಡುಬರುವ ಸಾಧ್ಯತೆ ಕಡಿಮೆ. "ಹಿಂದೆಲ್ಲಾ ಗುರು ಇತ್ತು, ಗುರಿ ಇತ್ತು ನಡೆಯುತ್ತಿತ್ತು ವೀರರ ತಂಡ. ಆದರೆ ಇಂದು ಗುರು ಇಲ್ಲ, ಗುರಿ ಇಲ್ಲ ನಡೆಯುತ್ತಿದೆ ಪೋಲಿ ಪುಂಡರ ತಂಡ" ಎಂದು ನಮ್ಮ ಶಾಲೆಯ ನನ್ನ ಮೇಷ್ಟ್ರಾದ ನಾಗಪ್ಪನವರು ಹೇಳುತ್ತಿದ್ದುದು ನೆನಪಿಗೆ ಬಂತು. ನೀವೇನಂತೀರಾ..

● ದಂಡಿನಶಿವರ ತಿಮ್ಮೇಗೌಡ, ತುರುವೇಕೆರೆ

ಲಂಕೇಶ್ ಮತ್ತು ಕಲಾವಿದ ಯೂಸುಫ್ ಅರಕ್ಕಲ್




ಇತ್ತೀಚೆಗೆ ಲಂಕೇಶರ 'ಬಿರುಕು' ಕಾದಂಬರಿಯನ್ನು ಮುದ್ರಣಕ್ಕೆ ಸಿದ್ಧಪಡಿಸುತ್ತಿರುವಾಗ ಮುಖಪುಟಕ್ಕೆ ಏನು ಹಾಕಿಕೊಳ್ಳುವುದೆಂದು ಚಿಂತಿಸುತ್ತಿದ್ದೆ. ಅಪ್ಪ ಅದೇ ಪುಸ್ತಕವನ್ನು 1996 ರಲ್ಲಿ ಎರಡನೆ ಬಾರಿ ಪ್ರಕಟಿಸಿದಾಗ ಖ್ಯಾತ ಕಲಾವಿದ ಯೂಸುಫ್ ಅರಕ್ಕಲ್ ಅವರ ಒಂದು ಪೈಂಟಿಂಗ್ ಅನ್ನು ಉಪಯೋಗಿಸಿದ್ದರು.



ಬಹಳ ವರ್ಷಗಳಿಂದ ಅರಕ್ಕಲ್ ಅವರೂ ನನ್ನ ಸ್ನೇಹಿತರಾಗಿರುವುದರಿಂದ ಅವರಿಗೆ ಫೋನ್ ಮಾಡಿ "ನಿಮ್ಮಿಂದು ಒಂದು ಉಪಕಾರ ಆಗಬೇಕು" ಅಂದೆ.

"ಹೇಳು ಗೌರಿ" ಅಂದರು ಅರಕ್ಕಲ್.

"ಅಪ್ಪನ ಒಂದು ಕಾದಂಬರಿಗೆ ನಿಮ್ಮ ಒಂದು ಕಲಾಕೃತಿಯನ್ನು ಉಪಯೋಗಿಸಿಕೊಳ್ಳಲಾಗಿತ್ತು. ಈಗ ಆ ಪುಸ್ತಕವನ್ನು ಮತ್ತೆ ಪ್ರಕಟಿಸುತ್ತಿದ್ದೇನೆ. ಅದೇ ಕಲಾಕೃತಿಯನ್ನು ಉಪಯೋಗಿಸಲು ಅನುಮತಿ ಕೊಡುತ್ತೀರಾ? ಆ ಕಲಾಕೃತಿ ಅಥವಾ ಅದರ ಚಿತ್ರ ನಿಮ್ಮ ಬಳಿ ಇದೆಯಾ?" ಎಂದು ಕೇಳಿದೆ.



"ಸಾರಿ ಗೌರಿ, ಆ ಕೃತಿ ಈಗ ನನ್ನಲ್ಲಿ ಇಲ್ಲ. ಆದರೆ ಲಂಕೇಶರ ಪುಸ್ತಕಗಳಿಗೆ ನನ್ನ ಯಾವ ಕಲಾಕೃತಿಯನ್ನಾದರೂ ಉಪಯೋಗಿಸಿಕೋ. ನನ್ನ ಅನುಮತಿಯ ಅಗತ್ಯವಿಲ್ಲ, ಬದಲಾಗಿ ಅವರ ಪುಸ್ತಕಗಳ ಮೇಲೆ ನನ್ನ ಕಲೆ ಇದೆ ಅನ್ನುವುದೇ ನನಗೆ ಹೆಮ್ಮೆಯ ವಿಷಯ" ಅಂದ ಅರಕ್ಕಲ್ ಮರುದಿನವೇ ತಮ್ಮ ಹಲವು ಕಲಾಕೃತಿಗಳ ಚಿತ್ರಗಳಿರುವ ಒಂದು ಅಂದದ ಪುಸ್ತಕವನ್ನು ಮತ್ತು ಒಂದು ಸೀಡಿಯನ್ನೂ ಕಳುಹಿಸಿದರು.

ಈಗ 'ಬಿರುಕು' ಕಾದಂಬರಿಯಲ್ಲದೆ, ಅಪ್ಪನ ನಾಟಕಗಳ ಎರಡು ಪುಸ್ತಗಳ ಮುಖಪುಟಕ್ಕೂ ಅರಕ್ಕಲ್ ಅವರ ಕಲಾಕೃತಿಗಳನ್ನೇ ಬಳಸಿದ್ದೇವೆ. ಅವು ತುಂಬಾ ಚೆನ್ನಾಗಿದೆ.

ಅರಕ್ಕಲ್ ಅವರಿಗೆ ಥ್ಯಾಂಕ್ಸ್!

● ಗೌರು

'ಆಪರೇಷನ್ ಗ್ರೀನ್‌ಹಂಟ್'ನ ಮೊದಲ ಬಲಿ

2

ಸೈನಿಕ ದಮನಕ್ಕೆ ಸಮಾಜದ ಮತ್ತು ಕಾನೂನಿನ ಬೆಂಬಲ ಪಡೆದುಕೊಂಡು ಬಿಡಬಹುದು. ಇದೇ ಮಾವೋವಾದಿ ಹೋರಾಟದ ದುರಂತ ಮತ್ತು ದೌರ್ಬಲ್ಯ ಸಹ. ಇಡೀ ದೇಶವನ್ನೇ ಕ್ರಾಂತಿಗೆ ಸಜ್ಜುಗೊಳಿಸುತ್ತೇವೆಂದು ಹೇಳುವ ಮಾವೋವಾದಿಗಳು ಛತ್ತೀಸ್‌ಘಡದ ಆದಿವಾಸಿಗಳ ವರ್ತುಲದ ಆಚೆ ದೇಶದ ಯಾವುದೇ ಜನಸಮುದಾಯದ ಮತ್ತು ಜನವರ್ಗಗಳ ನಡುವೆ ಬೇರುಬಿಡದೇ ಇರುವುದರಿಂದಲೇ ಸರ್ಕಾರ ಸುಲಭವಾಗಿ ಮಾವೋವಾದಿಗಳ ವಿರುದ್ಧ ಯುದ್ಧ ಸಾರಲು ಸಾಧ್ಯವಾಗಿದೆ. ಉಳಿದೆಲ್ಲಾ ರಾಜಕೀಯ ಪಕ್ಷಗಳು ಬಿಡಿಗಾಸಿಗಾಗಿ ಈ ದೇಶವನ್ನೇ ಹರಾಜು ಹಾಕುತ್ತಿರುವಾಗ ಮಾವೋವಾದಿ ಪಕ್ಷ ಈ ದೇಶವನ್ನು, ಈ ದೇಶದ ಸ್ವಾತಂತ್ರ್ಯವನ್ನು, ಜನರನ್ನು, ಜನತೆಯ ಘನತೆಯುಳ್ಳ ಬದುಕನ್ನೂ ಉಳಿಸಿಕೊಳ್ಳಲು ಪ್ರಾಣದ ಹಂಗುತೊರೆದು ಹೋರಾಡುತ್ತಿದ್ದರೂ ಅವರನ್ನು ಸರ್ಕಾರ ಸುಲಭವಾಗಿ 'ಭಯೋತ್ಪಾದಕ'ರೆಂದು ಕರೆದು ಸಮಾಜದ ಸಮ್ಮತಿ ಪಡೆದುಕೊಳ್ಳಲು ಸಾಧ್ಯವಾಗಿರುವುದು ಮಾವೋವಾದಿಗಳ ಈ ದೌರ್ಬಲ್ಯದಿಂದಲೇ. ಮತ್ತು ಆ ಕೊರತೆಯನ್ನು ಇಷ್ಟಾದರೂ ಅವರು ಗುರುತಿಸಲು ನಿರಾಕರಿಸುತ್ತಿರುವುದರಿಂದಲೇ.

ಮಾವೋವಾದಿಗಳ ಹೋರಾಟದ ಈ ದೌರ್ಬಲ್ಯವನ್ನು ಬಳಸಿಕೊಳ್ಳುತ್ತಿರುವ ಸರ್ಕಾರ ಮಾವೋವಾದಿಗಳ ಸಶಸ್ತ್ರ ಹೋರಾಟವನ್ನು ಮಾತ್ರವಲ್ಲ ಅವರ ಹೋರಾಟದ ಗುರಿ, ಆಶಯ, ಬಹುರಾಷ್ಟ್ರೀಯ ಕಂಪನಿಗಳ ಪ್ರತಿರೋಧ, ಆದಿವಾಸಿಗಳ ಸ್ವಾಯತ್ತತೆಯಂಥ ಎಲ್ಲಾ ಸಂವಿಧಾನಬದ್ಧ ಆಶಯಗಳನ್ನೂ ಸಹ 'ಭಯೋತ್ಪಾದಕ' ಕೃತ್ಯವೆಂದೇ ಬಣ್ಣಿಸುತ್ತಿದೆ. ಹಾಗೂ ಅಂಥ ಆಶಯಗಳಿಗೆ ಸಹಾನುಭೂತಿ ತೋರುವಂಥ ಮತ್ತು ಅಂಥ ಬೇಡಿಕೆಗಳಿಗಾಗಿ ಹೋರಾಡುತ್ತಿರುವಂಥ ನಕ್ಸಲರಲ್ಲದ ಇತರರನ್ನೂ ಭಯೋತ್ಪಾದಕರೆಂದೋ ಅಥವಾ ನಕ್ಸಲರ ಬೆಂಬಲಿಗರೆಂದೋ ಪ್ರಚಾರ ಮಾಡುತ್ತಿದೆ. ಇದರೊಡನೆ ನಕ್ಸಲರ ದಮನ ಮಾಡಲು ಮತ್ತು ಆದಿವಾಸಿಗಳನ್ನು ಎತ್ತಂಗಡಿ ಮಾಡಲು ಸರ್ಕಾರ ಬಳಸುತ್ತಿರುವ ಎಲ್ಲಾ ಸಂವಿಧಾನಬಾಹಿರ ಮತ್ತು ಕಾನೂನುಬಾಹಿರ ಕತ್ತಗಳನ್ನು ವಿರೋಧಿಸುವವರನ್ನು ಸಹ ಅದು ನಕ್ಸಲ್ ಬೆಂಬಲಿಗರೆಂದೇ ಒತ್ತಿ ದಮನಿಸುವ ಹುನ್ನಾರವನ್ನು ಹೂಡಿದೆ.

ಹೀಗಾಗಿಯೇ 'ಆಪರೇಷನ್ ಗ್ರೀನ್‌ಹಂಟ್' ಮಾವೋವಾದಿಗಳ ದಮನಕ್ಕೆ ನಡೆಸಲಾಗುತ್ತಿರುವ 'ಹಂಟ್' ಅಲ್ಲವೇ ಅಲ್ಲ. ಅದು ಈ ದೇಶದ ಪ್ರಜಾಸತ್ತೆಯ 'ಹಂಟ್' ಆಗಿದೆ. ಬಹುರಾಷ್ಟ್ರೀಯ ಕಂಪನಿಗಳ ಲೂಟಿಗೆ ಮತ್ತು ಅದಕ್ಕೆ ಅನುವು ಮಾಡಿಕೊಡುತ್ತಿರುವ ಸರ್ಕಾರದ ನೀತಿಗಳ ವಿರುದ್ಧ ನಿಲ್ಲುವ ಎಲ್ಲಾ ಪ್ರತಿರೋಧಗಳ 'ಹಂಟ್' ಆಗಿದೆ. ಭಾರತದ ಆಳುವವರ್ಗಗಳು ಯಾವ ಲೂಟಿಯನ್ನು ಮತ್ತು ದಮನವನ್ನು ಕಾನೂನುಬದ್ಧವಾಗಿ ಮತ್ತು ಸಂವಿಧಾನ ಬದ್ಧವಾಗಿ ಮಾಡಲಾಗುವುದಿಲ್ಲವೋ ಅದನ್ನು ಯಾವುದೇ ಹಿಂಜರಿಕೆಯಿಲ್ಲದೆ ಮಾಡಲು ಅನುವು ಮಾಡಿಕೊಡುವುದೇ 'ಆಪರೇಷನ್ ಗ್ರೀನ್‌ಹಂಟ್' ಆಗಿದೆ.

ಈ 'ಹಂಟ'ನ್ - ಬೇಟೆಯ- ಮೊದಲ ಬಲಿ ಗಾಂಧೀವಾದಿ ಪ್ರತಿರೋಧ. ಅದರ ಅಭಿವ್ಯಕ್ತಿಯೇ ಹಿಮಾಂಶುಕುಮಾರ್‌ರಂಥವರ ನಿರುಪದ್ರವಿ ಪ್ರತಿರೋಧವೂ ನಡೆಯದಂತಾಗಿರುವುದು. ಹಿಮಾಂಶುಕುಮಾರ್‌ರವರು ಆದಿವಾಸಿಗಳ ಎತ್ತಂಗಡಿ ಮತ್ತು ಪೊಲೀಸ್ ದೌರ್ಜನ್ಯದ ವಿರುದ್ಧ ಛತ್ತೀಸ್‌ಘಡದಲ್ಲಿ ಒಂದು ಪಾದಯಾತ್ರೆಯನ್ನು, ಧರಣಿ ಸತ್ಯಾಗ್ರಹವನ್ನು ಮತ್ತು ಅಂತಿಮವಾಗಿ ದೇಶದ ಗೃಹಮಂತ್ರಿಯ ಎದುರು ಒಂದು ಸಾರ್ವಜನಿಕ ವಿಚಾರಣೆಯನ್ನು ನಡೆಸಬಯಸಿದ್ದರು. ಇದನ್ನು ಯಾವ ಸರ್ಕಾರಿ ಭಾಷೆಯಲ್ಲೂ ಭಯೋತ್ಪಾದನೆಯೆನ್ನಲು ಸಾಧ್ಯವಿರಲಿಲ್ಲ. ಆದರೆ ಹಿಮಾಂಶು ಅದನ್ನು ನಡೆಸ



ಲಾಗದಷ್ಟು ಭಯೋತ್ಪಾದನೆಯನ್ನು ಸರ್ಕಾರ ಮಾಡಿತು. ಪಾದಯಾತ್ರೆ ಪ್ರಾರಂಭವಾಗುವ ಕೆಲದಿನಗಳ ಮೊದಲು ಹಿಮಾಂಶು ಅವರ ಆಪ್ತ ಸಹಾಯಕ ಕೋಪಾ ಅವರನ್ನು ಭಯೋತ್ಪಾದನೆಯ ಕಾಯಿದೆಯಡಿ ಬಂಧಿಸಲಾಯಿತು. ಇನ್ನೊಬ್ಬ ಕಾರ್ಯಕರ್ತರನ್ನು ಕಿಡ್ನ್ಯಾಪ್ ಮಾಡಿ ಚಿತ್ರಹಿಂಸೆಗೆ ಗುರಿ ಮಾಡಲಾಯಿತು. ಪಾದಯಾತ್ರೆಗೆ, ಧರಣಿಗೆ ಮತ್ತು ಸಾರ್ವಜನಿಕ ವಿಚಾರಣೆಗೆ ಅನುಮತಿ ನಿರಾಕರಿಸಿ ಎಲ್ಲೆಲ್ಲೂ ಪೊಲೀಸರನ್ನು ನಿಯೋಜಿಸಲಾಯಿತು. ಹೊರಗಿನಿಂದ ಬೆಂಬಲ ಸೂಚಿಸಲು ಬಂದಿದ್ದ ಮಾನವ ಹಕ್ಕು ಕಾರ್ಯಕರ್ತರು ತಮ್ಮ ವಾಹನ ಬಿಟ್ಟು ಇಳಿಯದಂತೆ ವಾಪಸ್ ಕಳಿಸಲಾಯಿತು. ಕೊನೆಗೆ 'ಆಪರೇಷನ್ ಗ್ರೀನ್‌ಹಂಟ್'ನ ಜರೂರಿ ಎಂಬ ಹೆಸರಲ್ಲಿ ಹೆಸರಾಂತ ಪತ್ರಿಕೆಗಳ ಪತ್ರಕರ್ತರಿಗೂ ಪ್ರವೇಶವನ್ನು ನಿಷೇಧಿಸಲಾಯಿತು. ಇದನ್ನೆಲ್ಲಾ ವಿರೋಧಿಸಿ ಹಿಮಾಂಶು ತಮ್ಮ ಮನೆಯಲ್ಲೇ ಉಪವಾಸ ಸತ್ಯಾಗ್ರಹ ಕೂತರು. ಅವರ ಉಪವಾಸ ಸತ್ಯಾಗ್ರಹ ಎಂಟನೇ ದಿನಕ್ಕೆ ಕಾಲಿರಿಸುವಾಗ ಕಳೆದ ನವಂಬರ್‌ನಲ್ಲಿ ಪೊಲೀಸರು ಸುಳ್ಳು ಎನ್‌ಕೌಂಟರ್ ನಡೆಸಿ ಏಳು ಜನ ಆದಿವಾಸಿಗಳನ್ನು ಕೊಂದಿದ್ದ ಕೃತ್ಯಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ಗಾಯಗೊಂಡಿದ್ದ ಸೋಡಿ ಎಂಬಾಕೆಯನ್ನು ಪೊಲೀಸರು ಹೆಚ್ಚಿನ ಚಿಕಿತ್ಸೆಗೆ ದೆಹಲಿಗೆ ಹೋಗದಂತೆ ಬಂಧಿಸಿರುವ ಸುದ್ದಿ ಬಂತು. ಆಗ ಹಿಮಾಂಶುರವರೇ ಖುದ್ದಾಗಿ ಆಕೆಯನ್ನು ರಾಯಪುರಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಆಕೆಯನ್ನು ಬಂಧಿಸಿ ನಂತರ ಆಕೆಯಿಂದ ಹಿಮಾಂಶುರವರೇ ಪೊಲೀಸರ ವಿರುದ್ಧ ಹೇಳಿಕೆಯನ್ನು ಕೊಡಲು ಒತ್ತಾಯಿಸಿದರೆಂಬ ಹೇಳಿಕೆಯನ್ನು ಪಡೆಯಲಾಯಿತು. ಹಿಮಾಂಶು ಸಹಾಯಕ್ಕೆ ಬಂದಿದ್ದ ಮೇಧಾ ಪಾಟ್ಕರ್‌ರಂಥ ದೇಶದ ಇನ್ನಿತರ ಮಾನವಹಕ್ಕು ಕಾರ್ಯಕರ್ತರ ಮೇಲೆ ಸಾಲ್ವಾ ಜುಡುಂ ಪಡೆ ಹಲ್ಲೆ ಮಾಡಿತು.

ಒಟ್ಟಿನಲ್ಲಿ 'ಆಪರೇಷನ್ ಗ್ರೀನ್‌ಹಂಟ್' ಹೆಸರಲ್ಲಿ ಹಿಮಾಂಶುಕುಮಾರ್‌ರಂಥ ಗಾಂಧೀವಾದಿಯೂ ಛತ್ತೀಸ್‌ಘಡ್‌ನಲ್ಲಿ ಇರಲು, ಧರಣಿ, ಉಪವಾಸ ಸತ್ಯಾಗ್ರಹವನ್ನು ಮತ್ತು ಸರ್ಕಾರದೊಂದಿಗೆ ಸಂವಾದವನ್ನೂ ನಡೆಸದಂಥ ಪರಿಸ್ಥಿತಿಯನ್ನು ಸೃಷ್ಟಿಸಿತು. ಈಗ ಗಾಂಧೀವಾದಿ ಅಕ್ಷರಶಃ ದೇಶಭ್ರಷ್ಟರಾಗಿ ದೇಶಾಟನೆ ಮಾಡಬೇಕಾಗಿದೆ!


ಇದು ಒಂದು ಫ್ಯಾಸಿಸ್ಟ್ ಸರ್ಕಾರದ ವಿರುದ್ಧ ಗಾಂಧೀವಾದಿ ಪ್ರತಿರೋಧದ ಮಿತಿಯೂ ಹೌದು. ಸರ್ಕಾರ ಪ್ರಜಾಸತ್ತಾತ್ಮಕವಾಗಿ ನಡೆದುಕೊಳ್ಳುವಾಗ ಖಂಡಿತಾ ಒಂದು ಧರಣಿಯೂ ನಾಗರಿಕ ಅಸಮ್ಮತಿ ಅಥವಾ ಅಸಹಕಾರದ ಅಭಿವ್ಯಕ್ತಿಯಾಗುತ್ತದೆ. ನಿಜಕ್ಕೂ ಪ್ರಜಾಸತ್ತಾತ್ಮಕವಾಗಿ ನಡೆದುಕೊಳ್ಳುವ ಸರ್ಕಾರಕ್ಕೆ ಇಷ್ಟೇ ಸಾಕು. ಆದರೆ ಯಾವ ಸರ್ಕಾರಕ್ಕೆ ಪ್ರಜಾತಾಂತ್ರಿಕತೆ ಎನ್ನುವುದು ತನ್ನ ಫ್ಯಾಸಿಸ್ಟ್ ಮತ್ತು ಕಾರ್ಪೊರೇಟ್ ಆಡಳಿತಕ್ಕೆ ಕೇವಲ ಮುಸುಕು ಮಾತ್ರ ಆಗಿರುತ್ತದೋ ಅಂಥ ಸರ್ಕಾರದ ಎದುರು ಗಾಂಧಿವಾದಿ ಪ್ರತಿರೋಧದಂತ ಸಾಂಕೇತಿಕ ಪ್ರತಿಭಟನೆಗಳು ಯಾವುದೇ ಪರಿಣಾಮ ಬೀರುವುದಿಲ್ಲ. ಅಂಥಾ ಪ್ರತಿಭಟನೆಗಳನ್ನು ಸರ್ಕಾರ ತಾನಿನ್ನೂ ಪ್ರಜಾತಂತ್ರವಾದಿ ಎಂದು ತೋರಿಸಿಕೊಳ್ಳಲು ಬಿಟ್ಟುಕೊಂಡಿರುತ್ತದೆ. ಆದರೆ ಅದು ಮೂಲಭೂತ ಪ್ರಶ್ನೆಗಳ ಎತ್ತಲು ಪ್ರಾರಂಭಿಸಿದರೆ ಕೂಡಲೇ ಹತ್ತಿಕ್ಕುತ್ತದೆ.

ಒಂದು ಫ್ಯಾಸಿಸ್ಟ್ ಪ್ರಭುತ್ವವನ್ನು ಮಣಿಸಲು ಔದಾರ್ಯ ಮತ್ತು ಸಹಾನುಭೂತಿ, ದೂರದ ಕಾಳಜಿ ಇವುಗಳಿಂದ ಪ್ರೇರಿತವಾದ ಪ್ರತಿರೋಧಗಳಿಗೆ ಸಾಧ್ಯವಿಲ್ಲ. ಬಾಧಿತ ಜನರ ಸಮರಶೀಲ ಸಾಮೂಹಿಕ ಹೋರಾಟ ಬೀದಿಗಳನ್ನು, ಗಲ್ಲಿಗಳನ್ನು ವ್ಯಾಪಿಸಿಕೊಂಡಾಗ ರಾಜಧಾನಿಯಲ್ಲಿ ನಡೆಯುವ ಸೌಹಾರ್ದ ಕ್ಯಾಂಡಲ್ ಲೈಟ್ ವಿಜಿಲ್‌ಗಳೂ ಅರ್ಥಪಡೆದುಕೊಳ್ಳುತ್ತವೆ. ಅಂಥ ಬಾಧಿತಜನರ ಸಾಮೂಹಿಕ ಹೋರಾಟ ಕಟ್ಟುವ ಶಕ್ತಿ ಹಿಮಾಂಶುಕುಮಾರ್‌ಗೂ ಇಲ್ಲ, ಅಥವಾ ಅವರ ಬೆಂಬಲಕ್ಕೆ ನಿಂತಿರುವ ಸಾಮಾಜಿಕ ಕಳಕಳಿಯುಳ್ಳ ಮಧ್ಯಮವರ್ಗದ ವ್ಯಕ್ತಿಗಳಿಗೂ ಅಥವಾ ಅವರು ಕಟ್ಟಬಯಸುವ ನೆಟ್‌ವರ್ಕ್‌ಗಳಿಗೂ ಇಲ್ಲ. ಸಾಮೂಹಿಕ ಪ್ರತಿರೋಧ, ಸಾಮೂಹಿಕ ಸಂಘಟನೆ ಇವುಗಳನ್ನು ಕಟ್ಟಬಲ್ಲ ಶಕ್ತಿ ಇದ್ದದ್ದು ಆ ಆದಿವಾಸಿಗಳನ್ನು ಸಂಘಟಿಸುತ್ತಿರುವ ಮಾವೋವಾದಿಗಳಿಗೇ! ಆದರೆ ಅವರಿಗೆ ಸಾಮೂಹಿಕ ಹೋರಾಟಕ್ಕಿಂತ ಅವರ ಶಸ್ತ್ರಬಲದಲ್ಲೇ ಹೆಚ್ಚು ನಂಬಿಕೆ! ಹೀಗಾಗಿ 'ಗ್ರೀನ್‌ಹಂಟ್' ಎಂಬ ಜನತೆಯ ಬೇಟೆಯನ್ನು ತಡೆಗಟ್ಟುವುದು ಅಷ್ಟು ಸುಲಭದ ಕೆಲಸವಲ್ಲ! ●

...ಫಿವುಲ್ಲಾ ಕೊಲೆ ಹಿಂದೆ ಜಫ್ರುಲ್ಲಾ ಖಾನ್?

ಮಂಡ್ಯದಲ್ಲಿ ಮೊನ್ನೆ ನಡೆದ ರಫಿವುಲ್ಲಾ ಎಂಬಾತನ ಕೊಲೆಯನ್ನು ...ತ ಜಗತ್ತಿನ ಕೊಲೆ ಎನ್ನುವುದಕ್ಕಿಂತಲೂ ಮಂಡ್ಯದ ಮುಸ್ಲಿಂ ಜಗತ್ತಿನ ...ರಿಗಿರಿ ಮತ್ತು ಹಣದ ಮದದ ತಿಕ್ಕಾಟದ ಪರಿಣಾಮ ಎಂದು ...ವುದೇ ಸೂಕ್ತ. ಪುಢಾರಿಗಿರಿ ಮತ್ತು ಹಣದ ಮದದ ಸಾಕಾರರೂಪ ...ದುವ ಜಫ್ರುಲ್ಲಾ ಖಾನ್ ಈ ಕೊಲೆಯ ಹಿಂದಿನ ಪ್ರಮುಖ ಆರೋಪಿ ...ದ್ದಾನೆ. ಜಫ್ರುಲ್ಲಾ ಖಾನ್‌ನ ಸಕಲ ಗುಣಗಳನ್ನು ಕರಗತ ಮಾಡಿಕೊಂಡಿರದ ...ಲ್ಲಾ ಕೊಲೆಯಾಗಿದ್ದಾನೆ.

ಮಂಡ್ಯದ ಮುಸ್ಲಿಂರೊಳಗೆ ಅಪಾರ ತಲ್ಲಣವನ್ನೂ, ಇತರ ವಲಯಗಳಲ್ಲಿ ...ರ ಕುತೂಹಲವನ್ನೂ ಈ ಕೊಲೆ ಉಂಟುಮಾಡಿದೆ. ಬಡ ಮತ್ತು ...ಾಯಕ ಮುಸ್ಲಿಮರ ಓಟ್‌ಬ್ಯಾಂಕ್ ಮತ್ತು ಶ್ರೀಮಂತ ಮುಸ್ಲಿಮರ ... ಎರಡಕ್ಕೂ ನಾಲಿಗೆ ಚಾಚಿ ನಿಂತಿರುವ ರಾಜಕಾರಣಿಗಳು, ತಮ್ಮ ನೀಚ ...ಾರಣದಿಂದಲೇ ಈ ಕೊಲೆ ನಡೆದಿದೆ ಎಂದು ಯೋಚಿಸುತ್ತಿಲ್ಲ, ಬದಲಿಗೆ ...್ಯದಲ್ಲಿ ವರ್ಷಕ್ಕೊಂದು-ಎರಡರಂತೆ ಬೀಳುತ್ತಿರುವ ಹೆಣಗಳ ಸಾಲಿನಲ್ಲಿ ...ಂದು ಗೋರಿ ಅಷ್ಟೇ ಎಂದು ಮುಖ ತಿರುಗಿಸಿ ಕೂತಿದ್ದಾರೆ. ... ಕೊಲೆ ಕೇಸಿನಲ್ಲಿ ಸಾಕಷ್ಟು ಕಮಾಯಿ ಮಾಡಿಕೊಳ್ಳುವ ...ೇಸರಿಗೆ ಇದು ಹೇಳಿಮಾಡಿಸಿದ ಅವಕಾಶದಂತಿದೆ.



...ಕೆಂದರೆ ಕೊಲೆಯ ಒಂದು ತುದಿಯಲ್ಲಿ ದುಬೈನ ಹಡಬೇ ...ನಲ್ಲಿ ಮಾಡಬಾರದ್ದನ್ನೆಲ್ಲಾ ಮಾಡುತ್ತಿರುವ ಗಾಂಧಿನಗರ 6ನೇ ...ರ ಜಫ್ರುಲ್ಲಾ ಖಾನ್ ಇದ್ದಾನೆ. ಇನ್ನೊಂದು ತುದಿಯಲ್ಲಿ ... ಗಾಂಧಿನಗರ 3ನೇ ಕ್ರಾಸ್‌ನ ರಫಿವುಲ್ಲಾ ಹೆಣವಾಗಿದ್ದಾರೆ. ...ೂ ಎಲ್ಲಾ ಪಕ್ಷಗಳಿಗೂ ಸಲ್ಲುವ ಆಸಾಮಿಗಳೇ. ಈ ಹಿಂದೆ ...ಜಾ ರವಿಯದ್ದೂ ಸೇರಿದಂತೆ ಬೇರೆ ಕೊಲೆ ಕೇಸುಗಳಲ್ಲೂ ...ಲ್ಲಾ ಹೆಸರು ಕೇಳಿಬಂದಿತ್ತಾದರೂ, ಈ ಬಾರಿ ಆತನೇ ...ಐಆರ್‌ನಲ್ಲಿ ಆರೋಪಿ ನಂಬರ್ ಒನ್ ಸ್ಥಾನದಲ್ಲಿದ್ದಾನೆ.

...ನವರಿ 18ರಂದು ಅಂಬೇಡ್ಕರ್ ವೃತ್ತದ ಸಮೀಪದ ಕನ್ನಿಕಾ ಪರಮೇಶ್ವರಿ ...ಸ್ಥಾನದ ಹತ್ತಿರ ಈ ರಕ್ತದೋಕುಳಿ ನಡೆಯಿತು. ರಫಿವುಲ್ಲಾ ತನ್ನ ...ಆರ್.ಟ್ರೇಡರ್ಸ್‌ನಲ್ಲಿ ಕೂತಿದ್ದಾಗ ಅಲ್ಲಿಗೆ ಬೈಕ್‌ಗಳಲ್ಲಿ ಬಂದ ನಾಲ್ವರು ... ಲಾಂಗ್‌ಗಳಿಂದ ಆತನನ್ನು ಕೊಚ್ಚಿ ಕೊಲೆಗೈದರು. ಕೊಲೆಗಡುಕರು ...ಹಳ್ಳಿ ರಸ್ತೆಯಲ್ಲಿ ಅದೇ ಗಾಡಿಗಳಲ್ಲಿ ತಪ್ಪಿಸಿಕೊಂಡರು. ಆದರೆ ಕೊಲೆ ... ಸ್ಥಳದ ಹತ್ತಿರದಲ್ಲೇ ಇದ್ದ ಪೊಲೀಸರೊಬ್ಬರ ಮಾಹಿತಿಯ ಆಧಾರದ ... ಫಾಲೋ ಮಾಡಿ ಅವರನ್ನು ಒಂದು ಗಂಟೆಯ ಒಳಗೇ ...ಲಾಯಿತು. ಸಿಕ್ಕಿ ಬಿದ್ದವರಾದರೂ ಯಾರೆಂದು ನೋಡಿದರೆ ಮಂಡ್ಯ ...ಭೆಯ ಹಾಲಿ ಸದಸ್ಯ ಅಫ್ರೋಜ್‌ನ ತಮ್ಮ ಫಿರ್ದೋಸ್, ಮುತೀಬ್ ... ಇರ್ಷಾದ್. ಎಲ್ಲರೂ ಜಫ್ರುಲ್ಲಾ ಖಾನ್‌ನ ಸಹಚರರೇ. ಅಫ್ರೋಜ್‌ಗೆ ...ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ಕೊಡಿಸಿದ್ದು ಚುನಾವಣೆಗೆ ಫೈನಾನ್ಸ್ ...ದ್ದು ಎಲ್ಲವೂ ಜಫ್ರುಲ್ಲಾನೇ.

...ಫಿವುಲ್ಲಾ ಅಣ್ಣ ಸಲೀಂಉಲ್ಲಾ ಸಹ ತನ್ನ ಕಂಪ್ಲೇಂಟ್‌ನಲ್ಲಿ ನೇರವಾಗಿ ...ಲ್ಲಾ ಮೇಲೆ ಆರೋಪ ಮಾಡಿದ್ದರಿಂದ ಆತನೇ ಈಗ ಮೊದಲ ...ಪಿಯಾಗಿದ್ದಾನೆ. ಇವರೀರ್ವರ ನಡುವಿನ ದ್ವೇಷಕ್ಕೂ ಸಾಕಷ್ಟು ಇತಿಹಾಸವಿದೆ. ...ನೇ ಇಸವಿಯಲ್ಲೇ ರಫಿವುಲ್ಲಾ ಕುಟುಂಬವು ತಮಗೆ ಜಫ್ರುಲ್ಲಾ ಕಡೆಯಿಂದ ...ದರಿಕೆಯಿದೆ ಎಂದು ಗೃಹ ಮಂತ್ರಿಯವರೆಗೂ ದೂರು ಬರೆದುಕೊಟ್ಟಿತ್ತು.

ಈ ರಫಿವುಲ್ಲಾ ಯಾರು?

...ಂಡ್ಯದ ಗಾಂಧಿನಗರದ 3ನೇ ತಿರುವಿನಲ್ಲಿರುವ ರಸೂಲ್‌ರ 3ನೇ ... ರಫಿವುಲ್ಲಾ. ಮೊದಲನೆಯ ಮಗ ನಜೀರ್ ಮಂಡ್ಯದಲ್ಲಿ ತಾಲ್ಲೂಕು ... ಕಲ್ಯಾಣಾಧಿಕಾರಿ. ಮತ್ತೊಬ್ಬ ಸಲೀಂಉಲ್ಲಾ. ಈತ ಜೆಡಿಎಸ್‌ನ ಅಲ್ಪಸಂಖ್ಯಾತ ಘಟಕದ ಜಿಲ್ಲಾ ಅಧ್ಯಕ್ಷ. ರಫಿಉಲ್ಲಾ ಅಕ್ಕಿ ಬಿಸಿನೆಸ್ ಮಾಡುತ್ತಿದ್ದ. ಜೊತೆಗೆ ಸಣ್ಣದಾಗಿ ರಿಯಲ್ ಎಸ್ಟೇಟ್‌ನ್ನೂ ಶುರುಮಾಡಿದ್ದ. ಪುಢಾರಿಗಿರಿಯಲ್ಲಿ ಅಣ್ಣನನ್ನೇ ಮೀರಿಸುವ ಮಟ್ಟಕ್ಕೆ ರಫಿವುಲ್ಲಾ ಕೆಲಸ ಮಾಡುತ್ತಿದ್ದ. ತನ್ನ ಹತ್ತಿರ ಬರುತ್ತಿದ್ದ ಜನರಿಗೆ ನಗರಸಭೆ, ಪೊಲೀಸ್ ಸ್ಟೇಷನ್‌ಗಳಲ್ಲಿನ ಕೆಲಸ ಮಾಡಿಸುವುದರಲ್ಲಿ ಈತ ನಿಸ್ಸೀಮ. ವರ್ಷಕ್ಕೊಂದು ಪಕ್ಷವನ್ನು ಬದಲಾಯಿಸುವುದು ಸಹ ಈತನ ಚಾಳಿಯಾಗಿತ್ತು. ತನ್ನ ಅಣ್ಣನನ್ನ ಹೇಗಾದರೂ ಮಾಡಿ ಕೌನ್ಸಿಲರ್ ಆಗಿ ಮಾಡಬೇಕೆಂಬ ಆಸೆಯನ್ನಿಟ್ಟುಕೊಂಡೇ ಕೆಲಸ ಮಾಡುತ್ತಿದ್ದ ರಫಿವುಲ್ಲಾನಿಗೆ ಅಡ್ಡಗಾಲು ಹಾಕಿದ್ದು ಜಫ್ರುಲ್ಲಾ.

ಎಲ್ಲಾ ಪಕ್ಷಗಳ ಜಿಲ್ಲಾ ನಾಯಕರುಗಳಿಗೂ ಬಿಸ್ಕೆಟ್ ಹಾಕಿ ನಗರಸಭೆಯ ಮೇಲೆ ಹಿಡಿತ ಸಾಧಿಸುವುದರಲ್ಲಿ ಈ ದುಬೈವಾಲಾ ಚಾಣಾಕ್ಷ. ಕಳೆದ ಚುನಾವಣೆಯಲ್ಲಿ ಕೆಲವರಿಗೆ ಜೆಡಿಎಸ್‌ನಿಂದ, ಕೆಲವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಕೊಡಿಸಿದ್ದ. 12ನೇ ವಾರ್ಡ್‌ನಿಂದ ಅಫ್ರೋಜ್‌ಗೆ ಕಾಂಗ್ರೆಸ್‌ನಿಂದ ಬಿ ಫಾರಂ ಸಿಗಲು ಜಫ್ರುಲ್ಲಾನೇ ಕಾರಣ. ರಫಿವುಲ್ಲಾ ತನ್ನ ಅಣ್ಣಾ ಸಲೀಂಉಲ್ಲಾನಿಗೆ ಕಳೆದ ನಗರಸಭೆ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ತರಲು ದೇವೇಗೌಡರ ತನಕ ಹೋಗಿಬಂದಿದ್ದ ಎಂಬ ವದಂತಿಗಳಿವೆ. ಆದರೆ ತಾನು ಮಾತ್ರ ಕಾಂಗ್ರೆಸ್ ಕನೆಕ್ಷನ್ ಕಡಿದುಕೊಂಡಿರಲಿಲ್ಲ. ಇದೆಲ್ಲವೂ ಜಫ್ರುಲ್ಲಾಗೆ ಉರಿ ತರಿಸಿತ್ತು. ಸಾಕಷ್ಟು ಹಣ ಸುರಿದು ತನ್ನ ಚೇಲಾ ಅಫ್ರೋಜ್‌ನನ್ನ ಜಫ್ರುಲ್ಲಾ ಗೆಲ್ಲಿಸಿಕೊಂಡಿದ್ದ.


ಜಫ್ರುಲ್ಲಾಗೆ ಕಂಟಕನಾಗಿದ್ದ!

ಜಫ್ರುಲ್ಲಾ ಅಪರಾವತಾರಗಳನ್ನೆಲ್ಲಾ ಕಂಡಿದ್ದ ರಫೀವುಲ್ಲಾ ಆತನಿಗೆ ತೊಂದರೆ ಕೊಡಲು ಶುರು ಮಾಡಿದ. ಗಾಂಧಿನಗರ 6ನೇ ಕ್ರಾಸ್‌ನಲ್ಲಿರುವ ಜಫ್ರುಲ್ಲಾ ತನ್ನ ಮನೆಯ ಸುತ್ತ ಇರುವ ತಕರಾರು ಸೈಟುಗಳವರನ್ನು ಅಲ್ಲಿಂದ ಕಳಿಸಿ ಆ ಜಾಗವನ್ನು ಹೊಡೆಯುವ ಹುನ್ನಾರ ನಡೆಸಿದ್ದ. ಆ ಸೈಟುಗಳ ಓನರ್‌ಗಳನ್ನು ಸಂಪರ್ಕಿಸಿದ ರಫಿವುಲ್ಲಾ, ನಗರಸಭೆ ಹೆಸರಿನಲ್ಲಿ ಜಾಗ ಇರುವುದನ್ನು ಪತ್ತೆ ಹಚ್ಚಿ "ಯಾವ ಕಾರಣಕ್ಕೂ ಇಲ್ಲಿಂದ ಹೋಗಬೇಡಿ, ಜಾಗ ನಿಮಗೇ ಆಗುತ್ತದೆ. ನಿಮ್ಮ ಜೊತೆ ನಾನಿದ್ದೇನೆ" ಎಂದು ಭರವಸೆ ತುಂಬಿದ್ದ. ಅದೇ ರೀತಿಯಲ್ಲಿ ನೂರಡಿ ರಸ್ತೆಯ ಹೆಸರುವಾಸಿ ಕರ್ನಾಟಕ ಬಾರ್ ಬಿಲ್ಡಿಂಗ್ ವಿಚಾರದಲ್ಲೂ ಇಬ್ಬರಿಗೆ ಮುಖಾಮುಖಿ ನಡೆದಿತ್ತು.

ಅಫ್ರೋಜ್ ಕುಟುಂಬಕ್ಕೆ ಸೇರಿದ್ದ ಈ ಬಿಲ್ಡಿಂಗ್‌ಅನ್ನು ಜಫ್ರುಲ್ಲಾನೇ ಕೊಂಡುಕೊಂಡಿದ್ದ. ಅದೇ ಬಿಲ್ಡಿಂಗ್‌ನಲ್ಲೇ ಸ್ಟಾರ್ ಡ್ರಗ್‌ಹೌಸ್ ಎಂಬ ಮೆಡಿಕಲ್ ಸ್ಟೋರ್ ಇದೆ. ಅದು ರಫಿವುಲ್ಲಾನ ತಮ್ಮನದ್ದು. ಬೇರೆ ಎಲ್ಲಾ ಅಂಗಡಿಗಳನ್ನು ಖಾಲಿ ಮಾಡಿಸಿದರೂ ಡ್ರಗ್‌ಹೌಸ್ ಮಾತ್ರ ಖಾಲಿ ಮಾಡಲಿಲ್ಲ. ಇವೆಲ್ಲವೂ ಸೇರಿ ಎರಡೂ ಕುಟುಂಬಗಳ ನಡುವೆ ಜಿದ್ದಾ ಜಿದ್ದಿ ಬೆಳೆಯಿತು.

ಈ ಜಫ್ರುಲ್ಲಾ ಖಾನ್ ದುಬೈ ಕನ್ನಡ ಸಂಘದ ಸ್ವಘೋಷಿತ ಅಧ್ಯಕ್ಷ. ಇದು ದುಬೈನಲ್ಲಿರುವ ಅಧಿಕೃತ ಕನ್ನಡ ಸಂಘ ಎಂದು ನೀವು ತಪ್ಪು ತಿಳಿಯಬಾರದು. ಇದು ಕೇವಲ ಈತನ ಲೆಟರ್‌ಹೆಡ್‌ನಲ್ಲಿ ಮಾತ್ರ ಅಸ್ತಿತ್ವದಲ್ಲಿದೆ. ಮಂಡ್ಯದಲ್ಲಿ ಆಗಾಗ ಫ್ಲೆಕ್ಸ್‌ಗಳಲ್ಲಿ ಈತನ ಆಳೆತ್ತರದ ಫೋಟೋ ರಾರಾಜಿಸುತ್ತದೆ. ಜಫ್ರುಲ್ಲಾ ಖಾನ್ ಅಭಿಮಾನಿಗಳ ಸಂಘವೆಂಬ ಬೋರ್ಡ್, ಕಚೇರಿಗಳೂ ಕಣ್ಣಿಗೆ ಬೀಳುತ್ತವೆ. ಎಲ್ಲಕ್ಕೂ ಕಾರಣ ಒಂದೇ. ಅದು ಹಡಬೇ ದುಡ್ಡು. ದುಬೈನಲ್ಲಿ ಈತ ಹೋಟೆಲ್‌ಗಳನ್ನು ನಡೆಸುತ್ತಾನೆ ಎಂದು ಹೇಳಲಾಗುತ್ತದೆಯಾದರೂ ಈತನ ಆದಾಯದ ಮೂಲಗಳ ಬಗ್ಗೆ ಅನುಮಾನಗಳಿವೆ.

ಅಷ್ಟೇ ಅಲ್ಲದೆ, ನಗರಸಭೆಯ ಮೇಲೆ ಹಿಡಿತ ಸಾಧಿಸಲು ಈತ ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ. ದಶಕಗಳ ಕಾಲ ಮಂಡ್ಯ ನಗರಸಭೆಯ ಮೇಲೆ ಹಿಡಿತ



ಸಾಧಿಸಿದ್ದ ಆತ್ಮಾನಂದ ಫ್ಯಾಮಿಲಿಯ ವಿರುದ್ಧ ಗುದ್ದಾಡಲು ಯಾರಿಗೂ ಧೈರ್ಯವಿರದಿದ್ದ ಕಾಲದಲ್ಲಿ ಈತನ ತನ್ನ ಹಣದ ಮದದಿಂದಲೇ ಧೈರ್ಯಮಾಡಿದ್ದ ವಿಜಯಲಕ್ಷ್ಮಿ ರಘುನಂದನ್‌ರನ್ನು ಅಧ್ಯಕ್ಷೆ ಮಾಡುವುದರಲ್ಲಿ ಜಫ್ರುಲ್ಲಾನ ನೇರ ಕೈವಾಡವಿತ್ತು. ಯಾವ ಒಂದು ಪಕ್ಷಕ್ಕೂ ನಿಷ್ಠನಾಗಿರದ ಜಫ್ರುಲ್ಲಾ ಎಲ್ಲಾ ಕಡೆ ತಲೆ ತೂರಿಸುತ್ತಾ ಅತ್ಯಂತ ಪ್ರಭಾವಿಯಾಗಿ ಬೆಳೆದ.

ಆದರೆ ತನ್ನ ಸಮುದಾಯದ ಮೇಲೆ ಆತನಿಗೆ ಹಿಡಿತ ಎಂದೂ ಸಿಕ್ಕಿರಲಿಲ್ಲ. ಒಂದೆಡೆ ಬಿಜೆಪಿಯ ಎಂಎಲ್‌ಎ ಕ್ಯಾಂಡಿಡೇಟ್ ಆಗಿದ್ದ ಅಬ್ಬಾಸ್ ಅಲಿ ಬೋಹ್ರಾ ಒಂದಷ್ಟು ಜನರನ್ನು ಹಿಡಿದಿಟ್ಟುಕೊಂಡಿದ್ದ. ಇನ್ನೊಂದೆಡೆ ರಫಿವುಲ್ಲಾನ ಕುಟುಂಬವಿತ್ತು. ಮತ್ತೊಂದೆಡೆ ಇತ್ತೀಚೆಗೆ ಹೊಸ ರೀತಿಯ ನಾಯಕತ್ವವನ್ನು ಮುಸ್ಲಿಮರಿಗೆ ನೀಡಲು ಹೊರಟಿರುವ ಪಿಎಫ್‌ಐ ಇದೆ. ಈ ಮೂರೂ ಶಕ್ತಿಗಳ ಮೇಲೆ ಬೇರೆ ಬೇರೆ ಕಾಲದಲ್ಲಿ ಹಲ್ಲೆ ಮಾಡಿಸಲು ಜಫ್ರುಲ್ಲಾ ಪ್ರಯತ್ನ ಪಟ್ಟಿದ್ದಕ್ಕೆ ಸಾಕ್ಷಿಗಳಿವೆ. ಆದರೆ ಬೋಹ್ರಾನಿಗೆ ಬಿಜೆಪಿಯವರು ಚೆಂಬು ಕೊಟ್ಟಿದ್ದರಿಂದ ಆತ ಹೆಚ್ಚುಕಡಿಮೆ ಊರೇ ಖಾಲಿ ಮಾಡಿದಂತಿದೆ. ಪಿಎಫ್‌ಐನವರು ತಮ್ಮ ಶಕ್ತಿಯನ್ನು ಕಳೆದ ನಗರಸಭಾ ಉಪಚುನಾವಣೆಯ ಸಂದರ್ಭದಲ್ಲಿ ತೋರಿಸಿದ್ದರಿಂದ ಅದರ ಅಧ್ಯಕ್ಷ ವಾಜಿದ್ ಮೇಲೆ ಹಲ್ಲೆಯಾಯಿತು. ಈಗ ರಫಿವುಲ್ಲಾನನ್ನು ಕೊಂದುಹಾಕಲಾಗಿದೆ.

ಇದುವರೆಗೆ ಜಫ್ರುಲ್ಲಾನ ವಿರುದ್ಧ ಯಾವ ಕಂಪ್ಲೇಂಟ್ ಬಂದರೂ ಪೊಲೀಸರು ಅದನ್ನು ದಾಖಲಿಸುತ್ತಿರಲಿಲ್ಲ. ಈಗಲೂ ಇದರ ಬಗ್ಗೆ ಪೊಲೀಸ್ ಇಲಾಖೆಯಲ್ಲೇ ಎರಡು ಬಣಗಳಾಗಿವೆ ಎಂಬ ಸುದ್ದಿಯಿದೆ. ಎಫ್‌ಐಆರ್‌ನಲ್ಲಿ ಮೊದಲ ಆರೋಪಿಯಾಗಿದ್ದರೂ ಆತನನ್ನು ಕೈಬಿಡಬೇಕೆಂಬ ಇರಾದೆ ಒಂದು ಬಣಕ್ಕಿದೆ ಎಂದು ಹೇಳಲಾಗುತ್ತಿದೆ. ಅದು ಅಂತಿಮವಾಗಿ ಯಾವ ದಿಕ್ಕಿಗೆ ಹೋಗಬಹುದು ಎಂಬುದನ್ನು ನಿರ್ಧರಿಸುವಲ್ಲಿ ಎಸ್‌ಪಿ ಕೌಶಲೇಂದ್ರ ಕುಮಾರ್ ಅವರಿಗಿಂತ ಅಡಿಷನಲ್ ಎಸ್‌ಪಿ ರಾಜಣ್ಣನವರದ್ದೇ ಮುಖ್ಯಪಾತ್ರವಿರುತ್ತದೆ. ಪಿಎಸ್‌ಐ ಜಯಮಾರುತಿ ಗಟ್ಟಿಯಾಗಿ ಮುಂದುವರೆಯಲು ಸಾಧ್ಯವೇ ಎಂಬ ಪ್ರಶ್ನೆಗೆ ಮುಂದಿನ ದಿನಗಳಲ್ಲಷ್ಟೇ ಉತ್ತರ ಸಿಗಲು ಸಾಧ್ಯ.

ಮಂಡ್ಯದ ಶಾಸಕ ಎಂ.ಶ್ರೀನಿವಾಸ್ ಜಫ್ರುಲ್ಲಾ ಜೊತೆಗೆ ಮಧುರ ಸಂಬಂಧ ಹೊಂದಿರುವುದು ಗುಟ್ಟಲ್ಲ. ಹಾಗೆಯೇ ಮಂಡ್ಯದ ಜೆಡಿಎಸ್‌ನ ಸದ್ಯದ ನಾಯಕ ಚೆಲುವರಾಯಸ್ವಾಮಿಯೂ ಜಫ್ರುಲ್ಲಾನ ಗಾಡ್‌ಫಾದರ್ ಎಂದು ದಳದ ನಗರಸಭಾ ಸದಸ್ಯರೇ ಅವಲತ್ತುಕೊಳ್ಳುತ್ತಾರೆ. ಈಗಲೂ ಜಫ್ರುಲ್ಲಾ ಇರುವುದು ದುಬೈನಲ್ಲಿ ಎಂದು ಕೆಲವರು ಹೇಳಿದರೆ, ಚೆಲುವರಾಯಸ್ವಾಮಿ ಮನೆಯಲ್ಲಿ ಎಂದು ಜಫ್ರುಲ್ಲಾ ಬೆಂಬಲಿಗರು ಹೇಳುತ್ತಿದ್ದಾರೆ. ದಳಪತಿಗಳು ಇದಕ್ಕೆಲ್ಲಾ ಇತಿಶ್ರೀ ಹಾಡುವರೋ? ಇಲ್ಲಾ ತಾವೂ ಸಹ ರೌಡಿಗಳ ಪೋಷಕರು ಎಂದೇ ಸಾಬೀತುಪಡಿಸುವರೋ?

● ಲಕ್ಷ್ಮಣ್ ಚೀರನಹಳ್ಳಿ

▶ 11

...ಗದ 'ಜ್ಯೋತಿ'!

...ಯದ ಹಿಂದಿರುವ ಸಕಾರಾತ್ಮಕ ಕಾರಣಗಳನ್ನು ...್ಟೂ ಪರಿಗಣನೆಗೆ ತೆಗೆದುಕೊಳ್ಳದೇ ಇಡೀ ...ಟವನ್ನು ಭಯೋತ್ಪಾದಕರು ನಡೆಸುತ್ತಿರುವ ಭಯೋ... ಎಂದು ಚಿತ್ರಿಸಿ ಅದನ್ನು ದಮನ ಮಾಡುವುದಕ್ಕೆ ...ಸರನ್ನು ಛೂಬಿಟ್ಟರು.

...ಕ್ಕಿಂತ ಭೀಕರವಾದದ್ದು ಎಂದರೆ ಕೊಲ್ಕತ್ತಾ ನಗರದಲ್ಲಿ ...ನ ಗೂಂಡಾಗಳು ಹೋರಾಟಗಾರರ ಮಾರಣ ...ಪ ನಡೆಸಿದ್ದು. ಗ್ರಾಮೀಣ ಪ್ರದೇಶದಲ್ಲಿನ ನಕ್ಸಲ್ಬರಿ ...ಟಕ್ಕೆ ಬೆಂಬಲವಾಗಿ ಕೊಲ್ಕತ್ತಾ ನಗರದಲ್ಲಿ ಭುಗಿಲೆದ್ದ ...ರ, ಬುದ್ಧಿಜೀವಿಗಳ ಚಳವಳಿಯನ್ನು ನಿರ್ದಯವಾಗಿ ... ಮಾಡುವುದಕ್ಕೆ ಇಡೀ ನಗರದ ಒಂದೊಂದು ...ನ್ನು ಪೊಲೀಸರು ಮತ್ತು ಸಿಪಿಎಂನ ಗೂಂಡಾಗಳಿಗೆ ... ಬಸು ಹಂಚಿಕೊಟ್ಟಿದ್ದರು. ಕಾಲೇಜುಗಳಿಗೆ, ...ಗಳಿಗೆ ನುಗ್ಗಿದ ಸಿಪಿಎಂ ಗೂಂಡಾಗಳು, ...ಸರು ಅನುಮಾನ ಬಂದ ವಿದ್ಯಾರ್ಥಿಗಳನ್ನೆಲ್ಲಾ ..., ಚಿತ್ರಹಿಂಸೆ ಕೊಟ್ಟು ಕತ್ತರಿಸಿ ಹಾಕುತ್ತಿದ್ದರು. ಈ ...ದಲ್ಲಿ ಕೊಲ್ಕತ್ತಾಕ್ಕೆ ಭೇಟಿ ನೀಡಿದ್ದ ಪತ್ರಕರ್ತರೊಬ್ಬರು ... ನಗರದಾದ್ಯಂತ ರಸ್ತೆಬದಿಯಲ್ಲಿ, ಚರಂಡಿಗಳಲ್ಲಿ ...ರದ ರುಂಡಗಳು, ರುಂಡಗಳಿಲ್ಲದ ದೇಹಗಳು, ...ಗಳು ಕಾಣುತ್ತಿದ್ದವು" ಎಂದು ಬರೆದಿದ್ದರೆಂದರೆ ... ಎಷ್ಟು ಭಯಾನಕವಾಗಿತ್ತೆಂದು ಯಾರು ಬೇಕಾ...ಹಿಸಬಹುದು. ಕೊನೆಗೆ ಚಾರು ಮುಜುಂದಾರ್ ...್ಲ ಒಳಗೊಂಡಂತೆ ಇಡೀ ಹೋರಾಟಕ್ಕೆ ನೇತೃತ್ವ ... ಎಲ್ಲಾ ನಾಯಕರು ಒಂದೋ ಬಂಧನಕ್ಕೊಳಗಾದರು, ಇಲ್ಲವೇ ಪೊಲೀಸ್-ಸಿಪಿಎಂ ಗೂಂಡಾಗಳ ದಾಳಿಗೆ ಸಿಕ್ಕು ಸತ್ತುಹೋದರು. ಹೀಗೆ, 1972ರ ಹೊತ್ತಿಗೆ ಇಡೀ ನಕ್ಸಲ್ಬರಿ ಹೋರಾಟ ಪೊಲೀಸ್-ಸಿಪಿಎಂ ಜಂಟಿ ಕಾರ್ಯಾಚರಣೆಯಲ್ಲಿ ಬರ್ಬರವಾಗಿ ದಮನಗೊಂಡಿತ್ತು. ಅಸಲಿಗೆ ಇದು ಮೊದಲ ಬಾರಿಗೆ ಜ್ಯೋತಿ ಬಸು ಅವರ ಒಳಗಿದ್ದ ಒಬ್ಬ ನಿರ್ದಯಿ ಸರ್ವಾಧಿಕಾರಿಯನ್ನು ಹೊರಜಗತ್ತಿಗೆ ತೋರಿಸಿತ್ತು.

ಆದರೆ ನಕ್ಸಲ್ಬರಿ ಹೋರಾಟ ದೇಶದ ಎಲ್ಲಾ ರಾಜಕೀಯ ಪಕ್ಷಗಳು ಅನಿವಾರ್ಯವಾಗಿ ಭೂ ಸುಧಾರಣೆಯನ್ನು ಜಾರಿಗೆ ತರುವಂತೆ ಮಾಡಿದ್ದವು. ಇದರ ಭಾಗವಾಗಿಯೇ "ಆಪರೇಷನ್ ಬರ್ಗ" ಹೆಸರಿನಲ್ಲಿ ಬಂಗಾಳದಲ್ಲೂ ಗೇಣಿ ರದ್ದು ನೀತಿ ಜಾರಿಯಾಯಿತು. ಬೇರೇ ಯಾವುದೇ ರಾಜ್ಯಗಳಿಗಿಂತ ಬಂಗಾಳದಲ್ಲಿ ಅದು ಪರಿಣಾಮಕಾರಿಯಾಗಿ ಜಾರಿಯಾಯಿತು. ಇದು ಸಿಪಿಎಂ ಪಕ್ಷಕ್ಕೆ ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಜನಬೆಂಬಲವನ್ನೂ ಗಳಿಸಿಕೊಟ್ಟಿತು. ಅದರ ಜೊತೆಗೆ ತರಲಾದ ಪಂಚಾಯತ್ ರಾಜ್ ವ್ಯವಸ್ಥೆ ಗ್ರಾಮೀಣ ಮಟ್ಟದಲ್ಲಿ ಸಿಪಿಎಂ ಪಕ್ಷಕ್ಕೆ ಬಲವಾದ ಭದ್ರಕೋಟೆಯನ್ನೇ ನಿರ್ಮಿಸಿಕೊಟ್ಟಿತು. ಇದರ ನಿರ್ಮಾಪಕ ಜ್ಯೋತಿ ಬಸು. ಸಿಪಿಎಂ ಪಕ್ಷದ ಸುದೀರ್ಘ ರಾಜ್ಯಭಾರದ ಗುಟ್ಟು ಸಹ ಇದೇ! ಆದರೆ 1991ರ ನಂತರ ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಮತ್ತು ಅರ್ಥ ಸಚಿವ ಡಾ.ಮನ ಮೋಹನ್ ಸಿಂಗ್ ಜೋಡಿ ಜಾರಿಗೆ ತಂದ ಜಾಗತೀಕರಣ ನೀತಿ ಭಾರತವನ್ನು ಮತ್ತೆ ಅಮೆರಿಕ ನೇತೃತ್ವದ ಸಾಮ್ರಾಜ್ಯ ಶಾಹಿ ರಾಷ್ಟ್ರಗಳಿಗೆ ಒತ್ತೆ ಇಟ್ಟಿತು. ದೇಶದ ಇತರೆಡೆಗಳಲ್ಲಿ ಈ ಮರುವಸಾಹತೀಕರಣದ ವಿರುದ್ಧ ಕೆಂಬಾವುಟ ಎತ್ತಿದ ಸಿಪಿಎಂ ಪಕ್ಷ ಬಂಗಾಳದಲ್ಲಿ ಮಾತ್ರ ಸದ್ದಿಲ್ಲದೆ ದೇಶದ ಬಂಡವಾಳಿಗರಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಮಣೆ ಹಾಕಿಕೊಟ್ಟಿತು. ಹೀಗಾಗಿಯೇ 1996ರಲ್ಲಿ ಕೇಂದ್ರ ದಲ್ಲಿ ಅತಂತ್ರ ಸಂಸತ್ತು ಸೃಷ್ಟಿಯಾಗಿ ಯಾರು ಪ್ರಧಾನಮಂತ್ರಿ ಯಾಗಬೇಕೆಂಬ ಚರ್ಚೆ ಮುನ್ನೆಲೆಗೆ ಬಂದಾಗ ಬಸು ಅವರನ್ನೇ ಪ್ರಧಾನಮಂತ್ರಿ ಮಾಡಬೇಕೆಂದು ಈ ದೇಶದ ಕೈಗಾರಿಕೋದ್ಯಮಿಗಳೆಲ್ಲಾ ಹಠ ಹಿಡಿದಿದ್ದರು! (ಆದರೆ ಸಿಪಿಎಂ ಪಕ್ಷದ ತೀರ್ಮಾನಕ್ಕೆ ತಲೆಬಾಗಿ ಬಸು ಪ್ರಧಾನಿ ಹುದ್ದೆಯನ್ನು ಅಲಂಕರಿಸಲಿಲ್ಲ. ಈ ಹೊತ್ತು ಈ 'ತ್ಯಾಗ'ವನ್ನೇ ನಮ್ಮ ಪತ್ರಿಕೆಗಳು ಅತಿದೊಡ್ಡ ಆದರ್ಶವೆಂಬಂತೆ ಬಣ್ಣಿಸುತ್ತಿವೆ. ವಾಸ್ತವವೆಂದರೆ ಅದು ಸಿಪಿಎಂ ಪಕ್ಷದ ಸಾಮೂಹಿಕ ತೀರ್ಮಾನ. ಬಸು ಅವರಿಗೆ ವೈಯಕ್ತಿಕವಾಗಿ ಪ್ರಧಾನ ಮಂತ್ರಿ ಪದವಿ ನಿರಾಕರಿಸಬೇಕು ಎಂದೇನೂ ಇರಲಿಲ್ಲ! ಆದ್ದರಿಂದಲೇ ಅವರು ಪಕ್ಷದ ನಿರ್ಣಯವನ್ನು "ಹಿಸ್ಟಾರಿಕ್ ಬ್ಲಂಡರ್" ಎಂದೇ ಬಹಿರಂಗವಾಗಿ ಟೀಕಿಸಿದ್ದರು!) ಬಂಗಾಳದಲ್ಲಿ ಬಂಡವಾಳವನ್ನು ಆಕರ್ಷಿಸಬೇಕೆಂದು ಸೋಮನಾಥ ಚಟರ್ಜಿ ನೇತೃತ್ವದಲ್ಲಿ ಸ್ಥಾಪನೆಯಾದ ಸಮಿತಿ ಕೊಟ್ಟ ಶಿಫಾರಸ್ಸನ್ನು ಜ್ಯೋತಿ ಬಸು ಸರ್ಕಾರ ಚಾಚೂ ತಪ್ಪದೆ ಅನುಷ್ಠಾನಕ್ಕೆ ತಂದಿತು. ಸಾರಾಂಶದಲ್ಲಿ ಈ ಸಮಿತಿಯ ಶಿಫಾರಸ್ಸುಗಳಿಗೂ ಮನಮೋಹನ್ ಸಿಂಗ್ ತಂದ ಸುಧಾರಣೆಗಳಿಗೂ ಹೆಚ್ಚಿನ ವ್ಯತ್ಯಾಸವೇನೂ ಇರಲಿಲ್ಲ.

ಸಹಜವಾಗಿಯೇ ಇದರ ಪರಿಣಾಮಗಳು ಜ್ಯೋತಿ ಬಸು ಮುಖ್ಯಮಂತ್ರಿಯಾಗಿದ್ದಾಗಲೇ ಕಾಣಿಸಿಕೊಂಡಿತು. ಬಂಗಾಳದಲ್ಲಿ ಕೋಮುವಾದವನ್ನು ಬೆಳೆಯಲು ಅವಕಾಶ ಕೊಟ್ಟಿಲ್ಲ ಎನ್ನುವುದನ್ನು ಅಭಿನಂದಿಸುವ ಹೊತ್ತಿನಲ್ಲೇ ಸಚಾರ್ ಸಮಿತಿಯೂ ಎತ್ತಿತೋರಿಸುವಂತೆ ದಮನಕ್ಕೊಳಗಾದ ಮತ್ತು ಬಡವರ ಪರಿಸ್ಥಿತಿ ಪಶ್ಚಿಮ ಬಂಗಾಳದಲ್ಲಿ ಅತ್ಯಂತ ದಯನೀಯವಾಗಿದೆ. ಈ ನೀತಿಗಳನ್ನೇ ನಂತರದ ಮುಖ್ಯಮಂತ್ರಿ ಬುದ್ಧದೇವ ಅವರೂ ಮುಂದುವರೆಸಿದರು. ಅದರ ತಾರ್ಕಿಕ ಪರಿಣಾಮವೇ ಸಿಂಗೂರು, ನಂದಿಗ್ರಾಮ ಹಾಗೂ ಲಾಲ್‌ಘರ್ ನರಮೇಧಗಳು.

ಅದೇನೇ ಇರಲಿ ಜ್ಯೋತಿ ಬಸು ಒಬ್ಬ ವ್ಯಕ್ತಿಯಾಗಿ ಮತ್ತು ರಾಜಕಾರಣಿಯಾಗಿ ಕಾಂಗ್ರೆಸ್ಸಿನ ಮತ್ತು ಇತರ ಪಕ್ಷಗಳ ರಾಜಕಾರಣಿಗಳಿಗೆ ಹೋಲಿಸಿದಲ್ಲಿ, ಅಷ್ಟೇ ಏಕೆ, ಸಿಪಿಎಂ ಪಕ್ಷದ ಕೇರಳ ಘಟಕದ ಘಟಾನುಘಟಿಗಳಿಗೇ ಹೋಲಿಸಿದರೂ ನಿಜಕ್ಕೂ ಭಿನ್ನರಾಗಿಯೇ ಕಾಣಿಸುತ್ತಾರೆ. ಇತರ ಪಕ್ಷಗಳಲ್ಲಿ ಐದು ವರ್ಷ ಮುಖ್ಯಮಂತ್ರಿಗಿರಿ ಸಿಕ್ಕಿದರೇ ಜನ್ಮಜನ್ಮಾಂತರಕ್ಕೂ ಆಗುವಷ್ಟು ಆಸ್ತಿಮಾಡಿಕೊಂಡು ಬಿಡುತ್ತಾರೆ. ಆದರೆ 23 ವರ್ಷ ಮುಖ್ಯಮಂತ್ರಿಯಾಗಿದ್ದರೂ ಮಗನಿಗೆ ಅನುಕೂಲ ಮಾಡಿಕೊಟ್ಟರು ಎನ್ನುವ ಒಂದು ಆಪಾದನೆಯನ್ನು ಬಿಟ್ಟರೆ ಬೇರೆ ಯಾವುದೇ ಆಪಾದನೆಯನ್ನು ಅವರ ಮೇಲೆ ವಿರೋಧಪಕ್ಷಗಳೂ ಸಹ ಹೊರಿಸಲಾಗಿಲ್ಲ. ಅದೇ ರೀತಿ ಇಡೀ ದೇಶ ಕೋಮುವಾದದ ದಳ್ಳುರಿಯಲ್ಲಿ ಬೇಯುತ್ತಿದ್ದರೂ ಅದರ ಝಳ ಬಂಗಾಲವನ್ನು ತಟ್ಟದಂತೆ ಜ್ಯೋತಿಬಸು ನೋಡಿಕೊಂಡಿದ್ದರು. ಆದರೆ ಒಬ್ಬ ಕಮ್ಯುನಿಸ್ಟ್ ಪಕ್ಷದ ಮುಖ್ಯಮಂತ್ರಿಯ 23 ವರ್ಷದ ರಾಜ್ಯಭಾರವನ್ನು ಇಷ್ಟು ಸಣ್ಣ ಅಳತೆಗೋಲಿನಿಂದ ಮಾತ್ರ ಅಳೆಯಲಾಗುವುದಿಲ್ಲ. ಸಿಪಿಎಂ ಪಕ್ಷ 77ರಲ್ಲಿ ಭೂಮಿ ಕೊಟ್ಟಿದ್ದು ಹೌದಾದರೆ 2007ರಲ್ಲಿ ಭೂಮಿ ಕಿತ್ತುಕೊಳ್ಳುತ್ತಿರುವುದು ನಿಜ. ಬಡವರ-ದಲಿತರ ಸ್ಥಿತಿಗತಿ ಏನೇನು ಅಭಿವೃದ್ಧಿಗೊಂಡಿಲ್ಲ.

ಭಾರತದ ಕೈಗಾರಿಕೋದ್ಯಮಿಗಳ ಒಕ್ಕೂಟವು 1996ರಲ್ಲಿ ಜ್ಯೋತಿ ಬಸುವೇ ಪ್ರಧಾನ ಮಂತ್ರಿಯಾಗಬೇಕೆಂದು ಆಗ್ರಹ ಪಡಿಸಿದ್ದರು. ಅದಕ್ಕೆ ಅವರು ಕೊಟ್ಟ ಕಾರಣ "ಬಸುರವರು ಮಾಲೀಕ ವರ್ಗಕ್ಕೂ ಸ್ನೇಹಿತರು. ಕಾರ್ಮಿಕ ವರ್ಗಕ್ಕೂ ಸ್ನೇಹಿತರು. ಆದ್ದರಿಂದ ಅವರು ಆರ್ಥಿಕ ಸುಧಾರಣೆ ನೀತಿಯನ್ನು ಅತ್ಯಂತ ಶಾಂತಿಯುತವಾಗಿ ಜಾರಿಗೆ ತರಬಹುದು" ಎಂದು.

ಜ್ಯೋತಿಬಸು ಯಾರ ಸ್ನೇಹಿತ ಎಂಬ ಅನುಮಾನ ಹುಟ್ಟುವುದು ಇದೇ ಕಾರಣಕ್ಕೇ!!

● ಕುಮಾರ್ ಬುರಡಿಕಟ್ಟಿ


ದಾಟುಹಾದಿಯ ಯುವತಿಯರು

ಯೌವನ ಎಲ್ಲ ಜೀವಿಗಳ ಬದುಕಿನ ಸುಂದರ ಕಾಲಘಟ್ಟ. ಅಪಾರ ಜೀವನೋತ್ಸಾಹ, ಅಗಾಧ ಹುಮ್ಮಸ್ಸು, ಪ್ರಚಂಡ ಧೈರ್ಯ, ಗಾಢ ಭಾವುಕತೆಗಳ ಆಗರವಾದ ಯೌವನವನ್ನು ಹಾದು ಬರುವುದು ಎಷ್ಟು ಹಿತಕರವೋ ಸಂದ ಯೌವನದ ದಿನಗಳನ್ನು ಮೆಲುಕು ಹಾಕುವುದೂ ಅಷ್ಟೇ ಹಿತಕರ. ಎಲ್ಲ ಕ್ರಾಂತಿಕಾರಿ ಚಿಂತನೆಗಳು ಮತ್ತು ಕಾರ್ಯಗಳು ಮೊಳಕೆಯೊಡೆದು, ಕುಡಿಬಿಟ್ಟು ಹಬ್ಬುವ ಕಾಲವಿದು. ಇದಕ್ಕೆ ಹೆಣ್ಣು-ಗಂಡು ಎಂಬ ಲಿಂಗಭೇದವಿಲ್ಲ. ಆದರೆ ಈ ಅವಧಿಯ ನಿರ್ಣಯ, ಅದರ ಪರಿಣಾಮ, ಸಾಧ್ಯಾಸಾಧ್ಯತೆ ಮುಂತಾದವುಗಳ ಹೊರೆ ಮಾತ್ರ ಇಬ್ಬರಿಗೂ ಏಕರೀತಿಯಲ್ಲಿ ಬೀಳುತ್ತದೆಯೇ ಎಂಬ ಪ್ರಶ್ನೆ ಮುಖ್ಯವಾಗಿದೆ.

ನವೋದಯದ ನಡುಗಾಲದಲ್ಲಿ ವೈಯಕ್ತಿಕ ಬದುಕಿಗೆ ಸಂಬಂಧಿಸಿದಂತೆ, ವಿವಾಹದ ನಿರ್ಣಯದಲ್ಲಿ ವಧು-ವರರ ಅಭಿಪ್ರಾಯಕ್ಕೂ ಮನ್ನಣೆ ಇರಬೇಕು ಎಂಬುದು ಯುವಜನತೆಯ ದೊಡ್ಡ ಆಕಾಂಕ್ಷೆಯಾಗಿತ್ತು. ಆನಂತರದ ಕಾಲಘಟ್ಟಗಳಲ್ಲಿ ವಿವಾಹಪೂರ್ವದಲ್ಲಿ ಗಂಡು-ಹೆಣ್ಣಿನ ಪ್ರೇಮಕ್ಕೆ ಮಾನ್ಯತೆ ನೀಡುವ ಬೇಡಿಕೆ ಮುನ್ನೆಲೆಗೆ ಬಂದಿತು. ಕಳೆದ ಶತಮಾನದ 70-80ರ ದಶಕಗಳಲ್ಲಿ ಪ್ರೇಮದ ಜೊತೆ ಜಾತಿ ಮತ್ತು ಧರ್ಮದ ಎಲ್ಲೆಗಳನ್ನು ಮೀರುವ ಹುರುಪು ಯುವಜೋಡಿಗಳದ್ದಾಗಿತ್ತು. ಈ ಎಲ್ಲ ಕಾಲಘಟ್ಟಗಳಲ್ಲೂ ಪರಸ್ಪರರ ನಡುವಿನ ವಿವಾಹಪೂರ್ವ ಸಂಬಂಧಗಳ ಎಲ್ಲೆಗಳು ಏನಾಗಿರಬೇಕು ಎಂಬ ಬಗ್ಗೆ, ಎಲ್ಲಿಗೆ ಅದು ಕೊನೆಗೊಳ್ಳಬೇಕು ಎಂಬ ಬಗ್ಗೆ ಸ್ಥೂಲವಾಗಿಯಾದರೂ ಗ್ರಹಿಸಿಕೊಂಡು ಎಚ್ಚರದ ಹೆಜ್ಜೆ ಇಟ್ಟವರು ಬದುಕಲ್ಲಿ ಯಶಸ್ವಿಯಾಗಿದ್ದರು.

ಪ್ರೀತಿ-ಪ್ರೇಮಗಳ ಕುರಿತು ಈಗಿನ ಯುವಜನತೆಯ ಅಭಿಪ್ರಾಯ ಏನು? ದುಗುಡ-ದುಮ್ಮಾನಗಳೇನು? ಸಂಭ್ರಮ-ಪುಲಕಗಳೇನು? ಇಂಥ ವಿಚಾರಗಳ ಚರ್ಚೆಗೆ ಒಂದು ವೇದಿಕೆ ಅಗತ್ಯವಿದೆ ಎನಿಸುತ್ತದೆ. ವರ್ಷಕ್ಕೊಮ್ಮೆ ಪ್ರೇಮಿಗಳ ದಿನಾಚರಣೆ ಆಚರಿಸುವ, ಅಂದು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಮನಗೆದ್ದ ಸಂಗಾತಿಗಳಿಗೆ ಉಡುಗೊರೆ ನೀಡಿ ಪುಲಕಿತಗೊಳ್ಳುವ ಸಮುದಾಯ ಒಂದೆಡೆ ಕಂಡರೆ, ಪ್ರೇಮಿಗಳು ಇಂಥ ದಿನಾಚರಣೆ ಆಚರಿಸಬೇಕೋ, ಬಾರದೋ ಎಂದು ತಾವೇ ತೀರ್ಮಾನಿಸುವ, ಆಚರಿಸುವವರಿಗೆ ತಾವು ವಿಧಿಸುವ ಶಿಕ್ಷೆಯ ಬಗ್ಗೆ ಡಂಗುರ ಸಾರುವ ಗುಂಪು ಇನ್ನೊಂದೆಡೆ ನನಗೆ ನೆನಪಾಗುತ್ತದೆ.

ಇಂದಿನ ಯುವಕರ ಕನಸು ಲಿಂಗಭೇದ ಮರೆತು ಬೆರೆಯುವ ಸುಖಪಡುವ ಆದರ್ಶ. ಅದಕ್ಕೆ ಪೂರಕವಾಗಿ ಯುವತಿಯರೂ ಬದಲಾಗುತ್ತಿದ್ದಾರೆ. ತನ್ನೊಂದಿಗೆ ಮುಕ್ತವಾಗಿ ಮಾತಾಡದ, ಸುತ್ತಾಡಲು ಬಾರದ, ಪಬ್‌ಗಳಲ್ಲಿ ಸಂಗಾತಿಯಾಗದ, ಕುಣಿತಕ್ಕೆ ಸಾಥಿಯಾಗದ ಯುವತಿಯರನ್ನು 'ಸವಕಲು ನಾಣ್ಯಗಳೆಂದು' ಇಂದಿನ ಯುವಕರು ದೂರವಿರಿಸುತ್ತಾರೆ. ಈ ಆತಂಕದ ಜೊತೆಜೊತೆಗೇ ವಯೋಸಹಜ ಆಕರ್ಷಣೆಗಳೂ ಪ್ರಲೋಭನೆಗಳೂ ಯುವತಿಯರನ್ನು ಕಾಡುತ್ತಿರುತ್ತವೆ (ಅಷ್ಟಕ್ಕೂ ಅವರೂ ಮನುಷ್ಯರೇ ತಾವೆ). ಹೀಗೆ ಪ್ರೀತಿಗೆ ಸಾಥಿಯಾಗುವುದು, ಗೆಳೆತನ ಗಟ್ಟಿಗೊಳಿಸಲು ಸಂಗಾತಿಯ ಅಪೇಕ್ಷೆಗೆ ಸ್ಪಂದಿಸುವುದು, ಯಾವುದೋ ಒಂದು ಹಂತದಲ್ಲಿ ಸಂಗಾತಿಯ ಕುರಿತು ವಿಶ್ವಾಸ ಮೂಡಿದಾಗ, ಎಲ್ಲೆಗಳ ಬಂಧಗಳನ್ನು ಹರಿದೊಗೆದು ಮುಂದುವರಿಯುವುದು



ವಿವಾಹಿತನೊಂದಿಗೆ ಓಡಿಹೋದ ರಮ್ಯಾ ಶೆಟ್ಟಿ....

ಇಂದಿನ ಯುವತಿಯರಿಗೆ ಅನಿವಾರ್ಯವೂ ಆಗಿರುತ್ತದೆ. 'ನನ್ನ ಮೇಲೆ ನಂಬಿಕೆ ಇಲ್ಲವೇ?', 'ನನ್ನ ಪ್ರೇಮದಲ್ಲಿ ವಿಶ್ವಾಸವಿಲ್ಲವೇ?', 'ನನ್ನನ್ನು ಇಷ್ಟೆಯೇ ನೀನು ಅರ್ಥಮಾಡಿಕೊಂಡದ್ದು?' ಎಂಬುದಾಗಿ ಯುವತಿಯರ ಭಾವನೆಗಳನ್ನು ನಗದೀಕರಿಸುವ ಮಾತುಗಳು, 'ಹೀಗೆ ಮುಂದುವರಿದರೇ ಹೆತ್ತವರ ವಿರೋಧ ಕಡಿಮೆ ಆಗುತ್ತೆ' ಎಂಬಂಥ ಮಾದರಿಯ ಪ್ರಲೋಭನೆಗಳೂ ಯುವತಿಯರನ್ನು ಸಂದಿಗ್ಧದಲ್ಲಿ ಕೆಡವುತ್ತವೆ; ಸಂಗಾತಿಯ ಇಚ್ಛೆಗೆ ಪೂರಕವಾಗುವಂತೆ ಯುವತಿಯರನ್ನು ಬಾಗಿಸುತ್ತವೆ. ತುಂಬು ಗರ್ಭಿಣಿಯೋರ್ವಳು ತನ್ನೆಲ್ಲ ಹಿಂಸೆಗಳ ಜೊತೆ ಗಂಡನಿಗೆ ಲೈಂಗಿಕ ಸುಖ ನೀಡುವುದಕ್ಕೆ ಮುಂದಾಗುವುದಕ್ಕೂ, ಹಸಿಬಾಣಂತಿ ಹೆಚ್ಚುದಿನ ತವರಲ್ಲಿ ಉಳಿದರೆ ಗಂಡನ ಗಮನ ಬೇರೆಡೆ ಹರಿದೀತು ಎಂದು ಆತಂಕಿತಳಾಗುವುದಕ್ಕೂ, ಇಂದಿನ ಯುವತಿಯರು ಎದುರಿಸುತ್ತಿರುವ ಈ ಬಗೆಯ ಇಕ್ಕಟ್ಟುಗಳಿಗೂ ವ್ಯತ್ಯಾಸವಿದೆಯೇ?

ಇತ್ತೀಚೆಗೆ ಮದುವೆ ಮನೆಯಲ್ಲಿ ಅಸಹಾಯಕತೆಯಿಂದ, ಉಮ್ಮಳದಿಂದ ತನ್ನ ಪ್ರಿಯಕರನ ವಿವಾಹ ನಿಲ್ಲಿಸಲು ಒದ್ದಾಡಿದ, ಕೂಗಾಡಿದ, ಕಂಗೆಟ್ಟು ಅತ್ತ ಪ್ರಿಯಾಂಕ ನಿಮಗೆ ಇಲ್ಲಿ ನೆನಪಾಗುವುದಿಲ್ಲವೇ? ಅಂತಹ ಎಷ್ಟು ಪ್ರಿಯಾಂಕರು ನಮ್ಮ ಸುತ್ತಮುತ್ತ ಇದ್ದಾರೆ ನೆನಪಿಸಿಕೊಳ್ಳಿ. ನಾಲ್ಕು ವರ್ಷಗಳ ಕಾಲ ಸಖ್ಯ-ಸಾಂಗತ್ಯ ನೀಡಿ, ಬದುಕಿನ ಬಗ್ಗೆ, ಭವಿಷ್ಯದ ಬಗ್ಗೆ ಭರವಸೆ ಮೂಡಿಸಿದ ವ್ಯಕ್ತಿಯ ಬಗ್ಗೆ ಪ್ರಿಯಾಂಕ 'ಎಲ್ಲೆಗಳ ಗಡಿದಾಟಿದ್ದು' ಅವಳೊಬ್ಬಳ ತಪ್ಪೇ? ಅಂತಹ ವರನನ್ನೇ ವಿವಾಹವಾಗಬೇಕಾದ ತನ್ನ ಸ್ಥಿತಿ ಕುರಿತು ವಧುವಿನ ಮನಸ್ಥಿತಿ ಏನು? ರಕ್ಷಕರಾಗಬೇಕಿದ್ದ ಪೊಲೀಸ್ ವ್ಯವಸ್ಥೆ ನಿಷ್ಕ್ರಿಯವಾಗಿ ಕುಳಿತದ್ದನ್ನು, ಮದುವೆ ಮಂಟಪದಲ್ಲಿ ನೆರೆದಿದ್ದ ಜನ ಮೂಕಸಾಕ್ಷಿಯಾದದ್ದನ್ನು, ಅವಳ ಬೆಂಬಲಕ್ಕೆ ನಿಂತ ಕುಟುಂಬಿಕರು ಅಸಹಾಯಕರಾದದ್ದನ್ನು ನಾವು ಹೇಗೆ ಪರಿಭಾವಿಸಬೇಕು?

ಹೀಗೆ ವಿವಾಹವಾಗುವುದಾಗಿ ನಂಬಿಸಿ, ದೈಹಿಕ ಸಂಬಂಧ ಬೆಳೆಸಿ, ಪ್ರೇಯಸಿ ಗರ್ಭಿಣಿಯಾದಾಗ, ಸಂಬಂಧವನ್ನು ತ್ಯಜಿಸಿ ದೂರಸರಿವ ಆಧುನಿಕ ವಿಶ್ವಾಮಿತ್ರ ಸಂತತಿ ಒಂದೆಡೆ ಕಂಡರೆ, ಇನ್ನೊಂದೆಡೆ ದಿನಸಿಗಳ ಬೆಲೆಯಂತೆ ಗಗನಕ್ಕೇರಿದ ವರದಕ್ಷಿಣೆಯ ದರ, ಆ ಮಾರುಕಟ್ಟೆಯಲ್ಲಿ ವರಗಳನ್ನು ಕೊಳ್ಳಲಾಗದ, ವಿವಾಹದ ಕನಸನ್ನು ನನಸಾಗಿಸಿಕೊಳ್ಳಲಾಗದ ಅಸಹಾಯಕ ಬಡವರ್ಗದ ವಧುಗಳಿಗೆ ವಿವಾಹದ ಪೆಪ್ಪರ್‌ಮೆಂಟ್ ತೋರಿಸಿ, ಅವರನ್ನು ಬಳಸಿಕೊಂಡು, ಕೊನೆಗೆ ಅವರ ಜೀವವನ್ನೇ ಹೊಸಕಿಹಾಕುವ 'ಮೋಹನಕುಮಾರ'ನ ಸಂತತಿಯು ಇನ್ನೊಂದೆಡೆಯಿದೆ. ಇಂಥ ವಿದ್ಯಮಾನಗಳನ್ನು ಕೇಳಿದಾಗ, ವರದಿಯನ್ನು ಓದಿದಾಗ 'ವಿವಾಹಪೂರ್ವದಲ್ಲಿ ದೈಹಿಕ ಸಂಬಂಧಕ್ಕೆ ಹುಡುಗಿ ಸಮ್ಮತಿಸಿದ್ದೇಕೆ?' ಎಂಬ ಪ್ರಶ್ನೆಯನ್ನು ಹೆಣ್ಣಿನ ಮೇಲೇ ಹಾಕಿ, ಆದ ಎಲ್ಲ ದುರಂತಗಳಿಗೆ ಆಕೆಯೊಬ್ಬಳೇ ಹೊಣೆ ಎಂಬಂತೆ ಪ್ರತಿಕ್ರಿಯಿಸುವವರೂ ನಮ್ಮ ಸುತ್ತಮುತ್ತ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇಂತಹ ಚಿಂತನೆಗಳೇ ಪಿತೃಪ್ರಧಾನ ಚಿಂತನಾ ಮಾದರಿಗಳ ಸಶಕ್ತ ನಿದರ್ಶನಗಳು.

ಇಲ್ಲಿ ಮೂಲಭೂತ ಪ್ರಶ್ನೆ ಇರುವುದೇ ಸಂಗಾತಿಯನ್ನು ಯಾವ ವಿಚಾರಗಳಲ್ಲಿ ಅರ್ಥ ಮಾಡಿಕೊಳ್ಳಬೇಕು? ಹೇಗೆ ಅರ್ಥ ಮಾಡಿಕೊಳ್ಳಬೇಕು? ಎಷ್ಟು ಅರ್ಥ ಮಾಡಿಕೊಳ್ಳಬೇಕು? ಎಂಬುದಾಗಿದೆ. ಏಕೆಂದರೆ ವ್ಯಕ್ತಿತ್ವದ ಗಟ್ಟಿತನದ ಈ ಪರೀಕ್ಷೆಗೆ ಕಾಲಮಿತಿ ಎಂಬುದಿದೆಯೇ? ಇವತ್ತಿನ ದೃಶ್ಯ ಮಾಧ್ಯಮಗಳು ಮತ್ತು ಸಮೂಹ ಮಾಧ್ಯಮಗಳು ಯೌವನ-ಪ್ರೀತಿ-ಬದುಕು ಎಂಬ ಸರಳ ಮತ್ತು ನೇರ ಸಮೀಕರಣ ಮಾಡುತ್ತಿರುವ ಈ ಕಾಲದಲ್ಲಿ ಎಲ್ಲವನ್ನೂ ಯುವಜನತೆಯ ತಪ್ಪೆಂದು ತಿಪ್ಪೆ ಸಾರಿಸಲು ಸಾಧ್ಯವೇ? 'ನಿಮ್ಮ ಪ್ರೇಮಿಯನ್ನು ಒಲೈಸಬೇಕೇ? ನಮಗೊಂದು ಕಾಲ್ ಮಾಡಿ, ಅವರ ಇಷ್ಟದ ಹಾಡನ್ನು ಪ್ರಸಾರ ಮಾಡುತ್ತೇವೆ', 'ಪ್ರೀತಿಯ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ನಮ್ಮ ಈ ನಂಬರ್‌ಗೆ ಫೋನ್ ಮಾಡಿ', 'ನೀವು ನಿಮ್ಮ ಸಂಗಾತಿಗೆ ಹೇಗೆ ಪ್ರಪೋಸ್ ಮಾಡಿದ್ರಿ? ನಿಮ್ಮಿಬ್ಬರಲ್ಲಿ ಯಾರು ಮೊದಲು ಪ್ರಪೋಸ್ ಮಾಡಿದ್ರಿ? ನಮಗೆ ತಿಳಿಸಿ ಬಹುಮಾನ ಪಡೆಯಿರಿ', 'ಏನು ಇನ್ನೂ ಯಾರನ್ನೂ ಪ್ರೀತಿಸಿಲ್ಲವೇ? ಅಯ್ಯೋ ಪಾಪ?......' ಹೀಗೆ ಪ್ರೀತಿಸದವರು ಬದುಕಿರುವುದೇ ವ್ಯರ್ಥ ಎಂಬಂತೆ ಎಫ್‌ಎಂಗಳ ಉದ್ಘೋಷಕರು, ಟಿವಿ ಚಾನೆಲ್‌ಗಳ ಕಾರ್ಯಕ್ರಮ ನಿರ್ವಾಹಕರು ಹೇಳುವುದನ್ನು ಕಿವಿಗೊಟ್ಟು ಕೇಳುವ ಯುವಜನತೆ, ಪ್ರೀತಿಯ ಬಗ್ಗೆ ತಾಳಬಹುದಾದ ನಿಲುವು ಎಂತಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಹುಚ್ಚು ಕುದುರೆಯ ಬೆನ್ನೇರಿ ಹೊರಟ ಯುವಜನತೆಯ ಕೈಯಲ್ಲಿ ಲಗಾಮು ಇದೆಯೇ? ಅದಕ್ಕೆ ಲಗಾಮು ಹಾಕಲು ಕಲಿಸುವವರು ಯಾರು? ಈಗ ಅವರು ಸಾಗಿರುವ ಹಾದಿ, ಇರುವ ಲಗಾಮನ್ನೂ ಹರಿದೊಗೆದು, 'ನಿನ್ನನ್ನು ನೀನು ನೋಡಿಕೋ, ಸೋಲು-ಗೆಲುವು ನಿನಗೇ ಬಿಟ್ಟದ್ದು' ಎನ್ನುವಂತಿದೆ. ಹೀಗಾಗಿ ಇದರೆಲ್ಲದರ ಒತ್ತಡವನ್ನು ಇಂದಿನ ಯುವತಿಯರು ಎದುರಿಸುತ್ತಿದ್ದಾರೆ. ವಿವಾಹಪೂರ್ವ ದೈಹಿಕ ಸಂಪರ್ಕ ಮಾಡಬೇಡಿ, ಮಾಡಲೇಬೇಕಾಗಿ ಬಂದರೆ ಸುರಕ್ಷಿತ ಲೈಂಗಿಕತೆ ಬಗ್ಗೆ ತಿಳಿದುಕೊಳ್ಳಿ ಎಂದು ಹೇಳಿದ್ದಕ್ಕೆ ಚಿತ್ರನಟಿ ಖುಷ್ಬೂ ಎದುರಿಸಬೇಕಾಗಿ ಬಂದ ಪ್ರತಿರೋಧಗಳನ್ನು ನಾವು ಮರೆಯುವಂತಿಲ್ಲ. ಯಾವಯಾವದೋ ಕಾರಣಕ್ಕೆ ಬದುಕಲ್ಲಿ ಎಡವಿದ, ತಪ್ಪು ನಿರ್ಧಾರದಿಂದ ನೊಂದ ಯುವತಿಯರಿಗೆ ಹಾಗೂ ಎಡವದಂತೆ ಎಚ್ಚರವಹಿಸಲು ಯುವತಿಯರಿಗೆ ನಾವು ಎಲ್ಲಿ? ಹೇಗೆ? ಯಾವ ಸ್ವರೂಪದಲ್ಲಿ ಕಿವಿಮಾತುಗಳನ್ನು ಹೇಳುತ್ತಿದ್ದೇವೆ? ಪಾಠ ಪಠ್ಯದಲ್ಲಿ ಲೈಂಗಿಕ ಶಿಕ್ಷಣದ ಅಗತ್ಯದ ಕುರಿತು ಪ್ರಸ್ತಾವ ಬಂದಾಗಲೆಲ್ಲ ದೊಡ್ಡ ರಂಪಾಟಗಳೇ ನಡೆದುಹೋಗಿ, ಮೂಲಕಾಳಜಿ ಹಿನ್ನೆಲೆಗೆ ಸರಿಯುತ್ತದೆ. ಇವೆಲ್ಲವೂ ಮತ್ತೆ ಯುವತಿಯರ ಒತ್ತಡವನ್ನು ಹೆಚ್ಚಿಸುತ್ತಿವೆ. 'ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ' ಎಂಬಂತೆ ಕೆಲವೊಮ್ಮೆ, 'ಅತ್ತದರಿ ಇತ್ತ ಪುಲಿ' ಎಂಬಂತೆ ಇನ್ನೊಮ್ಮೆ, ಯುವತಿಯರು ಸಂಗಾತಿಗಳ ಜೊತೆಗಿನ ಸಂಬಂಧದ ಎಲ್ಲೆಗಳನ್ನು ಹಾಕಿಕೊಳ್ಳಬೇಕಿದೆ; ಕೊನೆಗೆ ಅಂಥ ದ್ವಂದ್ವದ ನಿಲುವುಗಳೇ, ಸೆಳೆತ-ಎಳೆತಗಳೇ ಬದುಕಿನ ಗಾಡಿ ಮುಗ್ಗರಿಸಲೋ, ಮುಂದುವರಿಯಲೋ ನಿಮಿತ್ತಗಳಾಗುತ್ತವೆ. ಏಕೆಂದರೆ ಈ ಹಂತದಲ್ಲಿ ಅಪನಂಬಿಕೆಯ ಅಪಸ್ವರ ಎದ್ದಾಗ, ವರ್ಷಗಳಿಂದ ಜತನದಿಂದ ಕಟ್ಟಿದ ಸ್ನೇಹದ, ಪ್ರೀತಿಯ ಸಂಬಂಧದ ಬೆಸುಗೆಗಳಲ್ಲಿ ಬಿರುಕು ಬಿಡಬಹುದು; ನಂಬಿಕೆಯ ಹಾದಿಯಲ್ಲಿ ಸಾಗಿದರೆ ಸಾಗಬಹುದಾದ ಸುಖ, ಭದ್ರತೆಗಳೆಂಬ ಆಮಿಷಗಳ ಸೆಳೆತವೂ ನಿರ್ಲಕ್ಷಿಸುವಂಥದ್ದಲ್ಲ. ಈ ತೂಗುಯ್ಯಾಲೆಯಲ್ಲಿ ಕೂತ ಯುವತಿಯರ ಜೀಕುವಿಕೆಯು ಆತಂಕ, ಆಕಸ್ಮಿಕ, ಅನಿರೀಕ್ಷಿತ, ನಿರೀಕ್ಷಿತಗಳ ಒಟ್ಟು ಮೊತ್ತ. ಮನೆಯನ್ನು ಒಳಹೊಕ್ಕು ಅರಿಯುವಂತೆ ಮನದ ಒಳಹೋಗಲು ಬಂದೀತೇ? ಅಂತೆಯೇ ದಾಟುಹಾದಿಯ ಯುವತಿಯರು, ಅವರ ತಲ್ಲಣ, ಆಯ್ಕೆಯ ಸಂದಿಗ್ಧಗಳು ಇಂದು ನಮಗೆ ಮುಖ್ಯವಾಗುತ್ತವೆ.

● ಡಾ.ಸಬಿಹಾ ಭೂಮೀಗೌಡ

ಈ ಮಣ್ಣ ಚರಿತ್ರೆ


ಈ ಸಂಜೆಗಾವಳದ ಧೂಳಿನ ತುಂಬ ನನ್ನದೇ ಪರಂಪರೆಯ
ಕಾರುಣ್ಯದ ಪ್ರತಿಮೆ ಮರುರೂಪ ಪಡೆಯುತ್ತಿವೆ
ಸ್ವಚ್ಛಂದ ಗುಬ್ಬಿಗಳ ಅಜ್ಜ ಕಾಳು ಹಾಕಿ ಸಲುಹಿದ್ದ
ಇದೇ ಅಂಗಳದಲ್ಲಿ
ಮುದ್ದು ಮರಿಗಳು ನಾನು ತುತ್ತು ಕೊಟ್ಟೇನೆಂದರೂ ಹತ್ತಿರಕೂ ಬಾರವು
ಮನುಷ್ಯಲೋಕದ ಮಲಿನತೆ ಸಾಬೀತುಪಡಿಸಿದಂತೆ
ಹಸಿದು ಸತ್ತರೂ ಸತ್ತೇವು ನಿಮ್ಮ ಸಂಗಬೇಡ ಚಿಂವ್‌ಗುಡುತಿವೆ

ನನ್ನ ಮನೆಯ ತಗಡು ಕದಕ್ಕೂ ಬಲುಮುನಿಸು
ಇರಿಯುತ್ತಿರುತ್ತದೆ
ಹೋಗುವಾಗ ಬರುವಾಗ ಅನಿಕೊಂಡು ನಿಂತಾಗ
ಜಂತಿಯ ತುಂಬ ಅವರದೇ ಮಾತಿನ ಮಧುರದನಿಗೆ ಹೊಣೆಯ ಲೇಪನ
ಧೂಳು ಜಾಡಿಸುವ ಮನೆಯ ಮಾಲೀಕನಿಗೆ ಜಂಪುನಿದಿರೆ
ನನ್ನ ಕೈಯಲ್ಲಿ ಮುರುಕು ಕಸಪೊರಕೆ ಹಲ್ಲುಮುರಿದ ಏಣಿ ರಿಪೇರಿ
ಕಲಿಯುತ್ತಿದ್ದೇನೆ

ಕಡ್ಡಿ ಮುರಿದ ಚಕ್ರದ ನನ್ನಜ್ಜನ ಸೈಕಲ್ಲು
ಹುಟ್ಟಿದ ದಿನದ ಸಂಭ್ರಮಕ್ಕೆ ಅಪ್ಪ ಇಮಾನು ನೀಡಿದ
ಜಂಗು ಹತ್ತಿದೆ ಗುಜರಿಗೆ ಹಾಕು ಗೆಳೆಯನ ಪುಗಸಟ್ಟೆ ಉಪದೇಶ
ಗಾಳಿ ತುಂಬಬೇಕು ಪಂಚರ್ ತಿದ್ದಬೇಕು
ಮುರಿದ ಕಡ್ಡಿಯ ತೆಗೆದು ಹೊಸಕಡ್ಡಿ ಹಾಕಿ ಬಣ್ಣ ಕೊಡಬೇಕು
ಸರಾಗ ಚಲಿಸಿ ಗಾಳಿಯಲಿ ತೇಲಿ ಲೋಕ ಕಾಣುವ ಕನಸುಗಣ್ಣಿನಲಿ
ಅವಳೂರಿಗೆ ಒಂದು ಬಾರಿ ಪಯಣಿಸುವ ಉಮೇದು

ಈ ಭೂಮಿಯ ಮಣ್ಣಿನ ಕಣಕಣದಲ್ಲೂ
ಜೀವಪ್ರೇಮವೇ ತುಂಬಿದೆ
ತಮ್ಮ ಬೇಳೆ ಬೇಯಿಸಿಕೊಳ್ಳುವ ಚರಿತ್ರಕಾರರು
ಅಡ್ಡಾದಿಡ್ಡಿಯಾಗಿ ಅವಸರದಲಿ ಗೀಚಿ ಹೋಗಿದ್ದಾರೆ
ಅಸ್ಪಷ್ಟ ಚಿತ್ರ ಪ್ರಾಣ ಬೇಡುವ ಪಾತಕಿ

ಯಾರು ಬುದ್ಧಿ ಹೇಳಬೇಕು ಈ ಹುಂಬ ಹುಡುಗನಿಗೆ
ಕೋಟಿ ವರುಷ ಬಾಳಿದ ಹೆಮ್ಮರದ ತುದಿಯನೇರಿ
ಸಕಲಜೀವಕೂ ಕೇಳಿಸುವ ಹಾಗೆ
ಮನುಕುಲದ ಉದ್ಧಾರ ಸೂತ್ರ ಪಠಿಸುತ್ತಾನಂತೆ



● ವೀರಣ್ಣ ಮಡಿವಾಳರ

ಅಶ್ವಥ್ ನಿಜವಾಗ್ಲು ವಳ್ಳೆ ರೈತನಂಗಿದ್ದ ಕಣೊ

ಅವರೆಲ್ಲಾ ಅಶ್ವತ್ಥ ತೀರಿಕೊಂಡ ಬಗ್ಗೆ ಅಷ್ಟೇನು ...ಪೂರಿತವಾಗಿ ಮಾತನಾಡುತ್ತಿರಲಿಲ್ಲ. ಏಕೆಂದರೆ ...ತ್ಥನಿಗೆ ವಯಸ್ಸಾಗಿತ್ತು, ಆತ ಮಾಡಿದ್ದ ...ಗಳಿಂದ ಅಜರಾಮರವಾಗಿದ್ದರು. ಆದರೆ ...ಗಿಂತ ಇಪ್ಪತ್ತಾರು ವರ್ಷ ಚಿಕ್ಕವನಾಗಿದ್ದ ...ವರ್ಧನ್ ಬಗ್ಗೆ ಹೆಚ್ಚು ಕನಿಕರ ...ರತೊಡಗಿದ್ದರು.

"ಅಶ್ವತ್ಥನಿಗೆ ಅಷ್ಟು ವಯಿಸಾಗಿದ್ರೂ ಮಕದ ಕಡೆ

ಯ ಉ ಸೀ ಮೆ

ಕಟ್ಟೆಪುರಾಣ

► ಬಿ. ಚಂದ್ರೇಗೌಡ

...ವರ್ದನಿಗಿಂತ್ಲೂ ಕಳೇವಾಗಿದ್ದ" ಎಂದ ಉಗ್ರಿ.

"ಶಿಷ್ಯನೇ ಮದ್ದೊದ, ಗುರು ಆಮ್ಯಾಲೋದ"" ...ಸೀರ.

"ಈಗ ನ್ಯಡಿತಾಯಿರದೆ ಅಂಗಲವೇನೊ. ನಮ್ಮ ...ನೆ ಮಾತಾಡಾನ. ನಮಿಗೆ ಪಾಠ ಹೇಳಿಕೊಟ್ಟ ...ನಾರಾಯಣ್ರು, ಪಾಪಣ್ಣಗೌಡ್ರು, ಕಿಷ್ಣೇಗೌಡ್ರು ...ಗಾಣಾಗ್ಯವುರೆ. ಅದೇ ಅವುರ ಕೈಲಿ ಪಾಠ ...ಸಿಕೊಂಡ ರುದ್ರೇಗೌಡ, ರಾಮೇಗೌಡ, ಶಿವಣ್ಣ ...ರಾಮ ಇವತ್ತಿದ್ದರೆ ಹೇಳು" ಎಂದ ಉಗ್ರಿ.

"ಅವುರ್ಯಲ್ಲ ಕುಡುದು ಸತ್ತೋದ್ರು ಕಂಡ್ಯ" ...ಳು ಜುಮ್ಮಿ.

"ಆ ಲೆಕ್ಕದಲ್ಲಿ ನಮ್ಮ ವಾಟಿಸ್ಸೆನೂ ...ಬೇಕಾಗಿತ್ತು ಕಣೇ. ಆದ್ರು ಅವುನವ್ವ" ಎಂದು ...ಹೇಳುವಾಗ ಮಧ್ಯೆ ನುಗ್ಗಿದ ಚಿಕ್ಕಣ್ಣ,

"ಬಂಗಾರದ ಪಂಜರದಲ್ಲಿ ಅಶ್ವತ್ಥ ಭಾಳ ಚನಾಗಿ ...ವುನೆ ಕಂಣ್ರೊ. ಅದ್ಕೆ ನಾನು ಐದಾರು ಸತಿ ...ದಿದೆ."

"ನೀನ್ಯಾಕೆ ಐದಾರು ಸತಿ ನೋಡಿದ್ದಿ ಗೊತ್ತೇನೊ, ...ಕುರುಬರ ಜುಂಜಪ್ಪನ ಕತೆ, ಅದ್ಕೆ ನೋಡಿದ್ದಿ" ...ಉಗ್ರಿ.

"ನನಿಗಿಂತ ಜಾಸ್ತಿ ಸತಿ ನೋಡಿರೊ ಬ್ಯಾರೆ ...ಟೋರ ತೋರ್ಸ್ಲ ನಿಂಗೇ. ಸುಮ್ಮನೆ ...ಡಿತ್ತಿಯಪ್ಪ" ಎಂದು ಚಿಕ್ಕಣ್ಣ ಸಿಟ್ಟಾದ.

"ಆ ಸಿನುಮದಲ್ಲಿ ಅಶ್ವತ್ಥ ಥೇಟ್ ಕುರುಬರ ...ಣ್ಣನಂಗೆ ಕಾಣ್ತನೆ ಕಂಡ್ಯ. ಅವುನೆದ್ರಿ ...ರೊಳಂತೂ ನಮ್ಮ ಮಣ್ಯಾಕ್ಕ ನಂಗೆ ಅವುಳೆ" ...ದು ಜುಮ್ಮಿ.

"ಅವುಳ್ಯಾರು ಗೊತ್ತೇನೇ? ಎಂ.ವಿ. ರಾಜಮ್ಮ ... ಅವುಳು ಬಿ.ಆರ್. ಪಂತಲು ಜೊತೆ ಇದ್ಲು. ...ಬ್ರು ಜೋಡಿ ಭಾಳ ಪೇಮಸ್ ಆಗಿತ್ತು. ಅದೇ ...ಶ್ವತ್ಥ ಪಂಡರಿ ಭಾಯಿ ಜೋಡಿ ಫೇಮಸ್..."

"ಪಂಡ್ರಿಭಾಯಿ ಅಸ್ವತ್ತನೆದ್ರಿ ಕಂಡ್ಯ" ಎಂದ ಸೀರ.

"ಯಾರೊ ಮಾವ ಹೇಳಿದೋರು ನಿಂಗೆ?"

"ಯಾರೊ ಹೇಳಬೇಕೇನ್ಲ? ಯಾವ ಸಿನುಮ ನೋಡು ಅವುರಿಬ್ರು ಗಂಡ ಹೆಂಡತಿ ಪಾರ್ಟು ಮಾಡತಿದ್ರು. ಅಂಗೇ ಮದಿವಾದರು ಕಂಡ್ಯ" ಎಂದು ಸತ್ಯ ಹೇಳಿದ ಗತ್ತಿನಲ್ಲಿ ಕೂತ.

"ಅಂಗರೆ ನಮ್ಮ ಕೆ.ವಿ. ಶಂಕರೇಗೌಡರತ್ರ ರಾಮರಾವ್ ಅಂತ ಇದ್ರಲ್ಲ ಅವುರು ಯಾರ್ನ ಮದಿವಾದ್ರು?"

"ಅದು ನನಿಗೇನು ಗೊತ್ತು?"

"ಇದು ಗೊತ್ತಿದ್ದ ಮ್ಯಾಲೆ ಅದೂ ಗೊತ್ತಿರಬೇಕಪ್ಪ. ಯಾರೊ ಹೇಳಿದ್ರು ಕೇಳಿಬುಟ್ಟೆ. ಅದ್ನೆ ಹೇಳಿಕಂಡು ತಿರುಗ್ತಿ ನೀನು."

"ಮೈಸೂರು ಕಮಲಮ್ಮ ಅಂಗಂತ ಹೇಳಿದ್ಲು ಕಂಡ್ಲ."

"ಮೈಸೂರು ಕಮಲಮ್ಮನಿಗೂ ನಿನಿಗೂ ಸರಿಯಾಗ್ಯದೆ. ನಮ್ಮ ಮಂಡೇವುದ ರಾಮರಾಯನೆ ಕಣೊ ಪಂಡ್ರಿಭಾಯಿ ಮದಿವಾಗಿದ್ದೋನು. ಪಾಪ ದೇವರಂಥ ಅಶ್ವತ್ಥನ ಮ್ಯಾಲೆ ಅನ್ಯಾಯದ ಮಾತಾಡ್ತಿಯಲ್ಲಾ" ಎಂದು ಉಗ್ರಿ ಮೂದಲಿಸಿದ.

"ನನಿಗೇನು ಗೊತ್ಲ?"

"ತಿಳಕಂಡು ಮಾತಾಡಬೇಕು. ಪೇಪರ್‌ನೋರು, ಟಿವಿಯೋರ ತರ ಹಾದಿಬೀದಿಲೋಗೋರ ಮಾತು ಕಟಗಂಡು ಹೇಳಿಕೆ ಕೊಡಬಾರ್ದು."

"ಕರೆಟ್ಟಾಗಿ ಹೇಳಿದೆ ಕಣೊ ಉಗ್ರಿ. ಅಂತೂ ನ್ಯೂಸ್‌ಪೇಪರ್ ಅಂಡ್ ಟಿವಿಯೋರು ಸೀರಚಿಗಪ್ಪನಂಗಾಗ್ಯವುರೆ ಅನ್ನು" ಎಂದು ಹೇಳುತ್ತಾ ವಾಟಿಸ್ಸೆ ಬಂದ.

ಮಾಧ್ಯಮದವರಿಗೆ ತನ್ನನ್ನ ಹೋಲಿಸಿದ್ದಕ್ಕೆ ಖುಷಿಪಟ್ಟ ಸೀರ,

"ಸಿನಿಮಾದೋರ ಕತೆಯ ಇಷ್ಟೆ ಅಂತ ಹೇಳಕ್ಕೆ ಬರದಿಲ್ಲ ಕಂಡ್ಯ. ಪಂತಲು, ಎಂ.ವಿ. ರಾಜಮ್ಮನ ಸಮಂದ ಏನಂತಿರೀ. ಅದ್ಕೆ ಹೇಳಿದ್ದು ನಾನು" ಎಂದ.

"ಹೋಗ್ಲಿ ಬುಡು ಚಿಗಪ್ಪ. ಕೆಲವೊಂದು ಇಮ್ಯಾಜಿನೇಷನ್ ನಮಗೆ ಖುಷಿ ಕೊಡ್ತವೆ. ಇಲ್ಲ ಅನ್ನೊ ನಿರಾಳಕಿಂತ ಏನೊ ಇದೇ ಅನ್ನದೆ ಥ್ರಿಲ್ಲು, ಪರೆಗ್ ಜಾಂಪಲ್...."

"ನಿನ್ನ ಪರೆಗ್‌ಜಾಂಪಲ್ ಬ್ಯಾಡ ಸುಮ್ಮನಿರೊ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ನಿನ್ನದೇನು ನಾನು ಎಗ್‌ಜಾಂಪಲ್‌ಗೆ ಬಳಸ್ತಿರಲಿಲ್ಲ, ಡೋಂಟ್ ವರಿ. ಆದ್ರೆ ಸಿನುಮಾ ರಂಗದಲ್ಲಿ ಅಶ್ವತ್ಥ್‌ನಂತೋರು ಇಲವೆ ಇಲ್ಲವಲ್ಲಾ ಅನ್ನದ ನ್ಯನಿಸಿಗಂಡ್ರೆ ತುಂಬ ಫೀಲಾಯ್ತದೆ."

"ನಿಜ ಕಣೊ. ಅಂತೂ ರಾಜಕುಮಾರನ ತಲೆಮಾರು ಕಡಚಿಟ್ಟಾಯ್ತು" ಎಂದ ಉಗ್ರಿ.

"ರಾಜಕುಮಾರನ ಪಾತ್ರ ಮ್ಯಾಕ್ಕೇರಬೇಕಾದ್ರೆ ಜ್ವತೆಲಿ ಅಶ್ವತ್ಥ ಇರಲೇಬೇಕಾಗಿತ್ತು ಕಣೊ ಉಗ್ರಿ."

"ಅಂಗೇನುಯಿಲ್ಲ ಕಣೊ. ರಾಜಕುಮಾರನಿಗೆ ವಬ್ಬನೇ ನಿಭಾಯಿಸೋ ಶಕ್ತಿಯಿತ್ತು. ಆದ್ರೆ ಅಶ್ವತ್ಥ್ ಎತ್ತಿ ನಿಲ್ಸಿರೋದು ಯಾರ್ನಪ್ಪ ಅಂದ್ರೇ ವಿಷ್ಣುವರ್ಧನ್, ಶ್ರೀನಾಥ್, ರಾಜೇಶ್ ಇಂಥೋರ್ನ. ಆದ್ರು ಅವುನು ಮಾಡಿರೊ ಅಷ್ಟೂ ಸಿನುಮದಲ್ಲಿ ಚನ್ನಗಾ ಮಾಡ್ಯವುನೆ."

"ನಿಜ, ಆ ವಿಷಯದಲ್ಲಿ ಅವುನು ಥೇಟ್ ನಮ್ಮ ದೊಡಪ್ಪನಂಗೆ ಕಣೊ ಉಗ್ರಿ."

"ಕಾಳಮಾವುನಿಗ್ಯಾಕ್ಲ ಹೋಲುಸ್ತಿ?" ಎಂದಳು ಜುಮ್ಮಿ.



"ನಮ್ಮ ದ್ವಡಪ್ಪ ಕೃಷಿ ವಿಷಯದಲ್ಲಿ ಕಲಾವಿದ ಕಣಕ್ಕ. ಮಳೆ ಹುಯ್ಯಲಿ, ಹುಯ್ದೇ ಇರ್ಲಿ, ಭೂದೇವಿ ಮ್ಯಾಲೆ ಭಾರಹಾಕಿ ಮಳೆರಾಯನ ಕಡೆ ಕೈಮುಗಿಯೋನು. ತನ್ನ ವೃತ್ತಿಲಿ ಅಶ್ವತ್ಥನೂ ಅಂಥಾ ನಿಷ್ಠಾವಂತ ಗೊತ್ತೆ."

"ಅವುನು ರಾಜಕುಮಾರನೂ ಅಪ್ಪ ಮಗನ ಪಾರ್ಟು ಮಾಡಿದ್ರೂ ಅಂದ್ರೆ ಆ ಸಿನುಮ ಸಕ್ಸಸ್ಸಾದಂಗೆಯ. ರಾಜಕುಮಾರನ ಅಪ್ಪನ ಪಾರ್ಟಿಗೆ ಅವುನಂಗೆ ಇನ್ನಾರೂ ಸೂಟಾಯ್ತಿರಲಿಲ್ಲ."

"ಮಕ್ಕಳೇಸಿದ್ರೊ ಅವುನಿಗ್ಯೆ?" ಎಂದ ಕಾಳಮಾವ.

"ನಮ್ಮ ಕಾಳದೊಡ್ಡಪ್ಪನ ವಿಶೇಷ ಏನಪ್ಪ ಅಂದ್ರೆ ಯಾರಾರ ತೀರಿಕಂಡ್ರೆ ಅವುರಾಸ್ತಿ ಅಡವಿನ ಬಗ್ಗೆ ಕೇಳದಿಲ್ಲ. ಕೇಳೊ ಮೊದಲ್ನೆ ಪ್ರಶ್ನೆ ಏನಂದ್ರೆ ಮಕ್ಕಳೇಸೇವೆ ಅವ್ನಲ್ಲ ಏನು ಮಾಡ್ತ ಅವೆ ಅಂತ. ಇರ್ಲಿ ಸಾಮಾನ್ಯವಾಗಿ, ವಿಐಪಿ ಪರಸನ್ ಕ್ವಸ್ನೆ ಅಂಗೇ ಇರತವೆ. ಅಶ್ವತ್ಥರಿಗೆ ನಾಕು ಜನ ಮಕ್ಕಳು ದ್ವಡಪ್ಪ, ವಬ್ಬ ಆಗ್ಲೆ ಪಿಚ್ಚರಲ್ಲಿ ಮಾಡ್ತ ಅವುನೆ."

"ಚನ್ನಾಗಿ ಮಾಡ್ಯನೆ."

"ಅಶ್ವತ್ಥನಂಗೆ ಮಾಡದಿಲ್ಲ, ಆದ್ರು ಮಾತಿನ ತೂಕ ಸಿಕ್ಕದೆ. ಮುಂದೆ ನೋಡಬೇಕು. ಆದ್ರು ಮಕ್ಕಳಲ್ಲಿ ಅಪ್ಪನ್ನ ಕಾಣಕ್ಕೆ ಹೋಗಬಾರ್ದು. ಅವುರೆ ಬ್ಯಾರೆ, ಇವುರೆ ಬ್ಯಾರೆ. ಪರೆಗ್‌ಜಾಂಪಲ್ ರಾಜಕುಮಾರನ್ನ ಅವುನ ಮಕ್ಕಳಲ್ಲಿ ಕಾಣದು ಫೂಲಿಸ್‌ನೆಸ್."

"ಅಸ್ವತ್ತ ವಳೆನರಸೀಪುರದ ಕಡಿಯೋನಂತೆ ಕಂಡ್ಯ" ಎಂದ ಸೀರ.

"ದಾವೇಗೌಡನಿಗೂ ಪ್ರೆಂಡಂತೆ."

"ಅಶ್ವತ್ಥನಿಗೆ ಅಂತ ಪ್ರೆಂಡ್ಸ್ಯಾ ಇರಲಿಲ್ಲ ಕಣೊ ಉಗ್ರಿ. ಅಂತದ್ರಲ್ಲಿ ದ್ಯಾವೇಗೌಡನಿಗೆ ಪ್ರೆಂಡಾಗಿದ್ದ ಅಂತಿಯಲ್ಲ ಹೇಳು."


"ನಿಜ, ಅಂಗೇ ನೋಡಿದ್ರೆ ದ್ಯಾವೇಗೌಡನಿಗೆ ಅಂತ ಪ್ರೆಂಡ್ಸ್ಯಾರೂ ಇಲ್ಲ. ಇದ್ದಿದ್ರೆ ಅವುನು ನೈಸ್ ರಸ್ತೆ ಮಾಲೆ ಬಂದು ಕೂತಗತಿರಲಿಲ್ಲ."

"ಅವುನ್ಯಾಕ್ ಬಂದು ಕುಂತವುನೆ ಗೊತ್ತೇನೊ. ನಯಸ್ ರೋಡ ಮಗ್ಲಲ್ಲಿ ಅವುನ ಜಮೀನು ಇದ್ದತಂತೆ ಅದ್ಕೆ ಅಂಗಾಡ್ತನೆ."

"ಮತ್ತೆ ಆಣೆ ಪ್ರಮಾಣ ಮಾಡ್ತರಲ್ರೊ."

"ಯಾಕೆ ಅಂದ್ರೆ ಅಲ್ಲಿರೊ ಜಮೀನ್ಯಾವುದೂ ಅವುರೆಸರಲ್ಲಿಲ್ಲ, ಅದ್ಕೆ ಆಣೆ ಮಾಡ್ತರಂತೆ. ಹೋರಾಟದಲ್ಲಿ ರೈತರ ಬಗ್ಗೆ ದ್ಯಾವೇಗೌಡನಿಗೆ ನಿಜವಾದ ಕಾಳಜಿ ಇದ್ರೆ ದಾವಣಗೆರೆ ರೈತರ ಸಭೆಗೂ ಹೋಯಿತ್ತಿದ್ದ. ಬಳ್ಳಾರಿ ಏರೋಪ್ಲೇನ್ ನಿಲ್ದಾಣಕ್ಕಾಗಿ ಜಮೀನು ಕಳಕಳೊ ಸ್ಥಿತಿಗೆ ಬಂದಿರೊ ರೈತರು ಬೆಂಗಳೂರು ಗಂಟ ನ್ಯಡಕಂಡು ಬಂದ್ರಲ್ಲ ಅಲ್ಲಿಗ್ಯಾಕ್ ಹೋಗಲಿಲ್ಲ? ಚಾಮರಾಜನಗರದ ರೈತರು ಕಾಲು ಕಿತ್ತೋಗೋವರಿಗೂ ನ್ಯಡಕಂಡು ಬಂದ್ರು. ಅವುರೆದ್ರಿಗೋಗಿ ಒಂದ್ಯರಡು ಸಮಾಧಾನದ ಮಾತೇಳಕ್ಕಾಗದೋದು ನೈಸ್ ರಸ್ತೆ ಮ್ಯಾಲೆ ರಚ್ಚೆ ಹಿಡಕಂಡು ಕುಂತವುನೆ ಅಂದ್ರೆ ನನಿಗಷ್ಟೇ ಅಲ್ಲ ನಮ್ಮ ದ್ವಡಪ್ಪನಂಥೋರಿಗೂ ಡವುಟ ಬರಬೇಕು, ಅಲವೆ ದ್ವಡಪ್ಪ?"

"ಅಮಿಕ್ಕಂಡೋಗ್ಲ ಕಂಡಿದ್ದಿನಿ."




ಕವಿಗಳು! ಕವಿಗಳು!

ಪದ್ಯದ ಪುಸ್ತಕಗಳ ಸುರಿಮಳೆ! ನಮಗೆ ದಿನಕ್ಕೆ ಕನಿಷ್ಠ ನಾಲ್ಕು ಕವನ ಸಂಕಲನಗಳು ಬರುತ್ತವೆ. ಒಳಗೆ ತೆಗೆದು ನೋಡಿದರೆ ಎಲ್ಲರೂ ಒಂದೇ ರೀತಿಯಲ್ಲಿ ಬರೆಯುತ್ತಾರೆ. ಒಬ್ಬರ ಕವನಗಳನ್ನು ಇನ್ನೊಬ್ಬರ ಸಂಕಲನಕ್ಕೆ ಹಾಕಿದರೂ ನಡೆಯುತ್ತದೆ. ಇವರಲ್ಲಿ ಯಾರೂ "ಇದನ್ನು ನಾನು ಬರೆಯಬೇಕಿತ್ತೆ" ಎಂದು ಕೇಳಿಕೊಳ್ಳುವುದಿಲ್ಲ.

ದ.ರಾ. ಬೇಂದ್ರೆ ಯಾಕೆ ಪದ್ಯದಲ್ಲಿ ಬರೆದರು? ಅವರಿಗೆ ಪದ್ಯ ಬರೆಯಲು ಬರುತ್ತಿತ್ತು ಎಂಬುದು ಸಣ್ಣ ಕಾರಣ; ಅದಕ್ಕಿಂತ ಅರ್ಥಪೂರ್ಣ ಕಾರಣ ಅವರಿಗೆ ಪದ್ಯದಲ್ಲಿ ಹೇಳಿದಷ್ಟು ಸೊಗಸಾಗಿ ಗದ್ಯದಲ್ಲಿ ಹೇಳಲು ಆಗುತ್ತಿರಲಿಲ್ಲ, ಪದ್ಯದ ಒನಪು, ಸಾಂಕೇತಿಕತೆ, ಅನುರಣನ ಗದ್ಯಕ್ಕೆ ಸರಿಹೋಗುವುದಿಲ್ಲ. ಪದ್ಯದಲ್ಲಿ ಅಸ್ಪಷ್ಟವಾದದ್ದು ಗದ್ಯದಲ್ಲಿ ಶೋಭಿಸುವುದಿಲ್ಲ, ಬೇಂದ್ರೆ ಮನೋಧರ್ಮ ಪದ್ಯದ್ದು, ವಿಚಿತ್ರ ಗಮ್ಮತ್ತಿನದು. ಈಗ ಬೇಂದ್ರೆಯವರನ್ನು ಮರೆತು ಯೋಚಿಸಿ. ಗದ್ಯ ಬರೆಯುವುದು ತುಂಬ ಕಷ್ಟ. ಗದ್ಯ ಹುಟ್ಟಿದ್ದೇ ಪ್ರತಿಭಟನೆ, ದೂರು, ವರದಿಯಿಂದ; ಅನ್ನಿಸಿದ್ದನ್ನು ಇನ್ನೊಬ್ಬರಿಗೆ ಹೇಳಿ ವೈಚಾರಿಕವಾಗಿ ಒಪ್ಪಿಸುವ ಅವಶ್ಯಕತೆಯಿಂದ. ಗದ್ಯಕ್ಕೆ ಅನಿವಾರ್ಯತೆ, ಖಚಿತ ರೂಪು ಇಲ್ಲ ಎಂದು ಕೆಲವರು ತಪ್ಪು ತಿಳಿಯುತ್ತಾರೆ. ಆಡುಮಾತು ಗದ್ಯವಲ್ಲ; ಗದ್ಯಕ್ಕೆ ತನ್ನದೇ ಆದ ಒಳ ಛಂದಸ್ಸು, ಮಾಧುರ್ಯ ಇರುತ್ತದೆ. ಆದ್ದರಿಂದಲೇ ಗದ್ಯದಿಂದ ಆರಂಭಿಸಿ ಅದರಲ್ಲಿ ಹೇಳಲಾರದ್ದು ಇದ್ದರೆ ಮಾತ್ರ ಪದ್ಯದಲ್ಲಿ ಹೇಳಿದರೆ ಒಳ್ಳೆಯದು.

ಈಚೆಗೆ ಯು.ಆರ್. ಅನಂತಮೂರ್ತಿ ಒಮ್ಮೆಗೇ ಅನೇಕ ಪದ್ಯ ಬರೆದಿದ್ದಾರೆಂದು ಕೆಲವರು ಹೇಳಿದರು; ದಲೈಲಾಮಾ ಬಗ್ಗೆ ಚೆನ್ನಾಗಿ ಪದ್ಯ ಬರೆದಿದ್ದಾರೆ ಎಂದು ಹೇಳಿದರು. ಅವರ ಕಾವ್ಯ ಬಲ್ಲ ನಾನು ಸುಮ್ಮನೆ ಹೇಳಿದೆ, "ಅವರು ಆ ಬಗ್ಗೆ ಗದ್ಯದಲ್ಲಿ ಬರೆದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತೆಂದು ಕಾಣುತ್ತದೆ. ಅದನ್ನು ಓದಿದರೆ ವಿವರಿಸಬಲ್ಲೆ."


ಫೆಬ್ರವರಿ 23, 1992



ದೇವರ ತೀರ್ಪು ಬರಲಿ!

ಥೂ ಹಾಳಾದ ಜನ. ಒಲ್ಲದ ಗಂಡನಂಗೆ ಮೊಸರಿ ನಲ್ಲೂ ಕಲ್ಲು ಹುಡುಕ್ತಾರೆ. ಸರ್ಕಾರಿ ಅಧಿಕಾರಿಗಳು ಮೈಗಳ್ಳರು ಅಂತ ಹಾದಿಬೀದೀಲೆಲ್ಲ ಚೀರಾಡ್ತಾರೆ. ತಮಗೆ ಅಂಟಿರುವ ಈ ಕಳಂಕಾನ ತೊಳ್ಕೋಬೇಕು ಎಂದು ಅವರು ಮಧ್ಯ ರಾತ್ರಿಯಾದರೂ ಹೆಂಡಿರ ನೆನಪಿಸಿಕೊಳ್ಳದೆ ಕಚೇರೀಲಿ ಕುಂತು ಕೆಲಸ ಮಾಡಿದರೆ, 'ಹಿಂಗೆ ಕೆಲ್ಸ ಮಾಡ್ಬೇಕಾದ್ರೆ ಏನೋ ಇರಂಗದೆ' ಎಂದು ಅದಕ್ಕೂ ಕೊಂಕು ನುಡೀತಾರೆ. ಜನರ ಈ ರೀತಿಯ ಅಸಹ್ಯಕರ

ಅನೇಕ



▸ ಎಚ್.ಎಲ್. ಕೇಶವಮೂರ್ತಿ

ವರ್ತನೆಯಿಂದ ಅವರಿಗಿಂತಲೂ ಹೆಚ್ಚು ಬೇಸರ ತಂದಿರೋದು ನೈತಿಕತೆಯ ಸಾಕಾರಮೂರ್ತಿಯಂತಿರುವ ಯಡ್ಯೂರಪ್ಪನವರಿಗೆ. 'ನಾಳೆ ಕೆಲಸ ಇವತ್ತೇ ಮಾಡ್ತೀನಿ ಅದೂ ತಪ್ಪಾ' ಎಂದು ನೊಂದು ನುಡಿದಿದ್ದಾರೆ. 'ಅವರೇನು ಮನೆಗೆ ಫೈಲು ಹೊತ್ಕೊಂಡು ಹೋಗಿರ್ಲಿಲ್ಲ, ಅಧಿಕೃತವಾಗಿ ಕಚೇರಿಯಲ್ಲೇ ಕುಳಿತು ವಿಲೇವಾರಿ ಮಾಡಿದ್ದಾರೆ. ಇದು ತಪ್ಪಾ' ಎಂದು ಸಭಿಕರನ್ನೇ ಪ್ರಶ್ನಿಸಿದ್ದಾರೆ. ನ್ಯಾಯವಾದ ಪ್ರಶ್ನೇನೆ. ಬೆಂಗಳೂರು ನಗರದ ನಿವಾಸಿಗಳಿಗೆ ಅನುಕೂಲ ಮಾಡುವ ಸದಿಚ್ಛೆಯಿಂದ ಇಡೀ ರಾತ್ರಿ ಕುಳಿತು ಮೂರು ಸಾವಿರ ಚಿಲ್ಲರೆ ಕೋಟಿ ರೂಪಾಯಿಯ ಕಾಮಗಾರಿಗೆ ಅನುಮೋದನೆ ನೀಡಿದ್ದರೂ ಕೆಲವರು ಇದನ್ನ ಅರ್ಥ ಮಾಡಿಕೊಳ್ಳದೆ ನೂರಾರು ಕೋಟಿ ಲಂಚದ ಹಣಕ್ಕೆ ಹೀಗೆ ಮಾಡಿದಾರೆ ಅಂತ ಗುಲ್ಲೆಬ್ಬಿಸುವುದು ತರವಲ್ಲ ಅನ್ನುವುದು ಮಾನ್ಯ ಮುಖ್ಯಮಂತ್ರಿಗಳ ಮಾತಿನ ಸಾರಾಂಶ ಆಗಿತ್ತು, ಪಾಪ ಆನ್‌ಲೈನ್ ಕೈಕೊಟ್ಟರೂ ಅಧಿಕಾರಿಗಳು ಕರ್ತವ್ಯ ನಿಷ್ಠೆ ಮರೆತಿರಲಿಲ್ಲ.

ಇದನ್ನೆಲ್ಲ ಮಾನ್ಯ ಮುಖ್ಯಮಂತ್ರಿಗಳು ವಿವರಿಸುತ್ತಾ ಇರಬೇಕಾದರೆ ಸಭಿಕರು ಇದಾರಲ್ಲೀ ಅವರು ಕರ್ತವ್ಯ ನಿಷ್ಠ ಅಧಿಕಾರಿಗಳಿಗೆ, ಅಭಿವೃದ್ಧಿ ಮಂತ್ರ ಜಪಿಸುತ್ತಿರುವ ಭಾಜಪ ಸರ್ಕಾರದ ಸಾಧನೆಗೆ ಮೆಚ್ಚಿಗೆ ಸೂಚಿಸಿ ಚಪ್ಪಾಳೆ ಹೊಡೆದದ್ದು ಯಡ್ಯೂರಪ್ಪನವರಿಗೆ ಇರುಸುಮುರಿಸು ತಂದಂತಾಯಿತಂತೇ. ಯಾಕೇಂದರೆ ಸಭಿಕರ ಚಪ್ಪಾಳೆಯ ಸಂದೇಶ ಮುಖದಲ್ಲಿ ವ್ಯಕ್ತವಾಗುತ್ತಿರಲಿಲ್ಲವಂತೆ! 'ಇನ್ನಾದರೂ ಇಂಥ ಬೊಗಳೆ ಮಾತ ಬುಡೋ ಮಾರಾಯ' ಅನ್ನುವಂತೆ ತೋರುತ್ತಿತ್ತಂತೆ. ಸಭಿಕ ಮಹಾಶಯರು ಸರ್ಕಾರದ ಕಾರ್ಯಕ್ರಮದಲ್ಲೇ ಈ ರೀತಿ 'ಮುಖಚರ್ಯೆ' ತೋರಿದರೆ ಇನ್ನು ಸಾರ್ವಜನಿಕ ಸಭೆಗಳಲ್ಲಿ 'ಮುಖಚರ್ಯೆ'ಯ ಜೊತೆಗೆ 'ಬಾಯಿಚರ್ಯೆ'ಯೂ ಬರಬಹುದು ಎಂಬ ಆಲೋಚನೆಯೇ ಮಾನ್ಯ ಮುಖ್ಯಮಂತ್ರಿಗಳನ್ನು ಕಂಗೆಡಿಸಿತಂತೆ.


ನೋಡಬೇಕು. 'ದೇವವಂಶದ ಬೈಗುಳ, ಆಪಾದನೆಗಳಿಗೆ ಉತ್ತರಿಸುವುದಿಲ್ಲ, ಮೌನವಾಗಿರುತ್ತೇನೆ' ಎಂದು ಸಭ್ಯ ನಡವಳಿಕೆ ತೋರಿದಂತೆಯೇ 'ಸಾರ್ವಜನಿಕರ ಆಪಾದನೆಗಳಿಗೆ ಮೌನ ತಾಳುತ್ತೇನೆ' ಎಂದು ಸಾರಿ ಸಾರ್ವಜನಿಕ ಸಭೆಗಳನ್ನೇ ನಡೆಸದೆ ಇರಬಹುದು! ವಾಚಕ ಮಹಾಶಯರಿಗೆ ಇಲ್ಲಿ ಒಂದು ಸಂಶಯ ತೋರಬಹುದು. 'ಜನತಾ ನ್ಯಾಯಾಲಯದ ಮುಂದೆ ಇದನ್ನೆಲ್ಲ ತಗೊಂಡೋಗ್ತೀನಿ. ಅವರೇ ತೀರ್ಮಾನ ಹೇಳಲಿ' ಎಂದು ಸಾರಿಸಾರಿ ಹೇಳ್ತಿದ್ದಾರಲ್ಲ ಮುಖ್ಯಮಂತ್ರಿಗಳು.... ಅವರ ಮುಂದೆ ಚರ್ಚೆ ಆಗಬಾರದ ಇವೆಲ್ಲ ಅಂದರೆ..... ಜನತಾ ನ್ಯಾಯಾಲಯದ ತೀರ್ಪಿನಲ್ಲಿ ಘನತೆವೆತ್ತ ನ್ಯಾಯಾಲಯಗಳ ಕೆಲವು ತೀರ್ಪಿನಂತೆ ಹಣವೇ ಪ್ರಾಧಾನ್ಯ. ಅದು ಯಾರ ಹತ್ರ ಹೆಚ್ಚು ಇರುತ್ತೋ ಅವರ ಕಡೆ ಜನತಾ ನ್ಯಾಯ ದೇವತೆ ಒಲಿಯುತ್ತಾಳೆ ಎಂಬುದುರ ಅರಿವು ಅವರಿಗಿದೆ!

ಕೇವಲ ರಾಜಕಾರಣಿಗಳು ಬಿಬಿಎಂಪಿ ಟೆಂಡರ್ ಪ್ರಕ್ರಿಯೆ ಪಾರದರ್ಶಕವಾಗಿ ನಡೆದಿದೆ, ಭ್ರಷ್ಟಾಚಾರ ಲವಲೇಶವೂ ಇಲ್ಲ ಎಂದು ಸಾರಿದರೆ ಜನ ನಂಬಲ್ಲ ಅನ್ನುವುದು ರಾಜಕಾರಣಿಗಳಿಗೆ ಗೊತ್ತಿರುವ ಸಂಗತಿಯೇ ಸರಿ. ಅದಕ್ಕೇ ಅವರು ಬೃಹತ್ ಬೆಂಗಳೂರು ನಗರಪಾಲಿಕೆ ಆಯುಕ್ತರಿಂದಲೂ ಒಂದು ಮಾತು ಹೇಳಿಸಿದರು. ಆದರೇನು ಮಾಡ್ತೀರಿ ಕುಮಾರ ಸ್ವಾಮಿ ಅನ್ನೋ ಮಾಜಿ ಮುಖ್ಯಮಂತ್ರಿ 'ಅವರು ಲಂಚ ನೀಡಿಯೇ ಆಯುಕ್ತರಾಗಿದಾರೆ' ಅಂತ ಆರೋಪ ಮಾಡ್ತಾರೆ. ಇವೆಲ್ಲ ಮಾಮೂಲಿ ಪ್ರಕ್ರಿಯೆ ಅಂತ ಸುಮ್ಮನಿರೋಣ ಅಂದರೆ....

ರಾಮ ರಾಮಾ... ಕೇಶವಕೃಪ ಎಂದರೆ ಏನು... ಅದರಲ್ಲಿರುವ ಜನ ಎಂತಹ ಸದ್ಗುಣ ಸಂಪನ್ನರು.. ಅದರಲ್ಲಿ ಅರಳುವ ಕಮಲ ಎಷ್ಟೊಂದು ಸುವಾಸನೆಯುಕ್ತವಾದುದು.... ಅವಕ್ಕೂ ಕಳಂಕ ಹೊರೆಸುತ್ತಿದ್ದಾರೆ ಮಾಜಿಗಳು. ಅವಕ್ಕೆಲ್ಲ ಲಂಚದ ಹೊಲಸು ಮೆತ್ತಿಕೊಂಡಿದೆ... ಕಮಲದ ಹತ್ತಿರ ಹೋದರೆ ಸಾಕುಮಲದ ವಾಸನೆ ಮೂಗಿಗೆ ಬಡಿಯುತ್ತೆ... ಎಂದೆಲ್ಲ ಆರೋಪ ಹೊರಿಸುತ್ತಿದ್ದಾರೆ.... ಅವೆಲ್ಲ ಇಂತಹವುಗಳಿಂದ ಬಲುದೂರನಪ್ಪ ಎಂದು ಹೇಳಲು ಹೋದವರಿಗೆ 'ದೇವರ ಮೇಲೆ ಪ್ರಮಾಣ ಮಾಡಿ ಹೇಳಲಿ' ಅನ್ನುತ್ತಿದ್ದಾರೆ ಅವರು!

ಇದೇನಿದು ಇವನೂ ನಮ್ಮ ಹಾದೀನೇ ತುಳೀತಿರೋ ಹಂಗಿದೆಯಲ್ಲಾ..... ಇಂತಹ ಆರೋಪವನ್ನೇ ಸದಾ ಮಾಡುತ್ತಾ ಹೋದರೆ ಜನ ಸತ್ಯ ಅಂದುಕೋಬಹುದು ಎಂದು ದಿಗಿಲಿಸಿದ ಮಾನ್ಯ ಮುಖ್ಯಮಂತ್ರಿಗಳು 'ಪ್ರಮಾಣ ಮಾಡಲು ಸಿದ್ಧ' ಎಂದು ಸಾರಬೇಕಾಯಿತು.

ಮುಖ್ಯಮಂತ್ರಿಗಳು ಹಾಗೆ ಅಂದರೋ ಇಲ್ವೋ... ಮತ್ತೊಂದು ರೀತಿಯ ಗೊಂದಲ ಉಂಟಾಯಿತು. ಕೇಶವ ಕೃಪದಲ್ಲಿ ಇದು ಚರ್ಚೆಗೆ ಬಂದಿತು. ಆ ದಯಾಮಯನು ಸರ್ವಾಂತರ್ಯಾಮಿ. ಆದುದರಿಂದ ನಾವು ಎಲ್ಲಿ ಪ್ರಮಾಣ ಮಾಡಿದರೂ ಒಂದೇ. ದೇವಾಲಯಗಳಿಗೆ ಹೋಗುವ



ಅವಶ್ಯಕತೆ ಇಲ್ಲ, ನಮ್ಮ ಮಾತೇ ಪ್ರಮುಖ ಎಂಬ ತೀರ್ಮಾನ ತೆಗೆದುಕೊಂಡರೆಂಬ ವದಂತಿ ಹಬ್ಬಿತು. ಅತ್ತ ಕೇಶವಕೃಪ ದೇವರ ಮೇಲಿನ ಪ್ರಮಾಣಕ್ಕೆ 'ಸರ್ವಾಂತರ್ಯಾಮಿ' ಗುರಾಣಿ ಹಿಡಿದು ನಿಂತರೆ ಇತ್ತ ಲಿಂಗಾಯತ ಮಠಾಧೀಶರು ಬೇರೆಯದೇ ಮಾರ್ಗ ಹಿಡಿದರು. ದೇವರು ನೆಲೆಸಿರುವುದೇ ತಮ್ಮ ಮಠಗಳಲ್ಲಿಯಾದುದರಿಂದ ಇಲ್ಲಿಯೇ ನಡೆಯಲಿ ಎಂದು ವಾದಿಸಿದರು. ಸಮಸ್ಯೆಯ ಪರಿಹಾರಕ್ಕಾಗಿ ಯಾವ ಮಠವನ್ನೇ ಆಯ್ದುಕೊಂಡರೂ ಆ ಮಠದ ವರ್ಚಸ್ಸು ಯದ್ವಾತದ್ವಾ ಏರುವುದೆಂಬುದು ಜಗತ್ತಿಗೆ ತಿಳಿದಿರುವ ಸಂಗತಿ. ಜಗದ್ಗುರುಗಳಲ್ಲೇ ಕಲಹ ಮೂಡಿ ವೀರಶೈವ ಲಿಂಗಾಯತ ಭಕ್ತಗಣದಲ್ಲೇ ಒಡಕುಂಟು ಮಾಡುವ ಸಾಧ್ಯತೆಯೇ ಹೆಚ್ಚಿರುವಂತೆ ತೋರಿತು. ತಾವು ಪೂಜಿಸಿ ಒಲಿಸಿಕೊಂಡಿರುವ ಯಾವುದಾದರೂ ಈಶ್ವರ ದೇವಾಲಯಲಿದಲ್ಲಿ ಈ ಪ್ರಮಾಣ ಪರೀಕ್ಷೆ ನಡೆಯಲಿ ಎಂಬ ಸಂದೇಶವನ್ನು ರವಾನಿಸಿದರೆಂದು ಗುಲ್ಲೆಬ್ಬಿತು.

ಸಚ್ಚಾರಿತ್ರ್ಯದ ಯಡ್ಯೂರಪ್ಪನವರು ದೇವರ ಮೇಲೆ ಪ್ರಮಾಣ ಮಾಡಲು ಸಿದ್ಧ ಎಂದು ಬಹಿರಂಗಪಡಿಸಿದ್ದರಷ್ಟೆ. ಕೇಶವಕೃಪದಲ್ಲಿ ತೆಗೆದುಕೊಂಡ ತೀರ್ಮಾನ ಅವರಿಗೆ ಅಪ್ಯಾಯಮಾನವಾಗಿತ್ತು ನಿಜ. ದೇವರು ಸರ್ವಾಂತರ್ಯಾಮಿಯಲ್ಲ, ಅವನೇನಿದ್ದರೂ ಇರುವುದು ದೇವಸ್ಥಾನಗಳಲ್ಲೇ ಎಂದು ಜನ ನಂಬಿದ್ದಾರೆ. ಕೇಶವಕೃಪ ತೀರ್ಮಾನ ಜನರ ಮನ್ನಣೆಗೆ ಪಾತ್ರವಾಗಲಾರದು ಎಂಬ ಕಾರಣಕ್ಕೆ ವೀರಶೈವ ಜಗದ್ಗುರುಗಳ ಮಾತನ್ನೇ ಅನುಮೋದಿಸಬೇಕೆಂದಿದ್ದದ್ದು ಕುಮಾರಸ್ವಾಮಿ ಮೂಗಿಗೆ ಬಡಿಯಲಾಗಿ ಈ ಲಿಂಗಾಯತರ ದೇವರನ್ನು ನಂಬಲಾಗದು. ಅವೇನಿದ್ದರೂ ಸತ್ಯಕ್ಕಿಂತ ಜಾತಿ ಒಲವು ಇರುವವು ಎಂದು ಊಹಿಸಿ... 'ಬನ್ನಿ ಧರ್ಮಸ್ಥಳಕ್ಕೆ' ಎಂಬ ಪಂಥಾಹ್ವಾನ ನೀಡಿದರು.

ಈಗ ಧರ್ಮಸ್ಥಳದ ಮಂಜುನಾಥ ದೇವರಿಗೆ ರಾಜಸಂಕಟ. ಒಬ್ಬ ಹಾಲಿ, ಇನ್ನೊಬ್ಬ ಮಾಜಿ. ಇಬ್ಬರಿಗೂ ಸುಳ್ಳೇ ಮನೆದೇವರು. ಧರ್ಮಸೂತ್ರ ಹಿಡಿಯಬೇಕೆಂದುಕೊಂಡ.

ಆ ದಿನ ಬಂತು. ಹಾಲಿ ಮಾಜಿಗಳಿಬ್ಬರು ಶುಚಿರ್ಭೂತರಾಗಿದ್ದರು-ಮನದೊಳಗೆ ಹೊಲಸು ತುಂಬಿದ್ದರೂ!

'ಭ್ರಷ್ಟಾಚಾರ ನಡೆದಿದೆ' ಎಂದರು ಮಾಜಿ ಮಂಜುನಾಥನ ಮೇಲೆ ಆಣೆ ಮಾಡಿ. ಇವರ ಮೈಗೆ ಅಂಟಿದ ಮೈಲಿಗೆ ಹಳೆಯದಾಗಿತ್ತಲ್ವ.... ವಾಸನೆ ಕಡಿಮೆ ಆಗಿದ್ದೂ ನಾತ ಹೋಗಿರಲಿಲ್ಲ.

'ಪಾರದರ್ಶಕ ಆಡಳಿತ ನೀಡಿದ್ದೇನೆ. ಭ್ರಷ್ಟಾಚಾರ ನಡೆದಿಲ್ಲ' ಎಂದಿತು ಹಾಲಿ. ಇಡೀ ವಾತಾವರಣದ ತುಂಬ ಹೊಲಸು ವಾಸನೆ ಮೂಗು ಕಿತ್ತು ಹೋಗುವಂತೆ ಆಡರಿತ್ತು.

ಮಂಜುನಾಥ ದೇವರು ಇಬ್ಬರ ಮಾತನ್ನು ಕೇಳಿಸಿಕೊಂಡ, ದುರ್ನಾತವನ್ನು ಸಹಿಸಿಕೊಂಡು!

ಹಿಂದೂ ಧರ್ಮ ಎಚ್ಚೆತ್ತಿತು. ಸಾರಿತು-ದೇವರನ್ನು ಹೀಯಾಳಿಸಲಾಗಿದೆ!

ನ್ಯಾಯಾಲಯದ ಮೆಟ್ಟಲೇರಿತು ಹಿಂದೂ ಚೈತನ್ಯ. ದೇವರಿಗೇ ದೂರು ನೀಡಬಹುದಿತ್ತಲ್ಲ?

ಹುಚ್ಚು ಮಾತು. ನ್ಯಾಯಾಲಯಗಳು ಇರುವುದೇ ದೇವರುಗಳ ಸಮಸ್ಯೆ ತೀರ್ಮಾನಕ್ಕೆ.

ಈ ಕೋರ್ಟು ಹಾಳಾಗಲಿ. ಮಂಜುನಾಥ ದೇವರ ಕೋರ್ಟಿನಲ್ಲಿ ಏನಾಯಿತು?

ತೀರ್ಪು ಹೊರಬಂದಿಲ್ಲ!

ಯಾವಾಗ ಬರುತ್ತೆ?


ಕಾಯ್ದು ನೋಡಿ!

ಅಲ್ಲಿಯವರೆವಿಗೂ ಈ ಈರ್ವರು ಮಹನೀಯರೂ ಸರ್ವಗುಣ ಸಂಪನ್ನರು! ●

ಹೊಸನೀರಿಗೊಂದು ಮರೆತ ತೊರೆ

ಗೌರಿ ಲಂಕೇಶ್ ಪತ್ರಿಕೆಯಲ್ಲಿ ನಮ್ಮ ನಡುವಿನ ಸಾಂಸ್ಕೃತಿಕ ಚಿಂತಕ ಹಾಗೂ ಬರಹಗಾರರಾದ ಡಾ. ರಹಮತ್ ತರೀಕೆರೆ ಅವರು ಬರೆಯುತ್ತಿರುವ 'ಹೊಳೆಗೆ ಹೊಸ ನೀರು' ಲೇಖನ ಮಾಲೆಯು ಹೊಸತಲೆಮಾರಿನ ಸಾಕಷ್ಟು ಯುವ ಲೇಖಕರನ್ನು ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಜಗತ್ತಿಗೆ ಪರಿಚಯಿಸುತ್ತಲೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ವಿಸ್ತಾರಗೊಳಿಸುತ್ತಲಿದೆ. ಅದಕ್ಕಾಗಿ ಡಾ. ತರೀಕೆರೆ ಅವರಿಗೆ ನಮ್ಮ ಪ್ರೀತಿಪೂರ್ವಕ ಗೌರವದ ಅಭಿನಂದನೆಗಳು.

ಜನವರಿ 27ರ ಈ ಕಾಲಮ್ಮಿನಲ್ಲಿ ಹೊಸ ತಲೆಮಾರಿನ ಸೂಕ್ಷ್ಮ ಸಂವೇದಿ ಕವಿ ಎನ್.ಕೆ.ಹನುಮಂತಯ್ಯ ಅವರನ್ನು ಪರಿಚಯಿಸುತ್ತಾ "...ಸಿದ್ಧಲಿಂಗಯ್ಯ, ದೇವನೂರು, ಎಲ್. ಹನುಮಂತಯ್ಯ, ಮಾಲಗತ್ತಿ ಮುಂತಾದವರದು ಮೊದಲ ತಲೆಮಾರು. ಮೊಗಳ್ಳಿ, ಕುಕ್ಕರಹಳ್ಳಿ, ಜಾಹ್ನವಿ ಮುಂತಾದವರದು ಎರಡನೆಯ ತಲೆಮಾರು ಎನ್ನುವುದಾದರೆ ದು. ಸರಸ್ವತಿ, ಸುಬ್ಬು ಹೊಲೆಯಾರ್, ಎನ್. ಕೆ. ಹನುಮಂತಯ್ಯ, ಅನಸೂಯಾ ಕಾಂಬ್ಳೆ, ಇವರದು ಮೂರನೆಯ ತಲೆಮಾರು ಎನ್ನಬಹುದು" ಎಂದು ಗುರುತಿಸುವಲ್ಲಿ ಒಂದು ತಲೆಮಾರಿನ ದಲಿತ ಸಾಹಿತಿಗಳ ಮಾಹಿತಿಯೇ ಬಿಟ್ಟು ಹೋಗಿರುವುದು ವಿಷಾದನೀಯವೆನಿಸುತ್ತದೆ.



ಕನ್ನಡ ನವೋದಯ ಕಾಲಘಟ್ಟದಲ್ಲೆ ದಲಿತ ಹಿನ್ನೆಲೆಯ ಡಿ. ಗೋವಿಂದ ದಾಸ್, ಸೋಸ್ಲೆ ಸಿದ್ದಪ್ಪ ದೇವರಾಯ ಇಂಗಳೆ, ಬಿ. ಶ್ಯಾಮಸುಂದರ್, ಜಿ. ವೆಂಕಟಯ್ಯ ಮುಂತಾದವರು ಸಾಹಿತ್ಯ ರಚನೆ ಮಾಡಿದ್ದಾರೆ. ಇದು ಕನ್ನಡ ಸಾಹಿತ್ಯದಲ್ಲಿ ಗುರುತಿಸಲ್ಪಡದ ಕಾರಣಕ್ಕಾಗಿಯೆ, ದಲಿತ ಚಳವಳಿಯ ಹಿನ್ನೆಲೆಯಿಂದ ಬಂದ ಚಿಂತನಾಶೀಲ ಲೇಖಕರಾದ ಡಾ. ಎಂ. ಎಸ್. ಶೇಖರ್ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿದ್ದ ಅವಧಿಯಲ್ಲಿ ಅಕಾಡೆಮಿಯ ಜೊತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ 22-05-2005 ರಂದು "ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು" ಎನ್ನುವ ವಿಷಯ ಕುರಿತು ಒಂದು ದಿನದ ವಿಚಾರಸಂಕಿರಣವನ್ನು ಏರ್ಪಡಿಸಿ ಆ ಕಾಲಮಾನದ ದಲಿತ ಲೇಖಕರು ಹಾಗೂ ಅವರ ಸಾಹಿತ್ಯ ಸಂವೇದನೆಯನ್ನು ಗುರುತಿಸುವ ಗಂಭೀರ ಪ್ರಯತ್ನ ನಡೆಸಿತು. ಇಲ್ಲಿ ಮಂಡಿಸಿದ ಲೇಖನಗಳನ್ನು ಇದೇ ಶೀರ್ಷಿಕೆಯಲ್ಲಿ ಎಂ. ಎಸ್. ಶೇಖರ್ ಅವರು ಸಂಪಾದಿಸಿದ್ದಾರೆ. ಈ ಕೃತಿಯನ್ನು 2006 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಹಾಗೆಯೇ ಈ ತಲೆಮಾರಿನ ದಲಿತ ಲೇಖಕರನ್ನು ಕುರಿತ ಶೇಖರ್ ಅವರ 'ಮೊದಲ ತಲೆಮಾರಿನ ದಲಿತ ಲೇಖಕರು' ಎಂಬ ಲೇಖನ 2009ರ ದೀಪಾವಳಿ ವಿಶೇಷಾಂಕದಲ್ಲಿಯೂ ಪ್ರಕಟಗೊಂಡಿದೆ. ಇದೇ ವಿಶೇಷಾಂಕದಲ್ಲಿ ಡಾ. ರಹಮತ್ ತರೀಕೆರೆ ಅವರ ಲೇಖನವೂ ಸಹ ಇದೆ. ಇದು ಡಾ. ತರೀಕೆರೆ ಅವರ ಗಮನಕ್ಕೆ ಬಾರದಿರುವುದು ಆಶ್ಚರ್ಯವೆನಿಸುತ್ತದೆ. ಅಲ್ಲದೆ ಡಾ. ಶೇಖರ್ ಅವರು ತುಂಬ ಪರಿಶ್ರಮದಿಂದ ಸಂಶೋಧಿಸಿ ಸಂಪಾದಿಸಿರುವ 'ಡಿ. ಗೋವಿಂದ ದಾಸ್ ಅವರ ಸಮಗ್ರ ಸಾಹಿತ್ಯ' ಎಂಬ ಕೃತಿಯೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ 2007 ರಲ್ಲಿ ಪ್ರಕಟಗೊಂಡಿದೆ. ಮೊದಲ ತಲೆಮಾರಿನ ಲೇಖಕರ ಬಗೆಗೆ ಈ ಎಲ್ಲಾ ಸಂಶೋಧಿತ ಬರಹಗಳು ಪ್ರಕಟಗೊಂಡ ನಂತರ ಅಲ್ಲಲ್ಲಿ ಚರ್ಚೆಗಳೂ ನಡೆಯುತ್ತಿವೆ.

ದಲಿತ ಸಾಹಿತ್ಯ ಸಂವೇದನೆಯ ಚರಿತ್ರೆಯನ್ನು ದಾಖಲಿಸುವ ಸಂದರ್ಭದಲ್ಲಿ ಇಂತಹ ಮಹತ್ತರವಾದ ಮೊದಲ ತಲೆಮಾರಿನ ಲೇಖಕರು ಪರಿಗಣಿಸಲ್ಪಡದೆ ಹೋದರೆ, ಅಪಚಾರವೆಸಗಿದಂತಾಗುತ್ತದೆ. ದಾಖಲೆ ಇಲ್ಲದಿರುವಾಗ ಇರುವ ಮಾಹಿತಿಯಲ್ಲೆ ಇತಿಹಾಸವನ್ನು ದಾಖಲಿಸುವುದು ಬೇರೆ. ಆದರೆ ದಾಖಲೆ ಇದ್ದಾಗ ನಿರ್ಲಕ್ಷಿಸುವುದು ಸಲ್ಲದು. ಈ ನಿಟ್ಟಿನಲ್ಲಿ ಈವರೆಗೆ ನಿರೂಪಿಸಲ್ಪಟ್ಟ ದಲಿತ ಸಾಹಿತ್ಯ ಚರಿತ್ರೆಯನ್ನು ಪುನರ್ ಪರಿಶೀಲಿಸುವ ಅಗತ್ಯವೂ ಇದೆ ಎಂದೆನಿಸುತ್ತದೆ.

ಈ ಮೊದಲ ತಲೆಮಾರಿನ ಲೇಖಕರಲ್ಲಿ ಕೆಲವರು ಅಂಬೇಡ್ಕರ್ ಅವರಿಂದ ನೇರ ಪ್ರಭಾವಿತರಾಗಿರುವುದೆ ಅಲ್ಲದೆ ಅವರ ಜೊತೆಗೂಡಿ ಚಳವಳಿಯನ್ನೂ ಕಟ್ಟಿದ್ದಾರೆ. ಇನ್ನು ಕೆಲವರು ಗಾಂಧಿ ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಈ ಎರಡು ಹಿನ್ನೆಲೆಯ ಪ್ರಜ್ಞೆಯಲ್ಲೆ ತಮ್ಮ ಸಾಹಿತ್ಯವನ್ನು ಸಂವೇದಿಸಿದ್ದಾರೆ. ಇದು ಬೇರೆಯದೆ ಆಗಿ ಚರ್ಚಿಸಬೇಕಾದ ವಿಚಾರ. ಅದೇನೆ ಇರಲಿ ಆಧುನಿಕ ದಲಿತ ಸಾಹಿತ್ಯದ ಚರಿತ್ರೆಯ ಹಂತಗಳನ್ನು ಗುರುತಿಸುವಾಗ ಮೊದಲ ತಲೆಮಾರಿನಲ್ಲಿ ಡಿ. ಗೋವಿಂದ ದಾಸ್, ಸೋಸಲೆ ಸಿದ್ದಪ್ಪ ಮುಂತಾದವರನ್ನು ಪರಿಗಣಿಸಿ ಎರಡನೆ ತಲೆಮಾರಿನಲ್ಲಿ ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಎಲ್. ಹನುಮಂತಯ್ಯ, ಕೆ. ಬಿ. ಸಿದ್ಧಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಅರವಿಂದ ಮಾಲಗತ್ತಿ ಮುಂತಾದವರನ್ನು, ಮೂರನೆ ತಲೆಮಾರಿನಲ್ಲಿ ಮೊಗಳ್ಳಿ, ಕುಕ್ಕರಹಳ್ಳಿ, ಜಾಹ್ನವಿ ಮುಂತಾದವರನ್ನು, ನಾಲ್ಕನೆ ತಲೆಮಾರಿನಲ್ಲಿ ದು. ಸರಸ್ವತಿ, ಎನ್. ಕೆ. ಹನುಮಂತಯ್ಯ, ಅನುಸೂಯಾ ಕಾಂಬ್ಳೆ, ಮಹದೇವ ಶಂಕನಪುರ ಮುಂತಾದವರನ್ನು ಪರಿಗಣಿಸಬೇಕಾಗಿದೆ. ಹೀಗೆ ಗುರುತಿಸುವುದೇ ಸದ್ಯದ ದಲಿತ ಸಾಹಿತ್ಯ ಚರಿತ್ರೆಯ ಸರಿಯಾದ ಕ್ರಮ ಎನಿಸುತ್ತದೆ. ಕನ್ನಡದ ಸ್ವಚ್ಛಂದ ಹೊಳೆಯು ತನ್ನೊಡಲಲ್ಲೆ ಹರಿದಿರುವ ಈ ತೊರೆಯನ್ನು ಮರೆಯದಿರಲಿ.


- ಸುಬ್ಬು ಹೊಲೆಯಾರ್, ಬೆಂಗಳೂರು, ಡಾ. ಎಸ್. ನರೇಂದ್ರಕುಮಾರ್, ಮೈಸೂರು

ಈಗ ಆರೇಳು ವರ್ಷದ ಕೆಳಗೆ ನನ್ನೊಬ್ಬ ಗೆಳೆಯ ಒಂದು ಗುರುಕುಲದಲ್ಲಿ ಓದುತ್ತಿದ್ದಾಗ ನಡೆದ ಘಟನೆ ಹೇಳಿದ: ಒಂದು ನಾಟಕದ ತಾಲೀಮು ನಡೆಯುತ್ತಿದ್ದಾಗ ಆ ಸಂಸ್ಥೆಯ ಮುಖ್ಯಸ್ಥರು ಬಂದರಂತೆ. ಪಾತ್ರವರ್ಗದ ವಿವರ ನೋಡಿದ ವ್ಯಕ್ತಿ ಮುಖ್ಯ ಪಾತ್ರಧಾರಿಯ ಕಡೆಗೆ ಗಮನ ಹರಿಸಿದರಂತೆ. ಆ ಪಾತ್ರ ನಿರ್ವಹಿಸುತ್ತಿದ್ದ ವಿದ್ಯಾರ್ಥಿ ದಲಿತ ಆಗಿರಲಿಲ್ಲ ಆದರೂ ಮುಖ್ಯಸ್ಥರು ನೇರವಾಗಿ ಹೇಳಿದರಂತೆ 'ಆ ಹುಡುಗ ಜೈನ ಆಗಿರಲಿ' ಎಂದು. ಇಂದು ಆ ವ್ಯಕ್ತಿಗೆ ಕರ್ನಾಟಕ ರತ್ನ ಬಂದಿದೆ!! ವಿದ್ಯಾರ್ಥಿಗಳ ನಡುವೆ ಜಾತಿಯ ಗೆರೆ ಕೊರೆವ ಈ ನಡೆದಾಡುವ ದೇವರು ಯಾರು ಅಂತ ತಿಳಿತಲ್ವ?

- ಮೇಲ್ಜಾತಿಯ ಗೆಳೆಯನಿಂದ ಕೇಳಿದ, ಕಾವಳಿಯ ದಲಿತ


(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆಕಳಿಸಬಹುದು)

...ಬ್‌ಸೈಟ್ ಪ್ರೇಮ !



...ಇತ್ತೀಚೆಗೆ ಯುವ ನಾಯಕನಟ ಮತ್ತು ಚಂದದ ಹುಡುಗ ಪ್ರೇಮ್ ತನ್ನ ವೆಬ್‌ಸೈಟನ್ನು ಪ್ರಾರಂಭಿಸಿದ್ದಾರೆ. ಯಾಕೆ ಗೊತ್ತಾ? ಅಭಿಮಾನಿಗಳು ತನ್ನ ...ಟೋಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲಿ ಎಂಬ ಕಾರಣಕ್ಕಂತೆ!

... ಹಾಗೆ ನೋಡಿದರೆ ಕಳೆದ ವರ್ಷ ಈತ ನಟಿಸಿದ ಒಂದೇ ಒಂದು ಚಿತ್ರ ಕೂಡಾ ತೆರೆಕಂಡಿಲ್ಲ, ಹಾಗೆಯೇ ಆತ ನಾಯಕನಾಗಿ ನಟಿಸಿದ ಹೊಸ ಚಿತ್ರ ಸೆಟ್ಟೇರಿದ್ದೂ ... ಹೀಗಾಗಿ ಒಂದು ರೀತಿಯಲ್ಲಿ ಆತನ ಫೋಟೋಗಳನ್ನು ಅಭಿಮಾನಿಗಳು ಡೌನ್‌ಲೋಡ್ ಮಾಡಿಕೊಳ್ಳಲು ಆತ ವೆಬ್‌ಸೈಟ್ ಆರಂಭಿಸಿರುವುದು ಅರ್ಥಪೂರ್ಣವಾಗಿದೆ. ...ಇತ್ತೀಚೆಗೆ ಯುವ ನಾಯಕನಟರಿಗೆ ಈ ರೀತಿಯ ವೆಬ್‌ಸೈಟ್ ಹುಚ್ಚು ಆರಂಭವಾಗಿರುವುದು ಅವರ ಅಧಃಪತನವನ್ನು ತೋರಿಸುತ್ತಿದೆಯೆಂದಷ್ಟೇ ಹೇಳಬೇಕಾಗುತ್ತದೆ. ... ಕಲಾವಿದ ತನ್ನ ಪಾತ್ರಗಳ ಮೂಲಕ ಅಭಿಮಾನಿಗಳ ಹೃದಯ ಸಿಂಹಾಸನವನ್ನು ಏರಬಹುದೇ ಹೊರತು ವೆಬ್‌ಸೈಟ್‌ಗಳ ಮೂಲಕವಲ್ಲ ಎಂಬ ಅಂಶ ...ಮ್‌ನಂತಹ ಪಡ್ಡೆ ಹುಡುಗರಿಗೇಕೆ ಅರ್ಥವಾಗುವುದಿಲ್ಲ? ಆತ ಇನ್ನುಂದೆಯಾದರೂ ಅಭಿಮಾನಿಗಳಿಗೆ ಫೋಟೋ ಹಂಚುವುದು, ವಾರಕ್ಕೊಮ್ಮೆ ಹೇರ್‌ಸ್ಟೈಲ್ ...ಬದಲಾಯಿಸಿಕೊಳ್ಳುವುದನ್ನು ಬಿಟ್ಟು ಉತ್ತಮ ಚಿತ್ರಗಳಲ್ಲಿ ನಟಿಸುವತ್ತ ಗಮನ ಹರಿಸಲಿ.




...ಟ್ಟರ ಗಾನ ಬಜಾನಾ...

...ಮತ್ತೊಮ್ಮೆ ಯೋಗರಾಜ್ ಭಟ್ ಚಿತ್ರಸಾಹಿತಿ ... ಜನಮನ ಗೆದ್ದಿದ್ದಾರೆ. ಪುನೀತ್ ಅಭಿನಯದ ...ರ್' ಚಿತ್ರದ ಹೈಲೆಟ್ ಭಟ್ಟರು ಬರೆದಿರುವ ...ಸ ಗಾನ ಬಜಾನಾ... ಹಳೇ ಪ್ರೇಮ ಪುರಾಣ...' ... ಈ ಹಾಡಿಗೆ ಬೆಳ್ಳಿ ಪರದೆ ಮೇಲೆ ಪುನೀತ್ ... ಪ್ರಿಯಾಮಣಿ ಬೊಂಬಾಟಾಗಿ ನರ್ತಿಸಿದ್ದಾರೆ. ...ಗೆ ಸಂಗೀತ ನಿರ್ದೇಶಕ ಹರಿಕೃಷ್ಣ ಅವರೇ ... ಹಾಡಿದ್ದು ಇನ್ನೊಂದು ವಿಶೇಷ.

...ಈ ವಾರ ತೆರೆಕಂಡ 'ಸೂರ್ಯಕಾಂತಿ' ಚಿತ್ರದಲ್ಲೂ ...ರು ಬರೆದ 'ಸ್ವಲ್ಪ ಸೌಂಡು ಜಾಸ್ತಿ ಮಾಡು.. ...ಾ ಒಳ್ಳೆ ಸಾಂಗಿದು..' ಎಂಬ ಹಾಡು ಕೂಡಾ ...ತ್ರ ಪ್ರಿಯರು ಮೆಲುಕು ಹಾಕುವಂತಿದೆ. ಈ ... 'ಜಂಗ್ಲಿ' ಚಿತ್ರಕ್ಕೆ ಭಟ್ಟರು ಬರೆದ 'ಹಳೆ ... ಹಳೇ ಕಬ್ಬ..' ಹಾಡು ಕೂಡಾ ಇದೇ ರೀತಿ ...ಹುಡುಗರು ನರ್ತಿಸುವಂತೆ ಮಾಡಿತ್ತು. ಹೀಗೆ ...ಡೆ ನಿರ್ದೇಶಕರಾಗಿ ಜಯಭೇರಿ ಬಾರಿಸುತ್ತಿರುವ ... ಇನ್ನೊಂದೆಡೆ ಪಾರ್ಟ್ ಟೈಂ ಗೀತರಚನಾಕಾರ ...ಯೂ ಗೆಲ್ಲುತ್ತಿದ್ದಾರೆ. ನಮ್ಮ ಮಾಮೂಲಿ ಚಿತ್ರ ...ಕಗಳಾದ ಕಲ್ಯಾಣ್, ನಾಗೇಂದ್ರ ಪ್ರಸಾದ್, ...ಜ್ ಮೊದಲಾದವರೆಲ್ಲಾ ಸಪ್ಪೆಯಾಗುತ್ತಿರುವಾಗ ... ಮಸಾಲೆ ಹಾಡುಗಳನ್ನು ಬರೆದು ಸೌಂಡ್ ...ುತ್ತಿದ್ದಾರೆ...

ಚೈತನ್ಯವಿಲ್ಲದ ಕಾಂತಿ

ನಾಯಕ ನಟ ಚೇತನ್ ಬಗ್ಗೆ ಪತ್ರಿಕೆಗಳಲ್ಲಿ - ಅದರಲ್ಲೂ ಟೈಮ್ಸ್ ಆಫ್ ಇಂಡಿಯಾದವರ ಬ್ಯಾಂಗಳೂರ್ ಟೈಮ್ಸ್‌ನಲ್ಲಿ - ದಿನಕ್ಕೊಂದು ಸುದ್ದಿ ಪ್ರಕಟವಾಗುತ್ತಿತ್ತು. ಚೇತನ್‌ನ ಸೌಂದರ್ಯ, ದೇಹ, ಆತನ ಹಿಂದೆ ಬಿದ್ದಿರುವ ಯುವತಿಯರು, ಆತನ ಕಾಲ್‌ಶೀಟ್‌ಗಾಗಿ ಸಾಲುಗಟ್ಟಿನಿಂತಿರುವ ನಿರ್ದೇಶಕರು ಮತ್ತು ನಿರ್ಮಾಪಕರು ಇಂತಹದ್ದೇ ಸುದ್ದಿಗಳು ಬರುತ್ತಿದ್ದವು. ಅಂತಹ ಸುದ್ದಿಗಳಲ್ಲಿ ಮುಖ್ಯವಾದದ್ದು: ಆತನ ಜತೆ ನಟಿಸಲು ರಮ್ಯಾಳಿಂದ ಹಿಡಿದು ಅನೇಕ ನಾಯಕಿಯರು ಪೈಪೋಟಿ ನಡೆಸುತ್ತಿದ್ದಾರೆ ಎಂದೂ, ಚಿತ್ರರಂಗದ ಅಮೃತ ಮಹೋತ್ಸವ ಸಂದರ್ಭದಲ್ಲಿ ಆತನೊಂದಿಗೆ ಕುಣಿಯಲು ನಟಿಯರು ಕಿತ್ತಾಡಿದ್ದರು ಎಂಬುದೂ ಇದ್ದವು.



ಈಗ ಚೇತನ್ ನಟಿಸಿರುವ 'ಸೂರ್ಯಕಾಂತಿ' ಚಿತ್ರ ಬಿಡುಗಡೆಯಾದ ಮೇಲೆ ಅಂತಹ ಸುದ್ದಿಗಳು ಸದ್ಯಕ್ಕೆ ಕಡಿಮೆಯಾಗಿವೆ. ಅದಕ್ಕೆ ಕಾರಣ 'ಸೂರ್ಯಕಾಂತಿ' ಬಾಕ್ಸಾಫೀಸ್‌ನಲ್ಲಿ ಅರಳದೇ, ಮುದುಡದೇ ಇರುವುದು. ಕಿತಾಪತಿ ಬುದ್ಧಿಯ ಗಾಂಧಿನಗರಿಗಳಂತೂ 'ಮುದುಡದ ಸೂರ್ಯಕಾಂತಿ' ಎಂದು ಈ ಚಿತ್ರಕ್ಕೆ ಪುನರ್‌ನಾಮಕರಣ ಮಾಡಿ ಗೇಲಿ ಮಾಡುತ್ತಿದ್ದಾರೆ. ಅಲ್ಲಿಗೆ 'ಆ ದಿನಗಳು' ಖ್ಯಾತಿಯ ನಿರ್ದೇಶಕ ಚೈತನ್ಯ ಮತ್ತು ನಟ ಚೇತನ್ ಜೋಡಿ ಚೇತರಿಸಿಕೊಳ್ಳಲಾಗದಷ್ಟು ಚಿಂದಿಯಾಗಿದೆ ಎಂದೇ ಅರ್ಥ.

ಚೇತನ್ ಈ ಚಿತ್ರವನ್ನು ಒಪ್ಪಿಕೊಳ್ಳುವ ಮೊದಲು ಸುಮಾರು 60-65 ಕಥೆಗಳನ್ನು ತಿರಸ್ಕರಿಸಿದ್ದ ಎಂಬ ಸುದ್ದಿ ಇತ್ತು. ಅದರರ್ಥ ಆತ ತುಂಬಾ ಚೂಸಿ ಮತ್ತು ಎಲ್ಲರಿಗೂ ಸುಲಭವಾಗಿ ಎಟುಕುವವನಲ್ಲ ಎಂಬುದು. ಆದರೆ ಇದೀಗ 'ಸೂರ್ಯಕಾಂತಿ' ಸುಮಾರಾಗಿ ಮೂಡಿಬಂದಿರುವುದರಿಂದ ಆತ ಇನ್ನು ಮುಂದೆ ಇನ್ನೆಷ್ಟು ಕತೆಗಳನ್ನು ತಿರಸ್ಕರಿಸಬಹುದು? ಅಥವಾ ಬಂದ ಅವಕಾಶಗಳನ್ನೆಲ್ಲ ಸ್ವೀಕರಿಸಬಹುದು?

ಅದೆಲ್ಲ ಬದಿಗಿರಲಿ, 'ಆ ದಿನಗಳು' ಮುಖಾಂತರ ಗಮನ ಸೆಳೆದ ಚೇತನ್ ಎಂಬ ಸುರದ್ರೂಪಿ ನಟ ಆದಾದ ನಂತರ ಎರಡನೇ ಬಾರಿಗೆ ಮುಗ್ಗರಿಸಿದ್ದಾನೆ. ತಾನು ತುಂಬಾ ಚೂಸಿ ಎನ್ನುತ್ತಿದ್ದ ಇದೇ ಚೇತನ್ ಈ ಹಿಂದೆ 'ಬಿರುಗಾಳಿ' ಎಂಬ ಚಿತ್ರದಲ್ಲಿ ನಟಿಸಿದ್ದ. ಆ ಚಿತ್ರವೂ ಬಾಕ್ಸ್ ಆಫೀಸಿನಲ್ಲಿ ಇನ್ನಿಲ್ಲದಂತೆ ಮುಗ್ಗರಿಸಿತ್ತು. ಈಗ 'ಸೂರ್ಯಕಾಂತಿ' ಕೂಡ ಥಂಡಾ ಹೊಡೆಯುತ್ತಿದೆ.

ಇನ್ನು ಮುಂದಾದರೂ ಚೇತನ್ ಪತ್ರಿಕೆಗಳಲ್ಲಿ ಸುದ್ದಿ ಮಾಡುವುದಕ್ಕಿಂತ ಚೆಂದವಾದ ಸಿನಿಮಾಗಳಲ್ಲಿ ನಟಿಸಿ ಸುದ್ದಿ ಮಾಡುವಂತಾಗಲಿ. ●




'ರಣ್'ಭೂಮಿಯಲ್ಲಿ ಸುದೀಪ

ಸುದೀಪ್ ಬಾಲಿವುಡ್ ಪ್ರಯಾಣ ಇನ್ನಷ್ಟು ದೂರ ಸಾಗುತ್ತಿದೆ. ರಾಮ್ ಗೋಪಾಲ್ ವರ್ಮ ನಿರ್ದೇಶನದ 'ಫೂಂಕ್-2' ಚಿತ್ರದ ಹೊರತಾಗಿ ಇನ್ನೊಂದು ಹಿಂದಿ ಚಿತ್ರಕ್ಕೂ ಸುದೀಪ್ ಬುಕ್‌ಆಗಿದ್ದಾರೆ. ವಿಶೇಷವೆಂದರೆ ಈ ಚಿತ್ರ ಕನ್ನಡ ಮತ್ತು ಹಿಂದಿಯಲ್ಲಿ ಏಕಕಾಲದಲ್ಲಿ ನಿರ್ಮಾಣವಾಗಲಿದೆ. ಎಂದಿನಂತೆ ಈ ಚಿತ್ರವನ್ನು ಕೂಡಾ ರಾಮ್ ಗೋಪಾಲ್ ವರ್ಮ ನಿರ್ದೇಶಿಸಲಿದ್ದಾರೆ. ಚಿತ್ರದ ಹೆಸರು 'ನಿರ್ಣಯ್'. ಅಂತೂ ಕನ್ನಡದಿಂದ ಹಿಂದಿಗೆ ವಲಸೆ ಹೋಗಿರುವ ಸುದೀಪ್ ಅಲ್ಲಿಂದ ಒಬ್ಬ ನಿರ್ದೇಶಕನನ್ನು ಕನ್ನಡಕ್ಕೆ ಕರೆತಂದ ಕೀರ್ತಿಗೆ ಪಾತ್ರರಾಗುತ್ತಾರೆ.

ಈ ಮಧ್ಯೆ ಮುಂದಿನ ವಾರ ಸುದೀಪ್ ಅಭಿನಯದ, ರಾಮ್ ಗೋಪಾಲ್ ವರ್ಮ ನಿರ್ದೇಶನದ 'ರಣ್' ಎಂಬ ಹಿಂದಿ ಚಿತ್ರ ಬಿಡುಗಡೆಯಾಗಲಿದೆ. ಈ ಚಿತ್ರದ ಪ್ರೋಮೋಸ್‌ಗಳು ಈಗಾಗಲೇ ಟಿವಿ ಮತ್ತು ಅಂತರಜಾಲಗಳಲ್ಲಿ ಪ್ರಸಾರವಾಗುತ್ತಿವೆ. ಈ ಚಿತ್ರದಿಂದ ಸುದೀಪ್ ರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ಮನ್ನಣೆ ಪಡೆಯುತ್ತಾರೋ ಎಂದು ನಮ್ಮ ನಿರ್ಮಾಪಕರು ಕಣ್ಣಿಗೆ ದುರ್ಬೀನ್ ಇಟ್ಟುಕೊಂಡು ಕಾಯುತ್ತಿದ್ದಾರೆ. ಇದಕ್ಕೆ ಕಾರಣವಿಷ್ಟೇ: ಒಂದು ವೇಳೆ 'ರಣ್' ಚಿತ್ರ ಸುದೀಪ್‌ಗೆ ಇನ್ನಷ್ಟು ಖ್ಯಾತಿಯನ್ನು ತಂದುಕೊಟ್ಟರು, ಆತ ನಟಿಸಿರುವ ಮೂರು ಕನ್ನಡ ಚಿತ್ರಗಳೂ ಒಂದರ ಹಿಂದೆ ಒಂದರಂತೆ ಮೆರವಣಿಗೆ ರೂಪದಲ್ಲಿ ಬಿಡುಗಡೆಯಾಗಲಿವೆ. ಸದ್ಯಕ್ಕೆ ಸುದೀಪ್ ನಿರ್ದೇಶನದ 'ಜಸ್ಟ್ ಮಾತ್‌ಮಾತಲ್ಲಿ' ಮತ್ತು 'ಕಿಚ್ಚ-ಹುಚ್ಚ' ಬಿಡುಗಡೆಗೆ ತಯಾರಾಗಿವೆ.


ಅಂತೂ ಯುವ ನಾಯಕ ನಟರುಗಳಲ್ಲಿ ಸುದೀಪ್ ತನ್ನ ನಟನೆ, ನಿರ್ದೇಶನ ಮತ್ತು ಬಾಲಿವುಡ್ ನಂಟನಿಂದಾಗಿ ಸುದ್ದಿ ಮಾಡುತ್ತಿದ್ದಾರೆ. ●



...ಮೈಸೂರಿನಿಂದ ಒಂದರ ಮೇಲೊಂದು ಬರುತ್ತಿರುವ ... ಸುದ್ದಿಗಳು ಚಿತ್ರರಂಗವನ್ನು ಅಲ್ಲಾಡಿಸುತ್ತಿರುವ ...ರ್ಭದಲ್ಲೇ ಮೈಸೂರಿನವರೇ ಆದ ಹಿರಿಯ ಛಾಯಾ...ಕ ವಿ.ಕೆ.ಮೂರ್ತಿಯವರಿಗೆ ದೇಶದ ಅತ್ಯುನ್ನತ ...ದಾ ಪ್ರಶಸ್ತಿಯಾದ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ...ಕಿರುವುದು ಸಂತೋಷದ ಸಂಗತಿಯಾಗಿದೆ. ಅಂತೂ ...ಾಜ್ ನಂತರ ಮತ್ತೊಬ್ಬ ಕನ್ನಡಿಗನಿಗೆ ದಾದಾ ಫಾಲ್ಕೆ ... ಬಂದಿದೆ. ಹಾಗೆ ನೋಡಿದರೆ ಕಳೆದ ವರ್ಷವು ... ಸಾಹೇಬ್ ಫಾಲ್ಕೆ ಪ್ರಶಸ್ತಿ ಕರ್ನಾಟಕಕ್ಕೆ ದೊರಕಿತು ... ನಾವೆಲ್ಲ ಸಂತೋಷಪಟ್ಟಿದ್ದೆವು. ಯಾಕೆಂದರೆ ಆಗ ... ಪುರಸ್ಕೃತರಾದ ಹಿಂದಿ ಚಿತ್ರರಂಗದ ಹಿನ್ನೆಲೆ ಗಾಯಕ ...ನ್ನಡೆಯವರು ಹಲವಾರು ವರ್ಷಗಳಿಂದ ...ಳೂರಿನಲ್ಲೇ ವಾಸಿಸುತ್ತಿದ್ದಾರೆ.

ಫಾಲ್ಕೆ ಮೂರ್ತಿ....

ಕಪ್ಪುಬಿಳುಪಿನ ಛಾಯಾಗ್ರಹಣದ ಜಮಾನದಲ್ಲಿ ವಿ.ಕೆ.ಮೂರ್ತಿ ಬಾಲಿವುಡ್‌ನಲ್ಲಿ ದೊಡ್ಡ ಹೆಸರು ಮಾಡಿದ್ದರು. ನಿರ್ದೇಶಕ ಮತ್ತು ನಾಯಕನಟ ಗುರುದತ್ ಅವರ ಬಹುತೇಕ ಚಿತ್ರಗಳ ಛಾಯಾಗ್ರಾಹಕರಾಗಿ ಕಾರ್ಯನಿರ್ವಹಿಸಿದ ಮೂರ್ತಿ ಅವರು ಆ ಚಿತ್ರಗಳ ಯಶಸ್ಸಿನ ಕಾರಣಕರ್ತರುಗಳಲ್ಲಿ ಒಬ್ಬರೆನಿಸಿಕೊಂಡಿದ್ದರು. ಮೈಸೂರಿನಿಂದ ಚಿಕ್ಕ ವಯಸ್ಸಿನಲ್ಲೇ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದ ಮೂರ್ತಿ ಯಾವ ಗಾಡ್‌ಫಾದರ್ ನೆರವಿಲ್ಲದೇ ಕೀರ್ತಿ ಶಿಖರವನ್ನೇರಿದ್ದೇ ಒಂದು ದೊಡ್ಡ ಸಾಹಸಗಾಥೆ. ಯಾವುದೇ ಪ್ರಶಸ್ತಿ, ಮನ್ನಣೆ ಮತ್ತು ಗೌರವಗಳನ್ನು ನಿರೀಕ್ಷಿಸದೇ ತಮ್ಮ ಜೀವನದ ಸಂಧ್ಯಾಕಾಲವನ್ನು ಬೆಂಗಳೂರಿನಲ್ಲಿ ಕಳೆಯುತ್ತಿರುವ ಮೂರ್ತಿಯವರಿಗೆ ಈಗ ಈ ಪ್ರಶಸ್ತಿ ದೊರಕಿದೆ.



ಮೂರ್ತಿಯವರು ಕನ್ನಡದವರೇ ಆದರೂ, ಅವರು ಹಿಂದಿ ಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡಿದ್ದರೂ ಕನ್ನಡ ಚಿತ್ರರಂಗ ಎಂದೂ ಅವರನ್ನು ಕೈಬೀಸಿ ಕರೆಯಲಿಲ್ಲ. ತೀರಾ ಇತ್ತೀಚೆಗೆ - ಅಂದರೆ ಆರೇಳು ವರ್ಷಗಳ ಹಿಂದೆ- 'ಹೂವು-ಹಣ್ಣು' ಚಿತ್ರಕ್ಕೆ ಕ್ಯಾಮರಾವರ್ಕ್ ಮಾಡಲು ಮೂರ್ತಿಯವರನ್ನು ಸ್ಯಾಂಡಲ್‌ವುಡ್‌ಗೆ ರಾಜೇಂದ್ರಸಿಂಗ್ ಬಾಬು ಕರೆತಂದಿದ್ದರು. ಆಗಲೇ ಮೊದಲ ಬಾರಿಗೆ ಮೂರ್ತಿಯವರ ಸಾಧನೆ ಮತ್ತು ಕಿರುಪರಿಚಯ ಇಲ್ಲಿಯವರಿಗೆ ಗೊತ್ತಾಗಿದ್ದು. ಅದೇನೇ ಇರಲಿ, ತಾಂತ್ರಿಕ ಕ್ಷೇತ್ರದಲ್ಲಿ ಬಹುತೇಕ ಮದ್ರಾಸಿಗಳು ಯಾವಾಗಲೂ ಒಂದು ಕೈಮೇಲೆ ಎಂಬುದು ಚಾಲ್ತಿಯಲ್ಲಿರುವ ಮಾತು. ಇಂತಹ ಸಂದರ್ಭದಲ್ಲಿ ನೆರಳು ಬೆಳಕಿನ ಮೇಲೆ ಅದ್ಭುತ ಹಿಡಿತವನ್ನು ಸಾಧಿಸಿ ಅನೇಕ ಉತ್ತಮ ಚಿತ್ರಗಳನ್ನು ನೀಡಿದ ಮೂರ್ತಿಯವರಿಗೆ ಫಾಲ್ಕೆ ಪ್ರಶಸ್ತಿ ಬಂದಿರುವುದು ಕನ್ನಡಿಗರೆಲ್ಲರೂ ಸಂಭ್ರಮಿಸಬೇಕಾದ ವಿಷಯವಂತೂ ಹೌದು.

ಸುಮಾರು ಐದು ದಶಕಗಳಿಂದ ಈ ಮಹಾನ್ ಕಲಾವಿದ ನಮ್ಮ ನಡುವೆ ಇದ್ದರೂ ಸಹ ಆತನ ವೃತ್ತಿ ಜೀವನದ ಮಜಲುಗಳನ್ನು ದಾಖಲಿಸುವ ಒಂದು ಸಣ್ಣ ಪ್ರಯತ್ನವನ್ನು ಕೂಡಾ ಮಾಡದ ಉದ್ಯಮದವರು ಈಗ ಕಂಬನಿ ಮಿಡಿಯುತ್ತಿರುವುದಕ್ಕೆ ಅರ್ಥವೆಲ್ಲಿದೆ? ಅಶ್ವತ್ಥ್‌ರ ವೃತ್ತಿ ಜೀವನ ನಡೆದು ಬಂದ ಹಾದಿ, ವೃತ್ತಿಯಲ್ಲಿನ ಏರಿಳಿತ, ಅವರ ಚಿಂತನೆಗಳು, ಸಮಾಜ, ರಾಜಕೀಯ, ಇನ್ನಿತರ ವಿಷಯಗಳ ಬಗ್ಗೆ ಅವರ ವಾದ-ನಿಲುವುಗಳು ಇದ್ಯಾವುದೂ ಎಂದೂ ಎಲ್ಲೂ ದಾಖಲೆಯಾಗೇ ಇಲ್ಲ.



ಸಿನಿಮಾ ಸಂತೆಯಲ್ಲಿ ಸಂತನಂತಿದ್ದ ಅಶ್ವಥ್

ಮತ್ತೊಂದು ಕೆಟ್ಟ ಸುದ್ದಿ ಕನ್ನಡ ಚಿತ್ರರಂಗವನ್ನು ದುಃಖಸಾಗರದಲ್ಲಿ ಮುಳುಗಿಸಿದೆ. ಕನ್ನಡ ಚಿತ್ರರಂಗದ ಮತ್ತೊಂದು ದೈತ್ಯ ಪ್ರತಿಭೆ ಕೆ.ಎಸ್.ಅಶ್ವಥ್ ನಿಧನ ಹೊಂದಿದ್ದಾರೆ. ಗಾಯಕ ಸಿ.ಅಶ್ವಥ್ ಮತ್ತು ನಟ ವಿಷ್ಣುವರ್ಧನ್ ಅವರ ಅಕಾಲಿಕ ನಿಧನದಿಂದ ಚಿತ್ರರಂಗ ಚೇತರಿಸಿಕೊಳ್ಳುವ ಮೊದಲೇ ಕೆ.ಎಸ್.ಅಶ್ವಥ್ ಅಸ್ತಂಗತವಾಗಿದ್ದು ಬಣ್ಣದ ಲೋಕವನ್ನು ಸ್ಮಶಾನಮೌನ ಆವರಿಸಿದೆ.

ಕಳೆದ ಏಳೆಂಟು ವರ್ಷಗಳಿಂದ ಅಶ್ವಥ್ ಅನಾರೋಗ್ಯ ಪೀಡಿತರಾಗಿದ್ದರಿಂದ ಅವರ ನಿಧನದ ಸುದ್ದಿ ಬರಸಿಡಿಲಿನಂತೇನೂ ಎರಗಿ ಬರಲಿಲ್ಲ ನಿಜ. ಸಾಯುವ ಹೊತ್ತಿಗೆ ಅವರಿಗೆ 85 ವರ್ಷಗಳಾಗಿದ್ದವು ಅಂದರೆ ಅವರು ತುಂಬು ಜೀವನವನ್ನು ಅನುಭವಿಸಿದ್ದರೆಂದೇ ಅರ್ಥ. ಆದರೂ ಅತ್ಯಂತ ಪ್ರತಿಭಾವಂತ, ಸರಳ ಮತ್ತು ಶಿಸ್ತಿನ ಸಿಪಾಯಿಯಾಗಿದ್ದ ಅಶ್ವಥ್ ನಿಧನ ಕಣ್ಣಂಚಿನಲ್ಲಿ ನೀರು ಬರಿಸುತ್ತದೆ.

ಅಶ್ವಥ್ 'ಸ್ತ್ರೀರತ್ನ' ಚಿತ್ರದ (1954) ಮುಖಾಂತರ ನಾಯಕನಟನಾಗಿ ಚಿತ್ರರಂಗಕ್ಕೆ ಬಂದವರು. ಆದರೆ ಅನಂತರ ಬೆಳೆದದ್ದು ಮಿಂಚಿದ್ದು ಪೋಷಕ ಪಾತ್ರಗಳಲ್ಲೇ. ಸುಮಾರು 371 ಚಿತ್ರಗಳಲ್ಲಿ ಅಶ್ವಥ್ ನಟಿಸಿದ್ದಾರೆಂದರೆ ಕನ್ನಡಚಿತ್ರರಂಗಕ್ಕೆ ಕಳೆದ ನಾಲ್ಕು ದಶಕಗಳಲ್ಲಿ ಅವರೆಷ್ಟು ಅನಿವಾರ್ಯವಾಗಿದ್ದರು ಎಂಬುದನ್ನು ತೋರಿಸುತ್ತದೆ. ನಾಯಕ ಮತ್ತು ನಾಯಕಿ ಪಾತ್ರಗಳಿಗಷ್ಟೇ ತಾರಾಮೌಲ್ಯ ಪೋಷಕ ಪಾತ್ರಗಳಿಗೂ ಸಿಗುತ್ತಿದ್ದ ಆ ಕಾಲದಲ್ಲೇ ಅವರು ತಮ್ಮ ಪಾತ್ರಗಳಿಗೆ ವರ್ಚಸ್ಸು, ಮೌಲ್ಯ ಮತ್ತು ಜನಪ್ರಿಯತೆಯನ್ನು ತಂದುಕೊಟ್ಟಿದ್ದರು. ಹೀಗಾಗಿ ಆಗಿನ ಕಾಲದ ಪೋಷಕ ಕಂ ಹಾಸ್ಯ ನಟನೆ ಮುಖಾಂತರ ಸೂಪರ್‌ಸ್ಟಾರ್ ಪಟ್ಟವನ್ನಲಂಕರಿಸಿದ ಬಾಲಣ್ಣ ಮತ್ತು ನರಸಿಂಹರಾಜುಗೆ ಪೈಪೋಟಿ ನೀಡಿ ಅಶ್ವಥ್ ತನ್ನದೇ ಆದ ಛಾಪು ಮೂಡಿಸಿದ್ದರು.

ಆದರೆ ಅವರ ನಿಧನದ ನಂತರ ಉದ್ಯಮದವರು ಮತ್ತು ಮಾಧ್ಯಮದವರು 'ಶಿಸ್ತಿನ ಸಿಪಾಯಿ', 'ಉರುಳಿದ ಅಶ್ವತ್ಥ ವೃಕ್ಷ', 'ಚಾಮಯ್ಯ ಮೇಷ್ಟರು ಇನ್ನಿಲ್ಲ', 'ಶಿಷ್ಯನ ಹಾದಿಯನ್ನೇ ಹಿಡಿದಿದ್ದಾರೆ' ಎಂಬಿತ್ಯಾದಿಯಾಗಿ ಹೇಳುವ ಮೂಲಕ ಅಶ್ವಥ್ ಅವರಿಗೆ ಗೌರವದ ಬದಲು ಅಗೌರವ ತೋರಿಸಿದಂತೆ ಕಾಣುತ್ತದೆ.

37 ವರ್ಷಗಳ ಹಿಂದೆ 'ನಾಗರಹಾವು' ಚಿತ್ರದಲ್ಲಿ ಚಾಮಯ್ಯ ಮೇಷ್ಟ್ರಾಗಿ ನಟಿಸಿದ ನಂತರ ಅಶ್ವಥ್ ಅವರ ಬೇರಾವುದೇ ಚಿತ್ರದ ಪಾತ್ರಗಳು ಉದ್ಯಮದವರಿಗೆ, ಮಾಧ್ಯಮದವರಿಗೆ ಯಾಕೆ ನೆನಪಾಗುತ್ತಿಲ್ಲ? 371 ಚಿತ್ರಗಳಲ್ಲಿ ನಟಿಸಿದ ಈ ದೈತ್ಯ ಪ್ರತಿಭೆಯನ್ನು ನೆನೆದುಕೊಳ್ಳಲು ಚಾಮಯ್ಯನ ಪಾತ್ರ ಒಂದೇ ಸಾಕೇ? 'ಕಸ್ತೂರಿ ನಿವಾಸ'ದ ಸೇವಕ ರಾಮಯ್ಯನ ಪಾತ್ರ, ಚಾಮಯ್ಯನಿಗಿಂತ ಯಾವ ರೀತಿಯಲ್ಲಿ ಕಡಿಮೆಯಿದೆ? ಹಾಗೆಯೇ 'ಸರ್ವಮಂಗಳ'



ಚಿತ್ರದಲ್ಲಿ ಸುಬ್ಬರಾಯನ ಪಾತ್ರ, 'ಶರಪಂಜರ' ಚಿತ್ರದಲ್ಲಿ ಕಲ್ಪನಾಳ ತಂದೆಯ ಪಾತ್ರ, 'ನಾಗಾರ್ಜುನ' ಚಿತ್ರದ ನಾರದನ ಪಾತ್ರ, 'ಮುತ್ತಿನಹಾರ'ದಲ್ಲಿ ಮಗನನ್ನು ಅರಸುತ್ತಾ ಹೋದ ತಂದೆಯ ಪಾತ್ರ... ಹೀಗೆ ಅದೆಷ್ಟು ಪಾತ್ರಗಳಿಗೆ ಅಶ್ವಥ್ ಜೀವ ತುಂಬಿಲ್ಲ ಹೇಳಿ?

ಹಾಗೆಯೇ ಅಶ್ವಥ್ ಅಂದಾಕ್ಷಣ ಅನೇಕ ಚಿತ್ರಗಳು ಕೂಡ ಕಣ್ಮುಂದೆ ಬಂದು ಹೋಗುತ್ತವೆ. 'ನಾಗರಹಾವು' ಚಿತ್ರವನ್ನು ಹೊರತುಪಡಿಸಿ 'ಮಹಿಷಾಸುರ ಮರ್ದಿನಿ', 'ಸ್ವರ್ಣಗೌರಿ', 'ಭಕ್ತಪ್ರಹ್ಲಾದ', 'ದಶಾವತಾರ', 'ಕಸ್ತೂರಿ ನಿವಾಸ', 'ತಂದೆ ಮಕ್ಕಳು', 'ಸರ್ವಮಂಗಳ', 'ಗಾಳಿಗೋಪುರ', 'ಕರ್ಣ', 'ಬೆಳ್ಳಿಮೋಡ', 'ಒಡಹುಟ್ಟಿದವರು', 'ಅಣ್ಣ-ತಂಗಿ', 'ಗೆಜ್ಜೆಪೂಜೆ', 'ಶರಪಂಜರ', 'ಮುತ್ತಿನಹಾರ', 'ಒಂದೇ ಬಳ್ಳಿಯ ಹೂಗಳು', 'ಜೇನುಗೂಡು', 'ಶಬ್ದವೇದಿ' .... ಹೀಗೆ ಅನೇಕಾನೇಕ ಚಿತ್ರಗಳು ನೆನಪಿಗೆ ಬರುತ್ತವೆ. ಈ ಎಲ್ಲಾ ಚಿತ್ರಗಳಲ್ಲಿ ಅಶ್ವಥ್ ತಂದೆಯಾಗಿ, ಸೇವಕನಾಗಿ, ಶ್ರೀಮಂತನಾಗಿ, ಬಡವನಾಗಿ, ಹಾಸ್ಯನಟನಾಗಿ... ಹೀಗೆ ಪೋಷಕ ನಟನೊಬ್ಬ ನಿರ್ವಹಿಸಬಹುದಾದ ಬಹುತೇಕ ಎಲ್ಲಾ ಪಾತ್ರಗಳನ್ನು ಲೀಲಾಜಾಲವಾಗಿ ನಿರ್ವಹಿಸಿ ಸೈ ಎನಿಸಿಕೊಂಡವರು. ಹೀಗಿದ್ದರೂ ಇಂದು ಉದ್ಯಮದವರು ಮತ್ತು ಮಾಧ್ಯಮದವರು ಸೇರಿ ಅಶ್ವಥ್‌ರನ್ನು ಚಾಮಯ್ಯ ಮೇಷ್ಟ್ರು ಎಂಬ ಪಾತ್ರದ ಪರಿಧಿಯಲ್ಲಿ ಕಟ್ಟಿಹಾಕುತ್ತಿರುವುದನ್ನು ನೋಡಿದಾಗ ವಿಷಾದವೆನಿಸುತ್ತದೆ.

ಸುಮಾರು ಐದು ದಶಕಗಳಿಂದ ಈ ಮಹಾನ್ ಕಲಾವಿದ ನಮ್ಮ ನಡುವೆ ಇದ್ದರೂ ಸಹ ಆತನ ವೃತ್ತಿ ಜೀವನದ ಮಜಲುಗಳನ್ನು ದಾಖಲಿಸುವ ಒಂದು ಸಣ್ಣ ಪ್ರಯತ್ನವನ್ನು ಕೂಡಾ ಮಾಡದ ಉದ್ಯಮದವರು ಈಗ ಕಂಬನಿ ಮಿಡಿಯುತ್ತಿರುವುದಕ್ಕೆ ಅರ್ಥವೆಲ್ಲಿದೆ? ಅಶ್ವಥ್‌ರ ವೃತ್ತಿ ಜೀವನ ನಡೆದು ಬಂದ ಹಾದಿ, ವೃತ್ತಿಯಲ್ಲಿನ ಏರಿಳಿತ, ಅವರ ಚಿಂತನೆಗಳು, ಸಮಾಜ, ರಾಜಕೀಯ, ಇನ್ನಿತರ ವಿಷಯಗಳ ಬಗ್ಗೆ ಅವರ ವಾದ-ನಿಲುವುಗಳು ಇದ್ಯಾವುದೂ ಎಂದೂ ಎಲ್ಲೂ ದಾಖಲೆಯಾಗೇ ಇಲ್ಲ. ಅಂತಹ ಒಂದು ದಾಖಲೆ ಉದ್ಯಮದವರು ಅಥವಾ ಸರ್ಕಾರದವರು ಮಾಡಿದ್ದರೆ ಬಹುಶಃ ಅದು ಮುಂದಿನ ಜನಾಂಗಕ್ಕೆ ದಾರಿದೀಪವಾಗುತ್ತಿತ್ತೇನೋ? ಅಂತಹ ಮಹಾನ್ ವ್ಯಕ್ತಿಯ ಚಿಂತನೆಗಳನ್ನು ಅಥವಾ ನಿಲುವುಗಳನ್ನು ದಾಖಲಿಸದ ನಾವು ಈಗ 'ಚಾಮಯ್ಯ ಮೇಷ್ಟ್ರು ಇನ್ನಿಲ್ಲ' ಎಂದು ಹೇಳಿ ಸುಮ್ಮನಾಗುತ್ತಿರುವುದು ನಮಗೆ ನಾವೇ ಮಾಡಿಕೊಂಡ ದ್ರೋಹವೆನಿಸುತ್ತದೆ.





ಇದರಲ್ಲಿ ಮಾಧ್ಯಮದವರ ಪಾತ್ರವೂ ಸಾಕಷ್ಟಿದೆ. ಆ ಕಾಲದಲ್ಲಿ ಸಿನಿಮಾ ಸೆಟ್‌ಗೆ ಹೋದರೆ ಮಾತನಾಡಿಸುತ್ತಿದ್ದುದು ನಾಯಕ ಮತ್ತು ನಾಯಕಿಯನ್ನು ಮಾತ್ರ. ಎಲ್ಲೋ ಆರೇಳು ತಿಂಗಳಿಗೊಮ್ಮೆ ಪೋಷಕ ನಟನಟಿಯರ ಒಂದೆರಡು ಭಾವಚಿತ್ರಗಳು ಪ್ರಕಟವಾಗುತ್ತಿದ್ದವೇ ಹೊರತು ಅವರ ಸಂದರ್ಶನಗಳು ಬರುತ್ತಿದ್ದುದೇ ಅಪರೂಪ. ಹೀಗಾಗಿ ಇಂದು ಅಶ್ವಥ್ ಬಗ್ಗೆ ಶ್ರದ್ಧಾಂಜಲಿ ಬರೆಯಲು ಕುಳಿತರೆ ಅವರು ಸರಳ, ಅತ್ಯಂತ ಶಿಸ್ತಿನ ಮನುಷ್ಯ, ನಿರ್ಮಾಪಕ ಸಂತೋಷದಿಂದ ಹೆಚ್ಚು ಸಂಭಾವನೆಯನ್ನು ನೀಡಿದರೂ ಅದನ್ನು ಹಿಂತಿರುಗಿಸುತ್ತಿದ್ದ ಪ್ರಾಮಾಣಿಕ ಎಂದಷ್ಟೇ ಬರೆಯುವಂತಾಗಿದೆ. ಇದಕ್ಕೆ ಮಿಗಿಲಾದ ಪ್ರತಿಭೆ ಮತ್ತು ವ್ಯಕ್ತಿತ್ವವನ್ನು ಹೊಂದಿರುವ ಅಶ್ವಥ್‌ಗೆ ಸಿಗಬೇಕಾದ ಗೌರವ ಮತ್ತು ಮರ್ಯಾದೆ ಬರಹ ರೂಪದಲ್ಲಿ ಸಿಕ್ಕಿಲ್ಲವೆಂದೇ ಹೇಳಬೇಕಾಗುತ್ತದೆ. ಇದು ಅಶ್ವಥ್ ಒಬ್ಬರ ಕಥೆಯಲ್ಲ ಬಹುತೇಕ ಎಲ್ಲಾ ಪೋಷಕ ನಟ-ನಟಿಯರ ಕಥೆಯೂ ಆಗಿದೆ.

ನಮ್ಮ ಪೋಷಕ ನಟ-ನಟಿಯರಲ್ಲಿರುವ ಕೀಳರಿಮೆ ಮತ್ತು ಅತಿಯಾಗಿ ತಮಗೆ ತಾವೇ ಹಾಕಿಕೊಂಡ ಶಿಸ್ತಿನ ಗೆರೆಯೂ ಕೂಡ ಇದಕ್ಕೆ ಕಾರಣವೆನ್ನಬಹುದು. ಅಶ್ವಥ್‌ರವರು ಎಂದೂ ತಾವಾಗಿಯೇ ಪತ್ರಕರ್ತರೊಂದಿಗೆ ಮಾತಾಡಿದವರೇ ಅಲ್ಲ; ಲೋಕಾಭಿರಾಮವಾಗಿ ಮನಬಿಚ್ಚಿ ಮಾತನಾಡಿದ ಘಟನೆಯಂತೂ ತೀರಾ ವಿರಳ. ಪತ್ರಕರ್ತರು ಕೇಳಿದ ಪ್ರಶ್ನೆಗೆ ಅಷ್ಟೇ ಉತ್ತರ ನೀಡುವುದು ಅವರ ಜಾಯಮಾನವಾಗಿತ್ತು. ಸಾಧಾರಣವಾಗಿ ಮಸಾಲೆ, ವಿವಾದ ಅಥವಾ ವರ್ಣರಂಜಿತ ವರದಿಗಳನ್ನು ಅಪೇಕ್ಷಿಸುವ ಪತ್ರಕರ್ತರಿಗೆ ಅಶ್ವಥ್ ಯಾವಾಗಲೂ ನಿರಾಶೆ ಮೂಡಿಸುತ್ತಿದ್ದರು. ಹೀಗಾಗಿ ಅಶ್ವಥ್ ಎಂದರೆ ಪತ್ರಕರ್ತರಿಗೂ ಅಷ್ಟಕಷ್ಟೆಯಾಗಿದ್ದರು.

ಆದರೂ ಉದ್ಯಮದವರ ಮತ್ತು ಮಾಧ್ಯಮದವರ ನಿರಾಸಕ್ತಿಯ ಹೊರತಾಗಿ ಅಶ್ವಥ್ ಇಷ್ಟು ಎತ್ತರಕ್ಕೆ ಏರಿದ್ದರೆಂದರೆ, ಅದು ಅವರು ನಿರ್ವಹಿಸಿದ ಪಾತ್ರಗಳಿಂದ ಮಾತ್ರ ಎಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ಅದರ ಜೊತೆಗೆ ಕೃತಕ ಮತ್ತು ಕಾಲೆಳೆಯುವ ಜನರೇ ತುಂಬಿರುವ ಸಿನಿಮಾ ಲೋಕದಲ್ಲಿದ್ದರೂ ಅಶ್ವಥ್ ಸಿನಿಮಾ ಜನರ ತರಹ ಬದುಕದೇ ಸಜ್ಜನಿಕೆ ಮತ್ತು ಸರಳತನವನ್ನು ಮೈಗೂಡಿಸಿಕೊಂಡದ್ದು ಕೂಡಾ ಅವರ ಬೆಳವಣಿಗೆಗೆ ಕಾರಣವಾಯಿತೆನ್ನಬಹುದು.

ಕಳೆದ ಐದು ದಶಕಗಳಿಂದ ಚಿತ್ರರಂಗದಲ್ಲಿದ್ದರೂ ಅವರ ಅತಿಯಾದ ಶಿಸ್ತು ಕಿರಿಕಿರಿ ಮಾಡಿತ್ತೇ ವಿನಃ ಬೇರೆ ವಿವಾದಗಳಲ್ಲಿ ಅವರು ಕಾಣಿಸಿದ್ದೇ ಇಲ್ಲ. ಅದ್ಯಾವಾಗಲೋ ಒಮ್ಮೆ ಪಂಡರಿಬಾಯಿ ಮತ್ತು ಅಶ್ವಥ್ ಗುಪ್‌ಚುಪ್ ಅಂತೆ ಎಂಬ ಗಾಳಿ ಸುದ್ದಿ ಬಂದಿದ್ದರೂ ಅದನ್ಯಾರೂ ನಂಬಲೇ ಇಲ್ಲ. ತೀರಾ ಇತ್ತೀಚೆಗೆ ಚಿತ್ರರಂಗದ ಹೊಸಬರು ತಮಗೆ ಗೌರವ ನೀಡುತ್ತಿಲ್ಲ, ನನಗೆ ಈ ವಾತಾವರಣ ಹೊಂದುತ್ತಿಲ್ಲ ಎಂದು ಮುನಿಸಿಕೊಂಡ ಅಶ್ವಥ್ ನಟನೆಗೆ ವಿದಾಯ ಹೇಳಿ ಮೈಸೂರಿಗೆ ಹೊರಟುಹೋಗಿದ್ದರು. ಆ ಸಂದರ್ಭದಲ್ಲಿ ಡಾ.ರಾಜ್ ಒತ್ತಾಯಮಾಡಿ ಮತ್ತೇ ಅವರು ಮುಖಕ್ಕೆ ಬಣ್ಣ ಹಚ್ಚುವಂತೆ ಮಾಡಿದ್ದರು.

ಯಾವುದೇ ಕೆಟ್ಟ ಅಭ್ಯಾಸ, ಚಟಗಳಿಲ್ಲದಿದ್ದರೂ 370ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದ ಅಶ್ವಥ್ ಕೊನೆಕೊನೆಗೆ ಆರ್ಥಿಕ ದುಸ್ಥಿತಿಯನ್ನೆದುರಿಸುತ್ತಿದ್ದರು ಎಂದರೆ ನಂಬಲಸಾಧ್ಯ. ಯಾವತ್ತೂ ಬಿಟ್ಟಿ ಕಾಸನ್ನು ಪಡೆಯಲು ಕೈಯೊಡ್ಡದ ಅಶ್ವಥ್ ಕೊನೆ ಕಾಲದಲ್ಲಿ ಸಮಾಜ ಮತ್ತು ಸರ್ಕಾರದಿಂದ ಹಣವನ್ನು ಸ್ವೀಕರಿಸಬೇಕಾಗಿ ಬಂದದ್ದು ಅವರ ವೃತ್ತಿ ಜೀವನದ ವೈರುಧ್ಯಗಳಲ್ಲೊಂದು!

ಕಡೆಯದಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ ಸಿನಿಮಾ ಎಂಬ ಸಂತೆಯಲ್ಲಿ ಸಂತನಂತೆ ಶಿಸ್ತು ಸರಳತೆ ಮತ್ತು ಸ್ವಾಭಿಮಾನದಿಂದ ಬದುಕಿ ಬಾಳಿದ ಅಶ್ವಥ್. ಈ ಎಲ್ಲಾ ಕಾರಣಕ್ಕಾಗಿ ಬಹುಕಾಲ ನಮ್ಮೆಲ್ಲರ ನೆನಪಿನಂಗಳದಲ್ಲಿ ಇದ್ದೇ ಇರುತ್ತಾರೆ. ಅಸ್ತಂಗತವಾದ ಅಶ್ವಥ್‌ರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ....

● ಸದಾಶಿವ ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44